ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಆಗಸ್ಟ್ 6 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 112 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪುಲ್ವಾಮಾ ಹುತಾತ್ಮ ವೀರ ಯೋಧನ ವಿಧವಾ ಪತ್ನಿಗೆ ನಿವೇಶನ ನೀಡಲು ಮುಡಾ ನಕಾರ; ಇನ್ನಾರಿಗಾದೆಯೋ...!



● ಶೇ.50:50ರ ಅನುಪಾತದಡಿ ಸಾವಿರಾರು ಕೋಟಿ ಮೌಲ್ಯದ ನಿವೇಶನಗಳ ಕಾನೂನುಬಾಹಿರವಾಗಿ ಕಂಡ ಕಂಡವರಿಗೆ ಕಳ್ಳೇಪುರಿಯಂತೆ ಹಂಚಿರುವ ಮುಡಾ ಅಧಿಕಾರಿಗಳು ● ದೇಶಕ್ಕಾಗಿ ಪ್ರಾಣ ತೆತ್ತ ಹುತಾತ್ಮನ ವಿಧವಾ ಪತ್ನಿ ವಿಚಾರದಲ್ಲಿ ದಯೆ ತೋರದ ಮುಡಾ ಅಸ್ತಿತ್ವವನ್ನೇ ಪ್ರಶ್ನಿಸುವಂತಿದೆ!

ಮೈಸೂರು, ಆ. 5(ಆರ್‌ಕೆ)– ನಿಯಮಗಳನ್ನು ಗಾಳಿಗೆ ತೂರಿ ಅಕ್ರಮವಾಗಿ ಸಾವಿರಾರು ಕೋಟಿ ರೂ. ಬೆಲೆ ಬಾಳುವ ನಿವೇಶನಗಳನ್ನು ಮನಸ್ಸೋ ಇಚ್ಛೆ ಪರಭಾರೆ ಮಾಡಿ ಬ್ರಹ್ಮಾಂಡ ಭ್ರಷ್ಟಾಚಾರ ವೆಸಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳು, ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ನಮ್ಮ ವೀರಯೋಧನ ವಿಧವಾ ಪತ್ನಿಗೆ ನಿವೇಶನ ನೀಡದೇ ಇರುವ, ಅತ್ಯಂತ ನೋವಿನ ಸಂಗತಿ ಬೆಳಕಿಗೆ ಬಂದಿದೆ.

ಶೇ.50:0ರ ಅನುಪಾತದಡಿ ಮೈಸೂರು ನಗರದ 23 ವಸತಿ ■ 6ನೇ ಪುಟಕ್ಕೆ



ಹುತಾತ್ಮ ಹೆಚ್.ಗುರು



ಪತ್ನಿ ಎಸ್.ಕಲಾವತಿ

ದಯೆ ಇಲ್ಲದ ಮುಡಾ ಅಧಿಕಾರಿ ವರ್ಗ

ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರ ವಿಧವಾ ಪತ್ನಿ, ಮತ್ತವರ ಕುಟುಂಬದ ಭವಿಷ್ಯದ ಬಗ್ಗೆ ಮಾನವೀಯತೆ ತೋರದ ಅಧಿಕಾರಿ ವರ್ಗದ ನಡವಳಿಕೆಯನ್ನು ನಮ್ಮ ಓದುಗರು ಹಾಗೂ ಸರ್ಕಾರಿ ಅಧಿಕಾರಿಗಳಿಗೆ ಈ ಒಂದು ಸಂಗತಿಯ ನೆನಪಿಸಲೇಬೇಕು. 1999ರ ಕಾರ್ಗಿಲ್ ಯುದ್ಧದ ವೀರರು ಹಾಗೂ ಯುದ್ಧದಲ್ಲಿ ಹುತಾತ್ಮರಾದ ಯೋಧರ ವಿಧವಾ ಪತ್ನಿಯರಿಗಾಗಿ ದಕ್ಷಿಣ ಮುಂಬೈನ ಕೊಲಾಬಾದಲ್ಲಿ ಆದರ್ಶ್ ಹೌಸಿಂಗ್ ಸೊಸೈಟಿ ಎಂದು ಕರೆಯಲ್ಪಡುವ 31 ಅಂತಸ್ತಿನ ಅಪಾರ್ಟ್‌ಮೆಂಟ್ ಅನ್ನು ನಿರ್ಮಿಸಲಾಯಿತು. ರಾಜಕಾರಣಿಗಳು, ಅಧಿಕಾರಿ ವರ್ಗ ಮತ್ತು ಮಿಲಿಟರಿ ಅಧಿಕಾರಿಗಳು, ಭೂ ಮಾಲೀಕತ್ವ ಮತ್ತು ಇತರ ಮಾನದಂಡಗಳಿಗೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸಿ ತಮಗೆ ಹಾಗೂ ತಮ್ಮ ಸಂಬಂಧಿಕರಿಗೆ ಇಲ್ಲಿ ಫ್ಲ್ಯಾಟ್‌ಗಳನ್ನು ಮಂಜೂರು ಮಾಡಿಕೊಂಡಿರುವುದು 2010ರಲ್ಲಿ ಬಹಿರಂಗಗೊಂಡಿತು. ಅಯ್ಯೋ ಪಾಪ, ಕಾರ್ಗಿಲ್ ಸಮರ ವೀರರು ಹಾಗೂ ಈ ಯುದ್ಧದಲ್ಲಿ ಹುತಾತ್ಮರಾದ ಯೋಧರ ವಿಧವಾ ಪತ್ನಿಯರಿಗೆ ಏನೂ ಸಿಗಲಿಲ್ಲ. ನಮ್ಮ ದೇಶಕ್ಕಾಗಿ ಪ್ರಾಣ ವನ್ನೇ ಅರ್ಪಿಸಿದವರ ಬಗ್ಗೆ ಒಬ್ಬರಿಗೂ ಕರುಣೆ ಇಲ್ಲದೇ ಹೀಗೆ ಕ್ರೂರಿಗಳಾಗಲು ಸಾಧ್ಯವೇ? ಈ ಮುಡಾ ಪ್ರಕರಣ ಕೂಡ ಗಂಭೀರವಾದ ಕಳಕಳಿ ಅಂಶ ಹೊಂದಿದೆ. ಮುಂಬೈನ ಆದರ್ಶ್ ಹೌಸಿಂಗ್ ಸೊಸೈಟಿ ಪ್ರಕರಣದಲ್ಲಿ ಅಂದು ಅಲ್ಲಿನ ಮುಖ್ಯಮಂತ್ರಿ ಅಶೋಕ್ ಚವಾಣ್ ರಾಜೀನಾಮೆ ನೀಡಬೇಕಾಯಿತು. ದುಃಖಕರ ಸಂಗತಿಯೆಂದರೆ ಕರ್ನಾಟಕದ ವಿಚಾರದಲ್ಲಿ ಯಾವುದೇ ತಲೆದಂಡ ಆಗುವುದಿಲ್ಲ. –ಸಂ

ವಾಲ್ಮೀಕಿ ಹಗರಣ: ಮತ್ತೆ 7.5 ಕೋಟಿ ಹಣ ಜಪ್ತಿ

ನಾಗೇಂದ್ರ ನ್ಯಾಯಾಂಗ ಬಂಧನ ವಿಸ್ತರಣೆ

ಬೆಂಗಳೂರು: ವಾಲ್ಮೀಕಿ ನಿಗಮದ ಬಹುಕೋಟಿ ಹಗರಣ ಕೇಸ್‌ಗೆ ಸಂಬಂಧಿಸಿದಂತೆ ಇತ್ತ ಚಾರ್ಜ್‌ಶೀಟ್ ಸಲ್ಲಿಸಿರುವ ವಿಶೇಷ ತನಿಖಾ ತಂಡ ತನ್ನ ಬೇಟೆಯನ್ನು ಮುಂದುವರಿಸಿದೆ. ಸೋಮವಾರ (ಆ.5) ಮತ್ತೆ 7.5 ಕೋಟಿ ರೂ.ಗಳನ್ನು ಜಪ್ತಿ ಮಾಡಿದೆ.

ಫಸ್ಟ್ ಫಿನಾನ್ಸ್ ಬ್ಯಾಂಕ್‌ನ ಅಧ್ಯಕ್ಷ ಸತ್ಯನಾರಾಯಣ ಇಟ್ಕಾರಿ ಬಳಿ ಹಣವನ್ನು ವಶಕ್ಕೆ ಪಡೆದಿದ್ದಾರೆ. ಆರ್‌ಬಿಎಲ್ ಬ್ಯಾಂಕ್‌ನಲ್ಲಿದ್ದ ಇಟ್ಕಾರಿ ಖಾತೆಯಿಂದಲೇ ಹಣವನ್ನು ಜಪ್ತಿ ಮಾಡಿದ್ದಾರೆ. ಈ ಮೂಲಕ ಈವರೆಗೆ ಎಸ್‌ಐಟಿ ಒಟ್ಟು 57 ಕೋಟಿ ರೂ.ಗಳನ್ನು ಜಪ್ತಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ನಾಗೇಂದ್ರ ನ್ಯಾಯಾಂಗ ಬಂಧನ ವಿಸ್ತರಣೆ: ವಾಲ್ಮೀಕಿ ನಿಗಮದ ಬಹುಕೋಟಿ ಹಗರಣ ಕೇಸ್‌ನಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿರುವ ಕಾಂಗ್ರೆಸ್ ಮಾಜಿ ಸಚಿವ ಬಿ.ಎನ್ ನಾಗೇಂದ್ರ ಅವರ ನ್ಯಾಯಾಂಗ ಬಂಧನ ವಿಸ್ತರಣೆ ಆಗಿದೆ.

ಮುಡಾ ನಿವೇಶನ ಹಗರಣ

ರಾಜ್ಯಪಾಲರ ನಿರ್ಣಯ ನಿಗೂಢ!

● ಹಾಲಿ ನ್ಯಾಯಮೂರ್ತಿಗಳಿಂದ ತನಿಖೆಯೂ ಸೇರಿದಂತೆ ಹಲವು ಕೋನಗಳಿಂದ ಚಿಂತನೆ ● ರಾಜ್ಯಪಾಲರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆಯೊಂದಿಗೆ ಸಂಪುಟದ ತೀರ್ಮಾನ, ಕೆಲ ದಾಖಲೆ ಪತ್ರ ಸಲ್ಲಿಕೆ

ಬೆಂಗಳೂರು, ಆ.5(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶೇ.50:50 ಅನುಪಾತದಡಿ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ ನಿವೇಶನಗಳ ಹಂಚಿಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅವರಿಂದ ತನಿಖೆ ನಡೆಸುವುದೂ ಸೇರಿದಂತೆ ಹಲವು ವಿಚಾರಗಳ ಕುರಿತು ರಾಜ್ಯಪಾಲರು ಸಮಾಲೋಚನೆ ನಡೆಸಿದ್ದಾರೆ. ಕಳೆದ ಐದಾರು ದಿನಗಳಿಂದ ದೆಹಲಿ ಪ್ರವಾಸ ದಲ್ಲಿದ್ದ ರಾಜ್ಯಪಾಲರು ಇಂದು ನಗರಕ್ಕೆ ಹಿಂತಿರುಗುತ್ತಿದ್ದಂತೆ ಹಿರಿಯ ಅಧಿಕಾರಿಗಳು ಮತ್ತು ಕಾನೂನು ತಜ್ಞರ ಜೊತೆ ಚರ್ಚೆ ನಡೆಸಿದ್ದಾರೆ. ಹಗರಣಕ್ಕೆ ಸಂಬಂಧಿಸಿದಂತೆ ರೈತ ಸಂಘಟನಾ ಒಕ್ಕೂಟ ಹಾಗೂ ಟಿ.ಜೆ.ಅಬ್ರಹಾಂ ನೀಡಿರುವ ದೂರು ಆಧರಿಸಿ ರಾಜ್ಯಪಾಲರು ಈಗಾಗಲೇ ಸರ್ಕಾರದ ಮುಖ್ಯ ಕಾರ್ಯದರ್ಶಿ ಮೂಲಕ ಮುಖ್ಯಮಂತ್ರಿ ಅವರಿಗೆ ನೋಟಿಸ್ ನೀಡಿದ್ದರು. ರಾಜ್ಯಪಾಲರ ನೋಟಿಸ್‌ಗೆ ಸಂಬಂಧಿಸಿದಂತೆ ಸರ್ಕಾರ ಮೂರು ಪ್ರತ್ಯೇಕ ಪತ್ರಗಳನ್ನು ಬರೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವತಃ ಮುಖ್ಯಮಂತ್ರಿ ಅವರೇ ರಾಜ್ಯಪಾಲರಿಗೆ ವಿವರಣೆ ನೀಡಿದ್ದು, ಇದರ ಜೊತೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನೋಟಿಸ್ ಅನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ತೆಗೆದುಕೊಂಡ ನಿರ್ಣಯ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ಕಳುಹಿಸಲಾಗಿತ್ತು.

ಅಲ್ಲದೆ, ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅವರ ಸಂಪುಟದಲ್ಲಿದ್ದ ಮುರುಗೇಶ್ ನಿರಾಣಿ, ಕೆ.ಸುಧಾಕರ್, ಶಶಿಕಲಾ ಜೊಲ್ಲೆ ಸೇರಿದಂತೆ ■ 9ನೇ ಪುಟಕ್ಕೆ



ಗೆಹ್ಲೋಟ್



ಸಿದ್ದರಾಮಯ್ಯ

ರಾಜ್ಯಪಾಲರ ತೀರ್ಮಾನ ಕಾದು ನೋಡುತ್ತೇವೆ

ಬೆಂಗಳೂರು: ಮುಡಾ ಪ್ರಕರಣವನ್ನು ಕಾನೂನಾತ್ಮಕ ಹಾಗೂ ರಾಜಕೀಯವಾಗಿಯೂ ಯಶಸ್ವಿಯಾಗಿ ಎದುರಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರು ನೀಡಿರುವ ಶೋಕಾಸ್ ನೋಟಿಸ್ ಹಿಂತೆಗೆದುಕೊಳ್ಳಬೇಕು. ಅದೇ ರೀತಿ ರಾಜ್ಯಪಾಲರಿಗೆ ಟಿ.ಜೆ.ಅಬ್ರಹಾಂ ನೀಡಿರುವ ದೂರನ್ನೂ ತಿರಸ್ಕರಿಸಬೇಕು ಎಂದು ಮನವಿ ಮಾಡಿದ್ದೇವೆ ಎಂದರು. ಈ ಕುರಿತು ರಾಜ್ಯಪಾಲರು ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡುವುದಾಗಿಯೂ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಗೆ ಅಭಿನಂದನೆ...



ಮೇಘಾಲಯದ ರಾಜ್ಯಪಾಲರಾದ ಮೈಸೂರಿನ ಮಾಜಿ ಸಂಸದ ಸಿ.ಹೆಚ್.ವಿಜಯ ಶಂಕರ್ ಅವರು ಶನಿವಾರ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೌಜನ್ಯಯುತವಾಗಿ ಭೇಟಿಯಾಗಿದ್ದರು.

ಚಾಮುಂಡೇಶ್ವರಿಗೆ ವಿಶೇಷ ಪೂಜೆ; ಹೂವಿನ ಅಲಂಕಾರ



ಮೈಸೂರಿನ ಸುಮಯ ಪ್ರಾಪರ್ಟೀಸ್ ವತಿಯಿಂದ ಆಷಾಢ ಮಾಸದ ನಾಲ್ಕು ಶುಕ್ರವಾರ ಲಲಿತಾದ್ರಿಪುರ ಬೆಟ್ಟದ ತಪ್ಪಲಿನಲ್ಲಿರುವ ತಾಯಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ವಿಶೇಷ ಹೂವಿನ ಅಲಂಕಾರ, ಪೂಜೆ ಹಾಗೂ ಬರುವ ಭಕ್ತಾದಿಗಳಿಗೆ ಅನ್ನದಾನವನ್ನು ಏರ್ಪಡಿಸಲಾಗಿತ್ತು. ಈ ವೇಳೆ ಮಾಜಿ ಸಚಿವರಾದ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಸುಮಯ ಪ್ರಾಪರ್ಟೀಸ್‌ನ ಮಾಲೀಕರಾದ ಸುಧೀ ಎಸ್ ಶೆಟ್ಟಿ ಹಾಗೂ ಸಿಬ್ಬಂದಿವರ್ಗ ಭಾಗವಹಿಸಿ, ದೇವಿ ಕೃಪೆಗೆ ಪಾತ್ರರಾದರು.

ಹುಟ್ಟುಹಬ್ಬ ಶುಭಾಶಯ...



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರಿಗೆ ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಜಿ ಮಂಜುಗೌಡ ಹುಟ್ಟುಹಬ್ಬದ ಶುಭ ಕೋರಿದರು. ಈ ವೇಳೆ ಸುಜಿತ್‌ಕುಮಾರ್, ಪ್ರದೀಪ್‌ಸಿಂಗ್, ಸಂಪತ್, ಸಾಗರ್‌ಗೌಡ ಇತರರಿದ್ದರು

ಇಂಡಿಯನ್ ಟಿವಿ ಮುಖ್ಯಸ್ಥರ ಪುತ್ರಿ ಅತೀವ ಆಯುಸಿರಿ ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆ




ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆಯಾದ ಪುಟಾಣಿ ಅತೀವ ಆಯುಸಿರಿ ಜೊತೆ ಇಂಡಿಯನ್ ಟಿವಿ ಮುಖ್ಯಸ್ಥ ಎಸ್.ಬಸವರಾಜು ಕುಟುಂಬಸ್ಥರನ್ನು ಕಾಣಬಹುದು.

ಮೈಸೂರು, ಆ.5(ಎಂಕೆ)– ಚಟಪಟನೆ ಹತ್ತಾರು ಪ್ರಶ್ನೆಗಳಿಗೆ ಉತ್ತರಿಸಿ ತನ್ನ ಬುದ್ಧಿ ಸಾಮರ್ಥ್ಯ ತೋರಿದ ಕೇವಲ ಎರಡೂವರೆ ವರ್ಷದ ಮೈಸೂರಿನ ಪುಟಾಣಿ, ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ಸಾಧಕರ ಸಾಲಿಗೆ ಸೇರಿದ್ದಾರೆ...!

ಬಸವಮಾರ್ಗ ಫೌಂಡೇಶನ್ ಸಂಸ್ಥಾಪಕ ಹಾಗೂ ಇಂಡಿಯನ್ ಟಿವಿ ಮುಖ್ಯಸ್ಥ ಎಸ್.ಬಸವರಾಜು ಹಾಗೂ ಸುಚಿತ್ರ ದಂಪತಿ ಪುತ್ರಿ, ಎರಡೂವರೆ ವರ್ಷದ ಅತೀವ ಆಯುಸಿರಿ, ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ಸಾಧಕರ ಸಾಲಿಗೆ ಸೇರಿದ್ದಾಳೆ.


ಇಂಡಿಯಾ ಬುಕ್ ಆಫ್ ರೆಕಾರ್ಡ್ ನಡೆಸಿದ ಸ್ಪರ್ಧೆಯಲ್ಲಿ ತನ್ನ ಬುದ್ಧಿ ಸಾಮರ್ಥ್ಯ ತೋರಿರುವ ಅತೀವ ಆಯುಸಿರಿ, ದೇಹದ 21 ಭಾಗಗಳು, 20 ಪ್ರಾಣಿಗಳು, 10 ಬಗೆಯ ವಾಹನಗಳು, ಪ್ಲಜ್ ಬೋರ್ಡ್ ಜೋಡಣೆ, 10 ಬಗೆಯ ಯೋಗಾಸನಗಳ ಪ್ರದರ್ಶನ, ಪ್ರಾಣಿ–ಪಕ್ಷಿಗಳ ದನಿ ಅನುಕರಣೆ, ತಿಂಗಳು, ವಾರಗಳು, ಏಳು ಖಂಡಗಳು, ಎಂಟು ಪ್ಲಾನೆಟ್‌ಗಳು, ಹತ್ತು ಜನರಲ್ ನಾಲೆಡ್ಜ್ ಪ್ರಶ್ನೆಗಳು, ಇಂಗ್ಲಿಷ್ ಪದ್ಯ, ವರ್ಣಮಾಲೆ ಹೀಗೆ ಇದ್ದ ಎಲ್ಲ ಸ್ಪರ್ಧೆಗಳಲ್ಲಿಯೂ ಅತೀವ ಆಯುಸಿರಿ ಸರಿ ಉತ್ತರ ನೀಡಿ ವಿಜೇತಳಾಗಿದ್ದಾಳೆ. ಪುಟಾಣಿ ಸಾಧನೆಗೆ ಎಂ.ಸೋನಿ ಕರೀಗೌಡರ ಕುಟುಂಬಸ್ಥರು ಅಭಿನಂದಿಸಿದ್ದಾರೆ.

ಬಿಜೆಪಿ–ಜೆಡಿಎಸ್ ಮೈಸೂರು ಚಲೋ...



ಬಿಜೆಪಿ ಮತ್ತು ಜೆಡಿಎಸ್ ನಡೆಸುತ್ತಿರುವ ಮೈಸೂರು ಚಲೋ ಪಾದಯಾತ್ರೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್, ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ, ಶಾಸಕ ಜಿ.ಡಿ. ಹರೀಶ್‌ಗೌಡರ ಜೊತೆ ಮೈಸೂರಿನ ಕಾರ್ಪೋರೇಟರ್ ಕೆ.ವಿ. ಶ್ರೀಧರ್ ಹೆಜ್ಜೆ ಹಾಕಿದರು.

ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್‌ಗೆ ಎಂ.ಬಿ.ಮಂಜುನಾಥ ಅಧ್ಯಕ್ಷ



ಎಂ.ಬಿ.ಮಂಜುನಾಥ



ಕೆ.ಬಿ.ಕಾಳೇಗೌಡ



ಶ್ರೀನಿವಾಸ್

ಮೈಸೂರು,ಆ.5– ಮೈಸೂರಿನ ಹನುಮಂತನಗರ, ಬನ್ನಿಮಂಟಪ ಬಡಾವಣೆಯಲ್ಲಿರುವ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದ ಟ್ರಸ್ಟ್‌ಗೆ ಅಧ್ಯಕ್ಷರಾಗಿ ಎಂ.ಬಿ.ಮಂಜುನಾಥ, ಖಜಾಂಚಿಯಾಗಿ ಕೆ.ಬಿ.ಕಾಳೇಗೌಡ ಹಾಗೂ ಕಾರ್ಯದರ್ಶಿಯಾಗಿ ಹೆಚ್.ಎನ್.ಶ್ರೀನಿವಾಸ್ (ಸುರೇಶ್) ಅವರನ್ನು ಭಾನುವಾರ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಧನ



ಪುಟ್ಟತಾಯಮ್ಮ

ಮೈಸೂರು: ತಾಲೂಕಿನ ಜಯಪುರ ಗ್ರಾಮದ ಮಹದೇವೇಗೌಡರ ಪತ್ನಿ ಪುಟ್ಟತಾಯಮ್ಮ (70) ಭಾನುವಾರ ಸಂಜೆ ನಿಧನರಾದರು. ಇವರು ಜಯಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಹಾಗೂ ಹಾಲಿ ಸದಸ್ಯ ಎಂ.ನಾಗರಾಜು ಸೇರಿದಂತೆ ನಾಲ್ವರು ಪುತ್ರರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಜಯಪುರ ಗ್ರಾಮದ ಅವರ ಜಮೀನಿನಲ್ಲಿ ನಡೆಯಿತು ಎಂದು ಮೂಲಗಳು ತಿಳಿಸಿವೆ.

ದೊಡ್ಡ ಉದ್ದಿಮೆದಾರರಿಂದ ತೆರಿಗೆ ಸಂಗ್ರಹ ಸವಾಲಿನ ಸಂಗತಿ

ರಾಷ್ಟ್ರೀಯ ತೆರಿಗೆ ಸಲಹೆಗಾರರ ಸಮಾವೇಶದಲ್ಲಿ ಉದ್ಯಮಿ ಸುಧಾಕರ ಶೆಟ್ಟಿ ಅಭಿಮತ

ಮೈಸೂರು,ಆ.5(ಜಿಎಲ್‌ಯು)– ದೊಡ್ಡ ಉದ್ದಿಮೆದಾರರಿಂದ ತೆರಿಗೆ ಸಂಗ್ರಹಿಸುವುದು ದೊಡ್ಡ ಸವಾಲಾಗಿದೆ ಎಂದು ಮೈಸೂರಿನ ಜ್ಞಾನ ಸರೋವರ ಅಂತರಾಷ್ಟ್ರೀಯ ವಸತಿ ಶಾಲೆಯ ಅಧ್ಯಕ್ಷರೂ ಆದ ಖ್ಯಾತ ಉದ್ಯಮಿ ಸುಧಾಕರ ಎಸ್.ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಹೋಟೆಲ್ ಲಿ ರುಚಿ ದಿ ಪ್ರಿನ್ಸ್‌ನಲ್ಲಿ ಇಂದು ಅಖಿಲ ಭಾರತ ತೆರಿಗೆ ಸಲಹೆಗಾರರ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ ಸಂಯುಕ್ತವಾಗಿ ಆಯೋಜಿಸಿದ್ದ ರಾಷ್ಟ್ರೀಯ ತೆರಿಗೆ ಸಲಹೆಗಾರರ ಎರಡನೇ ದಿನದ ಸಮಾವೇಶದಲ್ಲಿ ಮಾತನಾಡಿದ ಅವರು, ಕಾನೂನಿನ ಅರಿವಿಲ್ಲದೆ ಕೆಲವು ಜನರು ತೆರಿಗೆ ಪಾವತಿಸುತ್ತಾರೆ. ಆದರೆ ಕೆಲವು ಜನರಿಗೆ ಕಾನೂನಿನ ಬಗ್ಗೆ ಮಾಹಿತಿ ಇದ್ದರೂ ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುತ್ತಾರೆ ಎಂದು ಹೇಳಿದರು.

ಸಾಮಾನ್ಯ ಜನರು ಸಾವಿರ ರೂಪಾಯಿ ಇದ್ದರೂ ತೆರಿಗೆ ಪಾವತಿಸುತ್ತಾರೆ. ಆದರೆ ದೊಡ್ಡ ಉದ್ದಿಮೆದಾರರು ಕೋಟಿ ರೂಪಾಯಿ ತೆರಿಗೆ ಉಳಿಸಿಕೊಂಡಿದ್ದರೂ ಅವರು ಪಾವತಿ ಮಾಡುವುದಿಲ್ಲ. ಅವರಿಂದ ತೆರಿಗೆ ಸಂಗ್ರಹಿಸುವುದು ದೊಡ್ಡ ಸವಾಲಿನ ಸಂಗತಿ ಎಂದು ಹೇಳಿದರು.



ಮೈಸೂರಿನ ಹೋಟೆಲ್ ಲಿ ರುಚಿ ದಿ ಪ್ರಿನ್ಸ್‌ನಲ್ಲಿ ಸೋಮವಾರ ಅಖಿಲ ಭಾರತ ತೆರಿಗೆ ಸಲಹೆಗಾರರ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ ಸಂಯುಕ್ತವಾಗಿ ಆಯೋಜಿಸಿದ್ದ ರಾಷ್ಟ್ರೀಯ ತೆರಿಗೆ ಸಲಹೆಗಾರರ ಎರಡನೇ ದಿನದ ಸಮಾವೇಶವನ್ನು ಮೈಸೂರಿನ ಜ್ಞಾನ ಸರೋವರ ಅಂತಾರಾಷ್ಟ್ರೀಯ ವಸತಿ ಶಾಲೆಯ ಅಧ್ಯಕ್ಷ ಸುಧಾಕರ ಎಸ್.ಶೆಟ್ಟಿ ಉದ್ಘಾಟಿಸಿದರು.

ಆರೋಗ್ಯ, ವಿದ್ಯುತ್ ಸೇರಿದಂತೆ ಎಲ್ಲಾ ರೀತಿಯ ಸರ್ಕಾರದ ಸೌಲಭ್ಯಗಳು ಜನರು ಪಾವತಿ ಮಾಡುವ ತೆರಿಗೆಯಿಂದ ನೀಡಲಾಗುತ್ತಿದೆ. ಇದನ್ನು ಅರಿತು ಎಲ್ಲರೂ ತೆರಿಗೆ ಪಾವತಿ ಮಾಡಬೇಕು ಎಂದು ಸುಧಾಕರ ಶೆಟ್ಟಿ ಸಲಹೆ ನೀಡಿದರು.

ತೆರಿಗೆ ಸಲಹೆಗಾರರು ರಾಷ್ಟ್ರದ ಪ್ರಗತಿ ಹಾಗೂ ಗ್ರಾಹಕರ ಏಳಿಗೆಗೆ ಶ್ರಮಿಸಬೇಕು. ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ಈ ಮೂಲಕ ವೃತ್ತಿಪರ ಕೌಶಲ ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ತೆರಿಗೆ ಸಲಹೆಗಾರರು ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಈ ಹಿನ್ನೆಲೆ ಬೇರೆ ಕ್ಷೇತ್ರಗಳಂತೆ ತೆರಿಗೆ ಸಲಹೆಗಾರರಿಗೂ ಸರ್ಕಾರ ವಿಮಾ ಸೌಲಭ್ಯ ಕಲ್ಪಿಸಬೇಕು ಎಂದು ಸುಧಾಕರ ಶೆಟ್ಟಿ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಜಿಎಸ್‌ಟಿ ಸಂಗ್ರಹದಲ್ಲಿ ಇಡೀ ಭಾರತದಲ್ಲೇ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಇದು ಕರ್ನಾಟಕದ ಆರ್ಥಿಕ ಬೆಳವಣಿಗೆಯನ್ನು ಬಿಂಬಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಎಫ್ ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ, ಎಐಎಫ್‌ಐಪಿ ರಾಷ್ಟ್ರೀಯ ಅಧ್ಯಕ್ಷ ನಾರಾಯಣ ಪ್ರಸಾದ್ ಜೈನ್, ಕೆಎಸ್‌ಹೆಚ್ಎ ಅಧ್ಯಕ್ಷ ಜಿ.ಕೆ.ಶೆಟ್ಟಿ, ಅಖಿಲ ಭಾರತ ತೆರಿಗೆ ಸಲಹೆಗಾರರ ಒಕ್ಕೂಟದ ದಕ್ಷಿಣ ವಲಯ ಉಪಾಧ್ಯಕ್ಷ ಡಿ.ಎಂ.ಭತ್ತಡ್, ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಮುಕುಂದ ಪೋತ್ನಿಸ್, ಮೈಸೂರು ಘಟಕದ ಸುದರ್ಶನ್, ಎಸ್.ಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

ಕೆ.ಆರ್.ನಗರ, ಆ.5(ಎಂಕೆ)– ಇಲ್ಲಿನ ವಾಲ್ಮೀಕಿ ನಗರದ ಮನೆಯೊಂದರ ಬಾಗಿಲು ಮುರಿದು ಚಿನ್ನಾಭರಣ, ನಗದು ದೋಚಿರುವ ಘಟನೆ ನಡೆದಿದೆ.

ಇಲ್ಲಿನ ನಿವಾಸಿ ಜಯಲಕ್ಷ್ಮಿ(50) 4 ವರ್ಷಗಳಿಂದ ವಾಲ್ಮೀಕಿನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದು, ಇವರ ಪತಿ ದೆಹಲಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿರುವ ಹಿನ್ನೆಲೆ ಆಗಾಗ ದೆಹಲಿಗೆ ಹೋಗಿ ಬರಬೇಕಿದೆ. ಅದರಂತೆ ಜೂ.29 ರಂದು ಮನೆಗೆ ಬೀಗ ಹಾಕಿಕೊಂಡು ದೆಹಲಿ ಹೋಗಿದ್ದು, ಆ.3ರ ರಾತ್ರಿ ಮನೆ ಬಾಗಿಲು ಮುರಿದಿರುವ ಕುರಿತು ಅಕ್ಕ–ಪಕ್ಕದವರು ಮಾಹಿತಿ ನೀಡಿದ್ದರಿಂದ ವಾಪಸ್ ಬಂದು ನೋಡಿದಾಗ ಕಳ್ಳತವಾಗಿರುವುದು ಗೊತ್ತಾಗಿದೆ.

ಮನೆ ಬೀರುವಿನಲ್ಲಿಟ್ಟ 20 ಗ್ರಾಂ ತೂಕದ 5 ಉಂಗುರ, 7 ಗ್ರಾಂ ಚೈನ್, 15 ಗ್ರಾಂ ನೆಕ್ ಚೈನ್, 3 ಗ್ರಾಂ ಡಾಲರ್, 5 ಗ್ರಾಂ ಮಾಟಿ ಸೇರಿ 50 ಗ್ರಾಂ ಚಿನ್ನಾಭರಣ, 1.50 ಲಕ್ಷ ರೂ ಮೌಲ್ಯದ 3 ಕೆಜಿ ಬೆಳ್ಳಿ, 20 ಸಾವಿರ ರೂ. ಹೆಚ್‌ಎಂಟಿ ವಾಚ್, 2.50 ಲಕ್ಷ ರೂ. ಮೌಲ್ಯದ 10 ರೇಷ್ಮೆ ಸೀರೆಗಳು, 28 ಸಾವಿರ ರೂ. ಕಳವಾಗಿದೆ ಎಂದು ಕೆ.ಆರ್.ನಗರ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ ಪ್ರಶಿಕ್ಷಣಾರ್ಥಿಗಳಿಗೆ ಕಾರ್ಯಾಗಾರ



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೈಸರ್ಗಿಕ ಇತಿಹಾಸದ ವಿಭಾಗೀಯ ವಸ್ತುಸಂಗ್ರಹಾಲಯದಲ್ಲಿ ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ ಪ್ರಶಿಕ್ಷಣಾರ್ಥಿಗಳಿಗೆ ಎರಡು ದಿನದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಛಾಯಾದೇವಿ ಕಾಲೇಜಿನ ಪ್ರಾಂಶುಪಾಲ ಡಾ.ಅಂಥೋಣಿ ಪಾಲ್‌ರಾಜ್ ನೆರವೇರಿಸಿದರು. ವಸ್ತುಸಂಗ್ರಹಾಲಯದ ವಿಜ್ಞಾನಿಗಳಾದ ಡಾ.ವಿಜಯ್, ಡಾ.ಅರ್ಜುನ್ ಪ್ರಸಾದ್ ತಿವಾರಿ, ಯೋಗೇಶ್, ಅಭಿಷೇಕ್, ಅಧ್ಯಾಪಕರುಗಳಾದ ರೇಖಾ, ಪಂಪತೀರ್ಥ ಹಾಗೂ ಪ್ರಶಿಕ್ಷಣಾರ್ಥಿಗಳು ಈ ವೇಳೆ ಹಾಜರಿದ್ದರು.

ಶಾಸಕ ಕೆ.ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಶುಭಾಶಯಗಳು



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರಿಗೆ ಕನ್ನೇಗೌಡನಕೊಪ್ಪಲಿನ ಚಾಮುಂಡೇಶ್ವರಿ ದೇವಸ್ಥಾನದ ವತಿಯಿಂದ ಹುಟ್ಟುಹಬ್ಬದ ಅಂಗವಾಗಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಸಿ.ಮಾದೇಶ್, ದೇವಸ್ಥಾನದ ಧರ್ಮದರ್ಶಿ ನಿಂಗಪ್ಪ, ಗೌರವಾಧ್ಯಕ್ಷ ನಿಂಗಣ್ಣ, ಅಧ್ಯಕ್ಷ ಗಿರೀಶ್ ಡಿ ಗೌಡ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಕಾರ್ಯದರ್ಶಿ ಮಲ್ಲೇಗೌಡ, ಸಹಕಾರ್ಯದರ್ಶಿ ಬಿ.ಲಕ್ಷ್ಮಣ, ಮುಖಂಡರಾದ ಫಾಲ್ಕನ್ ರಾಜಣ್ಣ, ಕಾಳಬೋರಪ್ಪ, ದೀಪುಮ ಸತೀಶ್‌ಕುಮಾರ್, ದತ್ತು ರಾಜಕುಮಾರ್, ಚಂದ್ರು, ರವಿ, ಸಿದ್ದು, ಅರವಿಂದ್‌ನಗರ ರಾಜು, ಮೊಗಣ್ಣ, ನಾಗರಾಜು, ಗೋದ್ರೆಜ್ ಪುಟ್ಟರಾಜು, ನಾಗರಾಜ್, ಫೋಟೋ ಪಾಪಣ್ಣ, ನಾರಾಯಣ, ಕುಮಾರ್, ಸುರೇಶ್, ಸೊಸೈಟಿ ರಾಜು, ಬಾರ್ ಬೆಂಡಿಂಗ್ ಪುಟ್ಟರಾಜು, ಕೃಷ್ಣ, ಪುಟ್ಟರಾಜು ಇನ್ನಿತರರು ಉಪಸ್ಥಿತರಿದ್ದರು.

'ವರ್ಲ್ಡ್ ಪ್ರೆಸ್ ಬುಕ್ ಆಫ್ ರೆಕಾರ್ಡ್' ವಿಶ್ವ ದಾಖಲೆಗೆ ಸಿ.ವಾಣಿ ರಾಘವೇಂದ್ರ


ಮೈಸೂರು, ಆ. 5–ಕವಯತ್ರಿ, ಸಾಹಿತಿ ಹಾಗೂ ಸದ್ವಿವೇಕ ಶಾಲೆಯ ಶಿಕ್ಷಕಿ ಸಿ. ವಾಣಿ ರಾಘವೇಂದ್ರ ಅವರು 'ವರ್ಲ್ಡ್ ಪ್ರೆಸ್ ಬುಕ್ ಆಫ್ ರೆಕಾರ್ಡ್' ವಿಶ್ವ ದಾಖಲೆಗೆ ಸೇರ್ಪಡೆಯಾಗಿದ್ದಾರೆ. ಇವರು ಮೂಲತಃ ಕೊಡಗಿನವರಾಗಿದ್ದು, ಪ್ರಸ್ತುತ ಮೈಸೂರಿನಲ್ಲಿ ವಾಸಿಸುತ್ತಿದ್ದಾರೆ.

ಕನಕ ಅಧ್ಯಯನ ಪೀಠ, ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ; ಚೇತನ ಫೌಂಡೇಶನ್ ಕರ್ನಾಟಕ ಇದರ ಅಂಗಸಂಸ್ಥೆಯಾದ 'ವರ್ಲ್ಡ್ ಬುಕ್ ಆಫ್ ರೆಕಾರ್ಡ್' ವಿಶ್ವ ದಾಖಲೆಯ ಮಾಹಿತಿ ಸಂಗ್ರಹ ಸಂಸ್ಥೆಯು ಕಾವ್ಯಶ್ರೀ ಚಾರಿಟೆಬಲ್ ಟ್ರಸ್ಟ್ ಸಹಯೋಗದೊಂದಿಗೆ 24 ನಿಮಿಷಗಳಲ್ಲಿ ಆಯ್ದ ಕವಿಗಳಿಂದ ವಾಟ್ಸಾಪ್ ಮೂಲಕ ಏಕಕಾಲಕ್ಕೆ ಆಶು ಕವಿತೆ ಬರೆಯುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಸಿ.ವಾಣಿ ರಾಘವೇಂದ್ರ ಅವರು 24 ನಿಮಿಷಗಳ ಕಾಲದಲ್ಲಿ ಆಶು ಕವಿತೆ ಬರೆದು 'ವರ್ಲ್ಡ್ ಪ್ರೆಸ್ ಬುಕ್ ಆಫ್ ರೆಕಾರ್ಡ್'ಗೆ ಸೇರ್ಪಡೆಯಾಗಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಚಂದ್ರಶೇಖರ್ ಮಾಡಲಗೇರಿ ತಿಳಿಸಿದ್ದಾರೆ.



ಸಿ.ವಾಣಿ ರಾಘವೇಂದ್ರ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.08.2024 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024 ರಿಂದ 12.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ 7.30ರವರೆಗೆ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ಮತ್ತು ಬೆಳಗ್ಗೆ 9 ಗಂಟೆಯಿಂದ ಕರ್ಕಾಟಕ ಚಿಕಿತ್ಸಾ (ಮಾನ್‌ಸೂನ್) ವರ್ಷ ಋತುವಿನ ಕಾಲದ ವಿಶೇಷ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ.

■ **ವಿ. ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗ :** ಬೆಳಗ್ಗೆ 8ಕ್ಕೆ ವಿ. ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬದ ಸ್ಮರಣಾರ್ಥ ಛಾಯಾದೇವಿ ಅನಾಥಾಶ್ರಮ ಹಾಗೂ ವೃದ್ಧಾಶ್ರಮದಲ್ಲಿ ಬೆಳಗಿನ ಉಪಾಹಾರ ಹಾಗೂ ಮಧ್ಯಾಹ್ನ 12.30ಕ್ಕೆ ಸನ್ಮಾನ ಕಾರ್ಯಕ್ರಮ, ಉಪಸ್ಥಿತರು : ವಿ. ಶ್ರೀನಿವಾಸ ಪ್ರಸಾದ್ ಅವರ ಜ್ಯೇಷ್ಠ ಪುತ್ರಿ ಶ್ರೀಮತಿ ಪ್ರತಿಮಾ ಪ್ರಸಾದ್, ಮಾಜಿ ಶಾಸಕ ಹರ್ಷವರ್ಧನ್, ಸಂಜಯ್ ಗಾಂಧಿ ಆಸ್ಪತ್ರೆಯ ಡಾ. ಎನ್.ಎಸ್. ಮೋಹನ್, ಆದಿಕರ್ನಾಟಕ ಮಹಾಸಂಸ್ಥೆ ಮಾಜಿ ಅಧ್ಯಕ್ಷ ವಿ. ರಾಮಸ್ವಾಮಿ, ಸ್ಥಳ: ಅಶೋಕಪುರಂ ರೈಲ್ವೆ ಸ್ಟೇಷನ್ ಮುಖ್ಯ ರಸ್ತೆ, ಎಂಐಟಿ ಕಾಲೇಜು ಎದುರು.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಬೆಳಗ್ಗೆ ಗರುಡಧ್ವಜ ಸ್ಥಾಪನೆ ಹಾಗೂ ಲೋಕಾರ್ಪಣೆ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.

■ **ಅಖಿಲ ಕರ್ನಾಟಕ ಡಾ. ಜಿ. ಪರಮೇಶ್ವರ ಯುವ ಸೈನ್ಯ :** ಗೃಹ ಮಂತ್ರಿ ಡಾ. ಜಿ. ಪರಮೇಶ್ವರ್‌ರವರ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಪೂಜೆ, ಉಪಸ್ಥಿತರು : ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಪ್ರತಿಭಾ ಪುರಸ್ಕಾರ : ಶಾಸಕ ಜಿ.ಡಿ. ಹರೀಶ್‌ಗೌಡ, ಅಭಿನಂದನಾ ನುಡಿ : ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಮಂಡ್ಯ ರಮೇಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಡಿ. ಅಶೋಕ್ ಕುಮಾರ್, ಸನ್ಮಾನಿತರು : ವಿಶ್ವವಾಣಿ ದಿನಪತ್ರಿಕೆ ಸುದ್ದಿ ಸಂಪಾದಕ ಶಿವಕುಮಾರ ಬೆಳ್ಳಿತಟ್ಟೆ ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ: ಆಲಮ್ಮ ಕಲ್ಯಾಣ ಮಂಟಪ, ಶೃಂಗಾರ್ ಹೋಟೆಲ್ ಹಿಂಭಾಗ, ಶಿವರಾಂಪೇಟೆ, ಬೆಳಗ್ಗೆ 10.30ಕ್ಕೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಸುತ್ತೂರು ಮಠ, ಮೈಸೂರು :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮ, ಬೆಳಗ್ಗೆ ವಿಶೇಷ ಪೂಜೆ, ಸಂಜೆ 6 ರಿಂದ ಸಾಮೂಹಿಕ ಪ್ರಾರ್ಥನೆ, ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ವ ಚಿಂತಾಮಣಿ' ಕುರಿತು ಪ್ರವಚನ, ವಿದುಷಿ ಎಂ.ವಿ.ಶುಭಾ ರಾಘವೇಂದ್ರ ಅವರಿಂದ ವಾಚನ, ಸ್ಥಳ: ಮೈಸೂರು ಶ್ರೀ ಸುತ್ತೂರು ಶಾಖಾ ಮಠ.


■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ), ಕದಳಿ ಮಹಿಳಾ ವೇದಿಕೆ (ಮೈಸೂರು) :** ವಚನ ಶ್ರಾವಣ–ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಪ್ರಾಧ್ಯಾಪಕ ಡಾ. ಟಿ.ಕೆ.ಕೆಂಪೇಗೌಡ ಅವರಿಂದ ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ–ದೇವರದಾಸಿಮಯ ಕುರಿತು ಉಪನ್ಯಾಸ, ಸ್ಥಳ: ಎಂ. ಮಹಾದೇವಪ್ಪ, ನಂ. 22, 29/ಎ, ಗುರುಸ್ಮರಣ, ಮಧುವನ ಬಡಾವಣೆ, ಶ್ರೀರಾಂಪುರ 2ನೇ ಹಂತ, ಸಂಜೆ 5.30ಕ್ಕೆ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವ ಪರ ಸಂಘಟನೆಗಳು:** ಬಸವ ಧರ್ಮ ಜಾಗೃತಿ ಅಭಿಯಾನ, ಇಷ್ಟಲಿಂಗಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ, ಅನುಭಾವಿ ಬಸವ ಚಿಂತಕ ಪ್ರಶಾಂತ್ ಅವರಿಂದ ಕಾಯಕದ ಸೂತ್ರದಾಸೋಹದ ಮಹತ್ವ ಕುರಿತು ಉಪನ್ಯಾಸ, ಸ್ಥಳ: ಶ್ರೀಬಸವಲಿಂಗಸ್ವಾಮಿಗಳವರ ಶ್ರೀಪಟ್ಟದಮಠ, ಶೆಟ್ಟಿನಾಯ್ಕನಹಳ್ಳಿ ಸಂಜೆ 5ಕ್ಕೆ.

■ **ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾಧಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ, ಸಮಾನತೆ ಪ್ರಕಾಶನ :** ಸ್ವಾಭಿಮಾನಿ ವಿ. ಶ್ರೀನಿವಾಸ ಪ್ರಸಾದ್ ಅವರ 77ನೇ ಜನ್ಮ ದಿನಾಚರಣೆ, ಸಾನ್ನಿಧ್ಯ : ವಿಶ್ವಮೈತ್ರಿ ಬುದ್ಧವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಅವರಿಂದ ವಿಚಾರ ಮಂಡನೆ : ವಿ. ಶ್ರೀನಿವಾಸ ಪ್ರಸಾದ್ : ವ್ಯಕ್ತಿತ್ವ ಕುರಿತು ಉಪನ್ಯಾಸ, ಸಂಸ್ಕೃತಿ ಚಿಂತಕ ಡಾ. ಬಂಜಗೆರೆ ಜಯಪ್ರಕಾಶ್ ಅವರಿಂದ ವಿ. ಶ್ರೀನಿವಾಸ ಪ್ರಸಾದ್ : ಹೋರಾಟದ ನೆಲೆಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್, ಉಪಸ್ಥಿತರು : ಪ್ರೊ. ಜಿ. ಸೋಮಶೇಖರ್, ಶ್ರೀಮತಿ ಭಾಗ್ಯಲಕ್ಷ್ಮೀ ಶ್ರೀನಿವಾಸ ಪ್ರಸಾದ್, ಪ್ರೊ. ಸಿ. ಬಸವರಾಜು, ಭರತ್ ರಾಮಸ್ವಾಮಿ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ:ಎ. ಎನ್. ಶೀಲಾ, ವ್ಯಾಖ್ಯಾನ:ಪ್ರೊ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಅ.ನ.ಕೃ. ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್.ಎಸ್, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಆರ್. ಮೋಹನ್–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಧನ್ಯಾ ಎನ್, 12.45 ಕನ್ನಡದಲ್ಲಿ ಭಾಷಣ, 1.00 ಚಿತ್ರಗೀತೆಗಳು, 1.20 ಭಾವಗೀತೆಗಳು–ಎ.ಜೆ. ದಿವ್ಯ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ನಿಲಯದ ಕಲಾವಿದರು–ವಾದ್ಯವೃಂದ, 4.00 ಕಥಾ ಕಾಲಕ್ಷೇಪ–ಶ್ರೀ ಕೃಷ್ಣಲೀಲೆ, ಪ್ರಸ್ತುತಿ: ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಚಾಕಿ ಸಾಕಾಣಿಕೆ ತಾಂತ್ರಿಕತೆಗಳು. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಆರ್. ಮೀನಲ್ ಅವರೊಂದಿಗೆ ಸಂದರ್ಶನ. ಸಂದರ್ಶಕರು :ಎನ್. ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ:ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ, 8.15 ಸಂಸತ್ತಿನ ಉಭಯ ಕಲಾಪಗಳ ಸಮೀಕ್ಷೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಕೆ.ಜೆ. ಯೇಸುದಾಸ್–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ



ಎ.ಶಂಕರ ಶೆಟ್ಟಿ ಅಂಡ್ ಸನ್ಸ್
ಆಚರಿಸುತ್ತಿರುವ
99 ನೇ
ವಾರ್ಷಿಕೋತ್ಸವ
2 ರಿಂದ 8ನೇ ಆಗಸ್ಟ್ 2024 ರ ವರೆಗೆ
ಲಕ್ಕಿ ಕೂಪನ್‌ಗಳನ್ನು ಪಡೆಯಿರಿ ಮತ್ತು ಬಂಪರ್ ಬಹುಮಾನ ಕಾರು, ಚಿನ್ನದ ನಾಣ್ಯಗಳು, ಬೆಳ್ಳಿ ನಾಣ್ಯಗಳನ್ನು ಗೆಲ್ಲುವ ಅವಕಾಶವನ್ನು ಪಡೆಯಿರಿ
• ಪ್ರತಿ ಗ್ರಾಂ ಚಿನ್ನದ ಆಭರಣದ ಮೇಲೆ ₹99 ರಿಯಾಯಿತಿ ಪಡೆಯಿರಿ
• ವಜ್ರದ ಆಭರಣಗಳ ಮೇಲೆ ಪ್ರತಿ ಕ್ಯಾರೆಟ್‌ಗೆ ₹990 ರಿಯಾಯಿತಿ ಪಡೆಯಿರಿ
• ಬೆಳ್ಳಿಯ ವಸ್ತುಗಳ ಮೇಲೆ ಪ್ರತಿ ಕೆಜಿಗೆ ₹990 ರಿಯಾಯಿತಿ ಪಡೆಯಿರಿ
Since 1925
ASC
A. SHANKARA CHETTY & SONS
FOUNDER - A. GOPALA CHETTY
ಪ್ಲಾಟಿನಂ, ವಜ್ರ , ಬಂಗಾರ, ಬೆಳ್ಳಿ ಆಭರಣ ವ್ಯಾಪಾರಿಗಳು
ಕೆ.ಆರ್. ಸರ್ಕಲ್, ಮೈಸೂರು । ಫೋನ್: 0821-2423882 । ಮೊ: 9342188118
ವ್ಯಾಲೆಟ್ ಪಾರ್ಕಿಂಗ್ ಲಭ್ಯವಿದೆ | ಸಮಯ : ಬೆಳಿಗ್ಗೆ 11 ರಿಂದ ರಾತ್ರಿ 8 ರವರೆಗೆ



ಡಾ. ಜಿ. ಪರಮೇಶ್ವರ್ ಅಭಿಮಾನಿಗಳ ಬಳಗ, ಮೈಸೂರು
ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರು ಹಾಗೂ
ಮಾನ್ಯ ಗೃಹಮಂತ್ರಿಗಳಾದ ಡಾ. ಜಿ. ಪರಮೇಶ್ವರ್ ರವರಿಗೆ
ಜನ್ಮದಿನದ ಶುಭಾಶಯಗಳು



ಮೈಸೂರು ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರು ಅಭಿವೃದ್ಧಿ ಹರಿಕಾರರಾದ
ಶ್ರೀ
ಕೆ.ಹರೀಶ್‌ಗೌಡ
ಅವರಿಗೆ
ಜನುಮದಿನದ ಶುಭಾಶಯಗಳು
ಶುಭಕೋರುವವರು : ಕೆ.ಹರೀಶ್‌ಗೌಡ ಅಭಿಮಾನಿಗಳ ಬಳಗ ಹಾಗೂ
ಎಸ್.ಆರ್. ರವಿಕುಮಾರ್ ಸ್ನೇಹ ಬಳಗ ನಜರ್‌ಬಾದ್, ಮೈಸೂರು

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಿಮ್ಮ ಗೆಳೆಯ ಮದುವೆ ಆಗ್ತಿರೋ ಹುಡ್ಗಿ ಚೆನ್ನಾಗಿಲ್ಲ, ನೀವಾದ್ರೂ ಹೇಳ್ಬಾರ್ದಾ?

ಗಂಡ : ನಾನು ಯಾಕೆ ಹೇಳಲಿ, ನಾನ್ ಮದುವೆ ಆಗುವಾಗ ಬಡ್ಡಿ ಮಗ ಸುಮ್ನೆ ಇದ್ದ!

ಮೈಸೂರು ಮಿತ್ರ

ಮಂಗಳವಾರ, 6 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನೀನು ಎಲ್ಲಿಯವರೆಗೂ ಉಪಯೋಗಕ್ಕೆ ಬರುತ್ತೀಯೋ ಅಲ್ಲಿಯವರೆಗೂ ಜನರು ನಿನ್ನನ್ನು ಪ್ರೀತಿಸುತ್ತಾರೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಪತ್ತಿಗಾದವನೇ ನಿಜವಾದ ಗೆಳೆಯ.

ನಿಮ್ಮ ಪತ್ರಗಳು

■ ರಸ್ತೆ ಬದಿ ವ್ಯಾಪಾರ: ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನ ನಿಲುಗಡೆ



ಮಾನ್ಯರೆ,

ಮೈಸೂರಿನ ಹಲವೆಡೆ ರಸ್ತೆ ಬದಿಯಲ್ಲಿ ಜರ್ಕಿನ್, ರೈನ್‌ಕೋಟ್ ಮಾರಾಟ ಮಾಡಲಾಗುತ್ತಿದೆ. ಅದರಲ್ಲೂ ಬೋಗಾದಿ ರಸ್ತೆ ಸೇರಿದಂತೆ ಕುಕ್ಕರಹಳ್ಳಿ ಕೆರೆ ಆಸುಪಾಸು ರಸ್ತೆಗಳಲ್ಲಿ ಜರ್ಕಿನ್‌ಗಳನ್ನು ರಾಶಿ ಹಾಕಿ ಮಾರಾಟ ಮಾಡಲಾಗುತ್ತಿದೆ. ಇದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಗ್ರಾಹಕರು ರಸ್ತೆಯಲ್ಲೇ ತಮ್ಮ ವಾಹನ ನಿಲ್ಲಿಸಿ, ಜರ್ಕಿನ್, ರೈನ್‌ಕೋಟ್ ಕೊಳ್ಳುತ್ತಾರೆ. ಕೆಲವರಂತೂ ಅಡ್ಡಾದಿಡ್ಡಿ ವಾಹನಗಳನ್ನು ನಿಲ್ಲಿಸುವುದರಿಂದ ಸಂಚಾರಕ್ಕೆ ಅಡ್ಡಿಯಾಗುವುದರ ಜೊತೆಗೆ ಅಪಘಾತ ಸಂಭವಿಸುವ ಸಾಧ್ಯತೆ ಉಂಟಾಗಿದೆ. ಡಾಂಬರು ರಸ್ತೆ ಪಕ್ಕದ ಜಾಗದಲ್ಲಿ ವಾಹನ ನಿಲ್ಲಿಸಿದರೆ ಈ ಸಮಸ್ಯೆ ಉಂಟಾಗುವುದಿಲ್ಲ. ಈ ಬಗ್ಗೆ ವ್ಯಾಪಾರಿಗಳೇ ಗ್ರಾಹಕರಿಗೆ ಮಾಹಿತಿ ನೀಡಬೇಕು. ಈ ರೀತಿ ಸಮಸ್ಯೆಯಾಗುತ್ತಿರುವ ಸ್ಥಳಗಳಲ್ಲಿ ಪೊಲೀಸರು ಪರಿಶೀಲಿಸಿ, ಸೂಚನೆ ನೀಡಬೇಕಿದೆ. ಅಪಘಾತ ಸಂಭವಿಸುವ ಮುನ್ನವೇ ಕ್ರಮ ವಹಿಸುವುದು ಒಳ್ಳೆಯದು.

–ಹೆಚ್.ಪಿ.ಮಾದರಾಜೇಅರಸ್, ಮೈಸೂರು.

■ ವಯನಾಡಿನ ಕರಾಳ ಘಟನೆ ಮರು ಕಳಿಸದಿರಲಿ

ಮಾನ್ಯರೆ,

ಇತ್ತೀಚೆಗಷ್ಟೇ ಗುಂಡ್ಲುಪೇಟೆ ತಾಲೂಕಿಗೆ ಹೊಂದಿಕೊಂಡಂತೆ ಇರುವ ನೆರೆಯ ರಾಜ್ಯ ಕೇರಳದ ವಯನಾಡಿಗೆ ಗೆಳೆಯರೊಂದಿಗೆ ಒಂದು ದಿನದ ಪ್ರವಾಸದ ನೆಪದಲ್ಲಿ ಹೋಗಿ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿದು ಬಂದಿದ್ದೆ. ಆ ಸಿಹಿ ಘಳಿಗೆ ಮಾಸುವ ಮುನ್ನವೇ ಮೊನ್ನೆ ಮೊನ್ನೆಯಷ್ಟೆ ವಯನಾಡಿನಲ್ಲಿ ಭಾರಿ ಭೂಕುಸಿತ ಉಂಟಾಗಿ ಅದರ ಪರಿಣಾಮದಿಂದಾಗಿ ಸಾಕಷ್ಟು ಸಾವು ನೋವುಗಳು ಸಂಭವಿಸಿ ಅದು ಎಂದೆಂದಿಗೂ ಮಾಸಿ ಹೋಗದಂತಹ ಕಹಿ ಘಟನೆಯಾಗಿ ಮನಸ್ಸಿನಲ್ಲಿ ಉಳಿದು ಬಿಟ್ಟಿದೆ. ಮಾನವರು ತಮ್ಮ ದುರಾಸೆಯಿಂದ ಪ್ರಕೃತಿಯ ಒಡಲನ್ನು ಯಾವುದೇ ಎಗ್ಗಿಲ್ಲದೆ ಬಗೆದುದರ ದುಷ್ಪರಿಣಾಮದಿಂದಾಗಿ ಇಂದು ಪ್ರಕೃತಿ ಮುನಿದು ದೇವರನಾಡನ್ನು ನರಕದ ನಾಡನ್ನಾಗಿ ಪರಿವರ್ತಿಸಿ ಬಿಟ್ಟಿರುವುದು ನಿಜಕ್ಕೂ ಅತ್ಯಂತ ದುಃಖದ ಸಂಗತಿ.

ಪ್ರಕೃತಿ ಪದೇ ಪದೆ ನಮ್ಮಗಳನ್ನು ಎಚ್ಚರಿಸುತ್ತಲೇ ಬಂದಿದೆ ಆದರೆ ನಾವುಗಳು ಅದರಿಂದ ಎಚ್ಚರಗೊಂಡು ಪಾಠ ಕಲಿತಂತಿಲ್ಲ. ಕಳೆದ ಕೆಲ ವರ್ಷಗಳ ಹಿಂದೆ ಇದೇ ಮಾದರಿಯಲ್ಲಿ ಕೊಡಗು ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೀಗೆ ಭೂಕುಸಿತ ಉಂಟಾಗಿ ಸಾಕಷ್ಟು ಸಾವು ನೋವುಗಳು ಸಂಭವಿಸಿದ್ದವು. ಇಷ್ಟಾದರೂ ನಾವುಗಳು ಪ್ರಕೃತಿಯ ಇಂತಹ ವಿಕೋಪಗಳಿಂದ ಬುದ್ಧಿ ಕಲಿತಂತಿಲ್ಲ. ಭವಿಷ್ಯದಲ್ಲಾದರೂ ನಾವುಗಳು ಕೇರಳದ ವಯನಾಡಿನ ಮೇಪ್ಪಾಡಿ ಹಾಗೂ ಇತರೆ ಗ್ರಾಮಗಳಲ್ಲಿ ಭಾರಿ ಭೂ ಕುಸಿತದಿಂದಾಗಿ ಉಂಟಾದ ಅಪಾರ ಸಾವು ನೋವುಗಳಿಂದಾದರೂ ಪಾಠ ಕಲಿಯಲೇಬೇಕಿದೆ.

ಅಂದು ವಯನಾಡಿನ ಜನರು ಸಿಹಿ ನಿದ್ರೆಯಲ್ಲಿ ಜಾರಿರುವಾಗ ಸಂಭವಿಸಿದಂತಹ ಆ ಕರಾಳ ಘಟನೆ ನಮಗೆ ಮತ್ತೆ ಮತ್ತೆ ನೆನಪಾಗಬೇಕಿದೆ. ಅಲ್ಲಿನ ಆ ಅಮ್ಮಂದಿರ ತೆಕ್ಕೆಯಲ್ಲಿ ಚಿರನಿದ್ರೆಗೆ ಜಾರಿದ ಆ ಮುಗ್ಧ ಕಂದಮ್ಮಗಳು, ಹಾಗೆಯೇ ಆ ಹರಿಯುವ ನೀರೊಳಗೆ ಸಿಲುಕಿ ತಮ್ಮ ಜೀವ ಉಳಿಸಿಕೊಳ್ಳಲು ಸಾಕಷ್ಟು ಸಂಕಟಪಡುತ್ತಿದ್ದ ಆ ಆನೆಗಳು ಮತ್ತು ಅವುಗಳ ಮರಿಗಳು ಇವೆಲ್ಲ ನಮ್ಮ ಸ್ಮೃತಿಪಟಲದಲ್ಲಿ ಸದಾ ಶಾಶ್ವತವಾಗಿ ಉಳಿಯಲೇಬೇಕಿದೆ. ಏಕೆಂದರೆ ಇಂತಹ ಕರಾಳ ಕಹಿ ಘಟನೆಗಳು ಮುಂದಿನ ದಿನಗಳಲ್ಲಿ ಮತ್ತೆ ಮತ್ತೆ ಮರುಕಳಿಸದಂತೆ ನಾವೆಲ್ಲ ಎಚ್ಚರಗೊಳ್ಳಲಿಕ್ಕಾದರೂ ಆ ಕರಾಳ ಘಟನೆ ನಮ್ಮ ನೆನಪಿನಲ್ಲಿ ಉಳಿಯಲೇಬೇಕಿದೆ.

– ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

■ ಶಾಸಕ ಹರೀಶ್‌ಗೌಡರಿಗೆ ಚಾಮುಂಡೇಶ್ವರಿ ಹೆಚ್ಚಿನ ಜನಸೇವೆ ಮಾಡುವ ಶಕ್ತಿ ಕರುಣಿಸಲಿ


ಮಾನ್ಯರೆ,



ಮೈಸೂರಿನ ಕನ್ನೇಗೌಡನ ಕೊಪ್ಪಲು ಗ್ರಾಮದ ಕೆ.ಹರೀಶ್ ಗೌಡರು ಯಾವೊಂದು ಅಧಿಕಾರ ಇಲ್ಲದ ಹೊರತಾಗಿಯೂ ದಶಕಗಳ ಕಾಲದಿಂದ ಬಡವರ, ಶ್ರಮಿಕರ, ಅಶಕ್ತರ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿಯೇ ಮಿಡಿದು ದುಡಿದವರು. ಅಂದಿನಿಂದಲೂ ಸಾಮೂಹಿಕ ವಿವಾಹ, ಉದ್ಯೋಗ ಮೇಳಗಳಂತಹ ಜನಪರ ಕಾರ್ಯಕ್ರಮಗಳನ್ನು ಬೃಹತ್ ಮಟ್ಟದಲ್ಲಿ ಆಯೋಜಿಸುತ್ತಾ ಬಂದು, ಮಾರಣಾಂತಿಕವಾದ ಕೊರೊನಾ ಸಮಯದಲ್ಲಿ ವೈದ್ಯಕೀಯ ಪರಿಕರಗಳು ಹಾಗೂ ದಿನಸಿ ಪದಾರ್ಥಗಳನ್ನು ಕೊಟ್ಟು ತಮ್ಮ ಬದ್ಧತೆಯನ್ನು ಮೆರೆದಿದ್ದರು. ಸರ್ವಧರ್ಮದವರನ್ನು ಸಮನಾಗಿ ಕಾಣುವ ಇವರು ಮೊದಲ ಬಾರಿಗೆ 2018ರ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಿಂದ ಪಕ್ಷೇತರರಾಗಿ ನಿಂತು ಸೋತರೂ ಸಹ ತಮ್ಮ ಶಕ್ತಿ ಏನೆಂಬುದನ್ನು ಪ್ರದರ್ಶಿಸಿದ್ದರು. ಅದರ ಫಲವಾಗಿಯೇ 2023ರಲ್ಲಿ ಇದೇ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಜನಪರ ಕೆಲಸಗಳನ್ನು ಮಾಡುತ್ತಾ, ಜನಮಾನಸದಲ್ಲಿ ಉಳಿಯುವಂತಹ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದ್ದಾರೆ. ಇವರಿಗೆ ಕೆ.ಜಿ.ಕೊಪ್ಪಲಿನ ಗ್ರಾಮದೇವತೆ ಚಾಮುಂಡೇಶ್ವರಿ ತಾಯಿ ಇನ್ನೂ ಹೆಚ್ಚಿನ ಜನಸೇವೆ ಮಾಡುವ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ, ಹರೀಶ್‌ಗೌಡರಿಗೆ ಜನುಮದಿನದ ಶುಭಾಶಯಗಳನ್ನು ಕೋರುತ್ತೇನೆ.

– ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ವಿ.ಶ್ರೀನಿವಾಸಪ್ರಸಾದ್; ಸಮಕಾಲೀನ ರಾಜಕಾರಣದ ಆದರ್ಶ



“ 1974ರ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸುವುದರ ಮೂಲಕ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ಇದಕ್ಕೂ ಮೊದಲು ಅವರು ಬೂಸಾ ಚಳುವಳಿಯ ನೇತೃತ್ವ ವಹಿಸಿಕೊಂಡು ತಮ್ಮ ರಾಜಕೀಯ ಬದುಕಿಗೆ ಸೂಕ್ತ ಹಿನ್ನೆಲೆ ರೂಪಿಸಿಕೊಂಡಿದ್ದರು. ವಾಸ್ತವವಾಗಿ ವಿ. ಶ್ರೀನಿವಾಸಪ್ರಸಾದ್ ಅವರಿಗೆ ಅಸ್ಪೃಶ್ಯತೆ ಹಾಗೂ ಬಡತನದ ನೇರ ಅನುಭವ ಕಾಡಿರಲಿಲ್ಲ. ಆದರೆ ಸಾಮಾಜಿಕ ಕಾಳಜಿ ಮತ್ತು ಸಮುದಾಯ ಕುರಿತ ಸಂವೇದನಾಶೀಲತೆಯಿಂದಾಗಿ ಅವರಲ್ಲಿ ದಲಿತ ಪ್ರಜ್ಞೆ ಜಾಗೃತವಾಗಿತ್ತು.



ಭರತ್ ರಾಮಸ್ವಾಮಿ
ಪ್ರಕಾಶಕರು
ಸಮಾನತೆ ಪ್ರಕಾಶನ (ರಿ.)
ಮೈಸೂರು

ರಾಜಕಾರಣವೆಂದರೆ ಜನರ ಬದುಕನ್ನು ನೆಮ್ಮದಿಯ ಹಳಿಗಳ ಮೇಲೆ ಸಾಗುವಂತೆ ಮಾಡುವ ಒಂದು ಹೊಣೆಗಾರಿಕೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರಕಾರ ‘ರಾಜಕಾರಣ ಒಂದು ಉದ್ಯೋಗವಲ್ಲ; ಅದು ಒಂದು ಸಾಮಾಜಿಕ ಜವಾಬ್ದಾರಿ’. ಆದರ್ಶ ರಾಜಕಾರಣವು ನಿಷ್ಠೆ–ಪ್ರಾಮಾಣಿಕತೆ–ನೈತಿಕತೆ ಮತ್ತು ವೈಯಕ್ತಿಕ ಲಾಭಕ್ಕಿಂತ ಜನರ ಅಭ್ಯುದಯವನ್ನು ಬಯಸುತ್ತದೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ರಾಜಕಾರಣದಲ್ಲಿ ಒಂದು ಜವಾಬ್ದಾರಿ, ನೈತಿಕತೆ, ಸೇವಾಮನೋಭಾವನೆಯನ್ನು ಕಾಣಬಹುದಾಗಿತ್ತು. ಆದರೆ ಇತ್ತೀಚಿಗೆ ರಾಜಕಾರಣವನ್ನು ಕೋಟಿ ಹಾಕಿ, ಬಹುಕೋಟಿ ತೆಗೆಯುವ ಉದ್ಯಮವನ್ನಾಗಿ ಮಾಡಿಕೊಳ್ಳಲಾಗಿದೆ. ಮೌಲ್ಯಾಧಾರಿತ ರಾಜಕಾರಣ ಎನ್ನುವುದು ಅಪಹಾಸ್ಯವಾಗುವ ಮಟ್ಟಕ್ಕೆ ಇಂದಿನ ರಾಜಕಾರಣ ದುಸ್ಥಿತಿಗೆ ತಲುಪಿ, ಪ್ರಾಮಾಣಿಕರು, ಸಂಭಾವಿತರು, ಸುಸಂಸ್ಕೃತರು ಅದರ ಹತ್ತಿರ ಸುಳಿಯಲು ಅಂಜುವಂತಾಗಿದೆ. ಇಂತಹ ಕಲುಷಿತ ರಾಜಕೀಯ ವ್ಯವಸ್ಥೆಯಲ್ಲಿ ಸಚ್ಚಾರಿತ್ರ್ಯವಂತರಾಗಿ ಬದುಕಿದ ಕೆಲವೇ ನಾಯಕರಲ್ಲಿ ಹಿರಿಯ ರಾಜಕೀಯ ಮುತ್ಸದ್ಧಿ ವಿ.ಶ್ರೀನಿವಾಸಪ್ರಸಾದ್ ಅವರು ಅಗ್ರಗಣ್ಯರಾಗಿದ್ದಾರೆ. ಶಿಸ್ತು, ನೇರನುಡಿ, ದಿಟ್ಟತನದೊಂದಿಗೆ ಮಾನವೀಯ ಅಂತಃಕರಣವನ್ನೂ ಹೊಂದಿದ್ದ ಅವರದ್ದು ಒಂದು ಅಪರೂಪದ ವ್ಯಕ್ತಿತ್ವ

ವಿ.ಶ್ರೀನಿವಾಸ ಪ್ರಸಾದ್ ಅವರು ರಾಜಕೀಯ ಪ್ರವೇಶ ಮಾಡಿದ್ದು ಈಗ್ಗೆ 50 ವರ್ಷಗಳ ಹಿಂದೆ. ಆ ಕಾಲದಲ್ಲಿ ರಾಜಕಾರಣದಲ್ಲಿ ಮೌಲ್ಯಗಳು ಜೀವಂತವಾಗಿದ್ದವು. ಆ ಕಾಲದ ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆದ ವಿ.ಶ್ರೀನಿವಾಸ ಪ್ರಸಾದ್ ಅವರು ಅವರ ಬದುಕಿನ ಕೊನೆಗಾಲದಲ್ಲಿ ರಾಜಕಾರಣದ ದುಸ್ಥಿತಿಯನ್ನು ಕಂಡು ಎಷ್ಟೋ ವೇಳೆ ಬೆರಗುಗೊಳ್ಳುತ್ತಿದ್ದರು. ಈ ವಿಷಮ ವಾತಾವರಣದಲ್ಲಿ ಅವರು ಸ್ವಾಭಿಮಾನಿಗಳಾಗಿ ಸತ್ಯ; ಪ್ರಾಮಾಣಿಕತೆಯನ್ನು ಉಳಿಸಿಕೊಂಡು ಬಂದದ್ದು ಒಂದು ಅಚ್ಚರಿಯೇ ಸರಿ.

1974ರ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸುವುದರ ಮೂಲಕ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ಇದಕ್ಕೂ ಮೊದಲು ಅವರು ಬೂಸಾ ಚಳವಳಿಯ ನೇತೃತ್ವವನ್ನು ವಹಿಸಿಕೊಂಡು ತಮ್ಮ ರಾಜಕೀಯ ಬದುಕಿಗೆ ಸೂಕ್ತ ಹಿನ್ನೆಲೆ ರೂಪಿಸಿಕೊಂಡಿದ್ದರು. ವಾಸ್ತವವಾಗಿ ವಿ. ಶ್ರೀನಿವಾಸಪ್ರಸಾದ್ ಅವರಿಗೆ ಅಸ್ಪೃಶ್ಯತೆಯ ಹಾಗೂ ಬಡತನದ ನೇರ ಅನುಭವ ಕಾಡಿರಲಿಲ್ಲ. ಆದರೆ ಸಾಮಾಜಿಕ ಕಾಳಜಿ ಮತ್ತು ಸಮುದಾಯ ಕುರಿತ ಸಂವೇದನಾಶೀಲತೆಯಿಂದಾಗಿ ಅವರಲ್ಲಿ ದಲಿತ ಪ್ರಜ್ಞೆ ಜಾಗೃತವಾಗಿತ್ತು. ಹೀಗಾಗಿ ಮೈಸೂರಿನ ಸುತ್ತಮುತ್ತಲು ಮಾತ್ರವಲ್ಲ, ರಾಜ್ಯ ಮತ್ತು ರಾಷ್ಟ್ರಾದ್ಯಂತ ಎಲ್ಲಿಯೇ ಆಗಲಿ ದಲಿತರ ಮೇಲೆ ನಡೆದ ದೌರ್ಜನ್ಯದ ವಿರುದ್ಧ ಅವರು ತೀವ್ರವಾಗಿ ಪ್ರತಿಭಟಿಸುತ್ತಿದ್ದರು. ಅವರೇ ಹೇಳಿರುವ ಹಾಗೆ ಅವರ ಹುಟ್ಟೂರು ಅಶೋಕಪುರಂ ಒಂದು ರಿಪಬ್ಲಿಕ್‌ನಂತಿತ್ತು. ಅಲ್ಲಿನ ಯುವಕರನ್ನು ನಿರಂತರವಾಗಿ ಸಂಘಟಿಸುತ್ತಿದ್ದ ಪ್ರಸಾದ್ ಅವರು ತಮ್ಮ ಹೋರಾಟದ ಕಿಚ್ಚನ್ನು ಉಳಿಸಿಕೊಂಡು ಬಂದಿದ್ದರು.

ಶ್ರೀನಿವಾಸಪ್ರಸಾದ್ ಅವರದ್ದು ಏಳು–ಬೀಳಿನ ರಾಜಕೀಯ ಜೀವನ. ಆರಂಭದಲ್ಲಿ ನಿರಂತರವಾಗಿ ಮೂರು ಬಾರಿ ಸೋಲಿನ ಕಹಿ ಉಣಬೇಕಾಯಿತು. ಅವರ ಸಹನೆ, ತಾಳ್ಮೆ ಮೆಚ್ಚಬೇಕಾದಂತವು. ದುರ್ಬಲ ಮನಸ್ಸಿನವರಾಗಿದ್ದರೆ. ಆರಂಭದ ಸತತ ಮೂರು ಸೋಲಿನಿಂದ ಜರ್ಝರಿತರಾಗಿ, ಹತಾಶರಾಗಿ ಅವರು ರಾಜಕೀಯದಿಂದ ದೂರ ಉಳಿದುಬಿಡುತ್ತಿದ್ದರು. ಆದರೆ ಪ್ರಸಾದ್ ಅವರದ್ದು ಅಂತಹ ಜಾಯಮಾನವಲ್ಲ. ರಾಜಕೀಯಕ್ಕೆ ಕಾಲಿಡುವಾಗಲೇ ಪ್ರಬುದ್ಧ ಮತ್ತು ಸಕಾರಾತ್ಮಕವಾದ ಚಿಂತನೆಯನ್ನು ಅವರು ಬೆಳೆಸಿಕೊಂಡಿದ್ದರು. ಹಾಗಾಗಿಯೇ 1980 ರಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. ಸತತವಾಗಿ ನಾಲ್ಕು ಬಾರಿ ಅವರು ಆ ಕ್ಷೇತ್ರದಿಂದ ಜಯ ಸಾಧಿಸಿದ್ದು ಒಂದು ದಾಖಲೆಯೇ ಸರಿ. ಮುಂದೆ ಅವರು ಸೋಲಿನ ಕಹಿ ಉಂಡರೂ ಛಲ ಬಿಡದ ತ್ರಿವಿಕ್ರಮನಂತೆ ವಿಜಯ ಸಾಧಿಸಿ ಕೇಂದ್ರದಲ್ಲಿ ಮಂತ್ರಿಯಾದರು. ಅಧಿಕಾರ ಇದ್ದಾಗಲೂ ಮತ್ತು ಅಧಿಕಾರ ಇಲ್ಲದಾಗಲೂ ಪ್ರಸಾದ್ ಅವರು ಒಂದು ಸಮತೋಲಿತ ಸ್ವಭಾವವನ್ನು ರೂಪಿಸಿಕೊಂಡು ಪ್ರಬುದ್ಧರಾಗುತ್ತ ಬೆಳೆಯುತ್ತಿದ್ದರು. ಅವರ ವ್ಯಕ್ತಿತ್ವ ಬಹಳಷ್ಟು ವೈಶಿಷ್ಟ್ಯಪೂರ್ಣ ಗುಣಗಳನ್ನು ಹೊಂದಿತ್ತು. ಅವರು ಎಂದೂ ಪ್ರದರ್ಶನದ ಬಹಿರಾಡಂಬರವನ್ನು ಒಪ್ಪುತ್ತಿರಲಿಲ್ಲ. ಆದ ಕಾರಣವೇ ಅಧಿಕಾರ ಇಲ್ಲದಾಗಲೂ ಕ್ಷೇತ್ರದ ಜನತೆ ಅವರನ್ನು ಸದಾ ಸುತ್ತುವರೆದಿರುತ್ತಿದ್ದರು. ಅಂಬೇಡ್ಕರ್ ಮತ್ತು ಬುದ್ಧನ ಆಲೋಚನೆಗಳನ್ನು ಅತ್ಯಂತ ನಿಷ್ಠೆಯಿಂದ ಅವರು ಆಚರಿಸುತ್ತಿದ್ದರು. ಇದರಿಂದ ಅವರ ವ್ಯಕ್ತಿತ್ವಕ್ಕೆ ಒಂದು ವಿಶೇಷ ವರ್ಚಸ್ಸು ಪ್ರಾಪ್ತವಾಗಿತ್ತು. ಗುಣಗ್ರಾಹಿತ್ವ ಅವರ ವ್ಯಕ್ತಿತ್ವದ ಮತ್ತೊಂದು ಗುಣ. ಯಾರ ದೃಷ್ಟಿ ಸಮಗ್ರವೂ, ಅಖಂಡವೂ ಆಗಿರುತ್ತದೆಯೋ ಅಂತಹವರು ಮಾತ್ರ ಇತರರ ಗುಣಗಳನ್ನು ಗುರುತಿಸಿ, ಗೌರವಿಸುವ ವಿಶಾಲ ಮನಸ್ಸಿನವರಾಗಿರುತ್ತಾರೆ. ಅವರು ಅವರ ಸಿದ್ಧಾಂತಗಳನ್ನು ಎಂದೂ ಬಿಟ್ಟುಕೊಡುತ್ತಿರಲಿಲ್ಲ. ಅವರೆ ಹೇಳಿರುವಂತೆ ‘ರಾಜಕೀಯ ಎಂಬುಂದು ಹೊಂದಾಣಿಕೆಗಳ ಸರಮಾಲೆ ಇರಬಹುದು. ಆದರೆ ಅದು ನನ್ನ ಪಾಲಿಗೆ ಒಂದು ಸಾಮಾಜಿಕ ಬದ್ಧತೆ ಮತ್ತು ಕಾಳಜಿ’ ಎಂಬ ಮಾತು ಶ್ರೀನಿವಾಸ ಪ್ರಸಾದ್ ಅವರು ಆಗಾಗ ಪಕ್ಷ ಬದಲಾವಣೆ ಮಾಡಿದ್ದನ್ನು ಒಂದು ಮೈನಸ್ ಪಾಯಿಂಟ್ ಎಂದು ಬೆರಳು ಮಾಡಿ ತೋರುವವರಿಗೆ ಉತ್ತರದಂತೆ ಇದೆ. ಅಲ್ಲದೆ ಮುಂದುವರೆದು ಅವರು **‘ನಾನು ಪಕ್ಷಾಂತರಿಯೇ ಹೊರತು ತತ್ವಾಂತರಿಯಲ್ಲ’** ಎಂಬುದಾಗಿಯೂ; ನಾವು ಯಾವುದೇ ಪಕ್ಷದಲ್ಲಿದ್ದರೂ ಆ ಪಕ್ಷಕ್ಕೆ ಆಸ್ತಿಯಾಗಿದ್ದೇನೆ ಹೊರತು ಹೊರೆಯಾಗಿರಲಿಲ್ಲ ಎಂದಿದ್ದರು.

ಸ್ವತಂತ್ರ ಮನೋಧರ್ಮ ಹೊಂದಿದ್ದ ಅವರು ಎಂದೂ ಬೇರೆಯವರ ನೆರಳಾಗಿ ಬದುಕಲಿಲ್ಲ. ಸ್ವಾಭಿಮಾನವನ್ನು ಅವರು ಉಸಿರಾಗಿಸಿಕೊಂಡಿದ್ದವರು. ಅವರು ಸಾಮಾನ್ಯವಾಗಿ ಅಧಿಕಾರವನ್ನು ಬೆನ್ನುಹತ್ತಿ ಹೋಗಲಿಲ್ಲ. ಅವಕಾಶಕ್ಕಾಗಿ ಅನ್ಯರನ್ನು ಆಶ್ರಯಿಸಿ ತಮ್ಮ ಸಿದ್ಧಾಂತದೊಂದಿಗೆ ರಾಜೀ ಮಾಡಿಕೊಳ್ಳಲಿಲ್ಲ. ಒಂದು ವೇಳೆ ಅವರು ರಾಜೀಸೂತ್ರ ಅನುಸರಿಸಿಕೊಂಡು ಬಂದಿದ್ದರೆ, ಇನ್ನೂ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಬಹುದಿತ್ತು. ಅಂತಹ ಅವಕಾಶವಾದಿ ತನಕ್ಕೆ ಅವರು ತುಂಬಾ ಅಸಹ್ಯ ಪಟ್ಟುಕೊಳ್ಳುತ್ತಿದ್ದರು.

ಗಾಲಿಕುರ್ಚಿ (ವ್ಹೀಲ್‌ಚೇರ್) ಮೇಲೆ ಕುಳಿತುಕೊಂಡಾದರೂ ರಾಜಕೀಯದಲ್ಲಿ ಇರಬೇಕೆಂದು ಹಪ–ಹಪಿಸುತ್ತಿರುವ ಇಂದಿನ ಸಂದರ್ಭದಲ್ಲಿ ತಮ್ಮ ಇಡೀ ರಾಜಕೀಯ ಜೀವನದುದ್ದಕ್ಕೂ ಅಧಿಕಾರಕ್ಕಂಟಿಕೊಳ್ಳದೆ ಪ್ರಾಮಾಣಿಕತೆಯನ್ನು ಮೆರೆದು ಸ್ವಯಂನಿವೃತ್ತಿ ಘೋಷಣೆ ಮಾಡಿದ ಪ್ರಸಾದ್ ಅವರ ಬದುಕು ಒಂದು ವೀರ ವ್ರತವಲ್ಲದೆ ಮತ್ತೇನು ?

ಒಟ್ಟಾರೆಯಾಗಿ ಹೇಳುವುದಾದರೆ ಅವರದ್ದು ತತ್ವನಿಷ್ಠ ರಾಜಕಾರಣ. ಇಡೀ ರಾಜಕೀಯ ವ್ಯವಸ್ಥೆಯೇ ಕಲುಷಿತಗೊಂಡಿರುವ ಈ ಕಾಲದಲ್ಲಿ ಶ್ರೀನಿವಾಸ ಪ್ರಸಾದ್ ಅವರ ರಾಜಕೀಯ ಜೀವನ ಒಂದು ಆದರ್ಶ ಎಂದರೆ ಅತಿಶಯೋಕ್ತಿಯೇನಲ್ಲ. ಅದಕ್ಕೆ ಪ್ರೊ.ಸುಧಾರಾವ್ ಅವರು ‘ಪ್ರಸಾದ್ ಅವರು ಒಬ್ಬ ಪೊಲಿಟಿಕಲ್ ಪ್ರೊಫೆಸರ್’ ಎಂದರು. ತತ್ವನಿಷ್ಠ ರಾಜಕಾರಣಿಗಳಾಗಬೇಕೆಂದು ರಾಜಕೀಯ ಪ್ರವೇಶಿಸುವವರಿಗೆ ಪ್ರಸಾದ್ ಅವರ ರಾಜಕೀಯ ಬದುಕು ಒಂದು ಮಹಾ ಪ್ರೇರಣೆ ಮತ್ತು ಸಂದೇಶ.

ಇಂದು ‘ವಿ.ಶ್ರೀನಿವಾಸಪ್ರಸಾದ್ ವ್ಯಕ್ತಿತ್ವ ಮತ್ತು ಹೋರಾಟ’ ವಿಚಾರ ಮಂಥನ

ಮೈಸೂರು, ಆ.5– ವಿ.ಶ್ರೀನಿವಾಸಪ್ರಸಾದ್ ಅವರ 77ನೇ ಜನ್ಮ ದಿನಾಚರಣೆ ಅಂಗವಾಗಿ ಮಾನಸಗಂಗೋತ್ರಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಮಂಗಳವಾರ(ಆ.6)ರಂದು ಬೆಳಗ್ಗೆ 10.30ಕ್ಕೆ ‘ವಿ.ಶ್ರೀನಿವಾಸಪ್ರಸಾದ್ ವ್ಯಕ್ತಿತ್ವ ಮತ್ತು ಹೋರಾಟ’ ವಿಚಾರ ಮಂಥನ ನಡೆಯಲಿದೆ. ವಿಶ್ವಮೈತ್ರಿ ಬುದ್ಧವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ ಅವರ ದಿವ್ಯ ಸಾನಿಧ್ಯ ಹಾಗೂ ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ‘ವಿ.ಶ್ರೀನಿವಾಸಪ್ರಸಾದ್: ವ್ಯಕ್ತಿತ್ವ’ ಕುರಿತು ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಹಾಗೂ ‘ವಿ.ಶ್ರೀನಿವಾಸಪ್ರಸಾದ್: ಹೋರಾಟದ ನೆಲೆಗಳು’ ಕುರಿತು ಸಂಸ್ಕೃತಿ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ವಿಚಾರ ಮಂಡಿಸಲಿದ್ದಾರೆ. ಪ್ರೊ.ಜೆ.ಸೋಮಶೇಖರ್, ಶ್ರೀಮತಿ ಭಾಗ್ಯಲಕ್ಷ್ಮೀ ಶ್ರೀನಿವಾಸಪ್ರಸಾದ್, ಪ್ರೊ.ಜೆ.ಸೋಮಶೇಖರ್, ಭರತ್ ರಾಮಸ್ವಾಮಿ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಅಂತಿಮ ದರ್ಶನಕ್ಕೆ ತಂದೆಗಾಗಿ ಕಾದಿದೆ ಅಪಘಾತದಲ್ಲಿ ಅಸುನೀಗಿದ ಪುತ್ರಿಯ ಶವ!

ಹೃದಯ ಕಲಕುವ ಪ್ರಸಂಗ



ಎನ್.ಕವನ

ಮೈಸೂರು, ಆ.5 (ಎಸ್‌ಬಿಡಿ)– ರಸ್ತೆ ಅಪಘಾತದಲ್ಲಿ ಯುವತಿ ಸಾವನ್ನಪ್ಪಿದ್ದು, ಮನೆ ಬಿಟ್ಟು ಹೋಗಿರುವ ಆಕೆಯ ತಂದೆ ಅಂತಿಮ ದರ್ಶನಕ್ಕೆ ಬರಬಹುದೆಂದು ಕುಟುಂಬದವರು ಕಾದಿರುವ ಮನ ಮಿಡಿಯುವ ಸಂಗತಿ ಮೈಸೂರಿನಲ್ಲಿ ನಡೆದಿದೆ.

ನಗರದ ಕನಕಗಿರಿ ನಿವಾಸಿ ನಾಗರಾಜು (ಕೆಂಚಪ್ಪ) ಹಾಗೂ ಇಂದಿರಮ್ಮ ದಂಪತಿ ಪುತ್ರಿ ಎನ್.ಕವನ ಸೋಮವಾರ ಬೆಳಗ್ಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಕೆಲ ತಿಂಗಳ ಹಿಂದೆ ಮನೆ ಬಿಟ್ಟು ಹೋಗಿರುವ ನಾಗರಾಜು, ತನ್ನ ಪುತ್ರಿಯ ಅಂತ್ಯಸಂಸ್ಕಾರಕ್ಕೆ ಬರಬಹುದೆಂದು ಆಕೆಯ ಪಾರ್ಥಿವ ಶರೀರವನ್ನು ಮನೆ ಬಳಿ ಇಟ್ಟು, ಕಾದಿದ್ದಾರೆ. ಎಲ್ಲೇ ಇದ್ದರೂ ಮಂಗಳವಾರ ಮಧ್ಯಾಹ್ನದೊಳಗೆ ಆಗಮಿಸುವಂತೆ ಕುಟುಂಬದವರು ಬೇಡಿಕೊಂಡಿದ್ದಾರೆ.

ಮುಗಿಲು ಮುಟ್ಟಿದ ರೋದನ: ನಾಗರಾಜು ಲೋಡಿಂಗ್ ಕೆಲಸ ಮಾಡಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದರು. ಇವರ ಪತ್ನಿ ಗೃಹಿಣಿ. ದಂಪತಿಗೆ ಮೂವರು ಮಕ್ಕಳು. ಓರ್ವ ಪುತ್ರಿಯು ವಿವಾಹವಾಗಿದ್ದು, ಕವನ ಬಿಜಿಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಸಿಎ ವ್ಯಾಸಂಗ ಮಾಡುತ್ತಿದ್ದರು. ಇವರ ಸಹೋದರ ಕೆಲಸಕ್ಕೆ ಹೋಗುತ್ತಾರೆ. ಆದರೆ ಕುಟುಂಬದ ಆಧಾರಸ್ತಂಭದಂತಿದ್ದ ತಂದೆ ನಾಗರಾಜು, ಯಾವುದೋ ಕಾರಣಕ್ಕೆ ಮೂರು ತಿಂಗಳ ಹಿಂದೆ ಮನೆ ಬಿಟ್ಟು ಹೋಗಿದ್ದಾರೆ. ಎಲ್ಲಾ ಕಡೆ ಹುಡುಕಾಟ ನಡೆಸಿದರೂ ಸುಳಿವು ಸಿಕ್ಕಿಲ್ಲ. ಮನೆಯ ಯಜಮಾನನಿಲ್ಲದೆ ದುಃಖದಲ್ಲಿದ್ದ ಕುಟುಂಬಕ್ಕೆ ಕವನ ಅವರ ಧಾರುಣ ಸಾವಿನಿಂದ ಬರಸಿಡಿಲು ಬಡಿದಂತಾಗಿದೆ. ಮನೆ ಮಗಳನ್ನು ಕಳೆದುಕೊಂಡು ಕಂಗಾಲಾಗಿದ್ದಾರೆ. ಕುಟುಂಬದವರು ಹಾಗೂ ಸಂಬಂಧಿಕರ ರೋದನ ಮುಗಿಲು ಮುಟ್ಟಿದೆ. ತಂದೆ ನಾಗರಾಜು ಕಡೆಯದಾಗಿ ಪುತ್ರಿಯ ಅಂತಿಮ ದರ್ಶನ ಪಡೆಯಲೆಂದು ಕಾದಿದ್ದು, ಸಾಮಾಜಿಕ ಜಾಲತಾಣದ ಮೂಲಕವೂ ಅವರಿಗೆ ಮಾಹಿತಿ ತಿಳಿಸುವ ಪ್ರಯತ್ನ ನಡೆಸಿದ್ದಾರೆ.

ಅಪಘಾತದಲ್ಲಿ ದಾರುಣ ಸಾವು: ಬಿಸಿಎ ವಿದ್ಯಾರ್ಥಿನಿಯಾಗಿದ್ದ ಕವನ ಹಾಗೂ ಸ್ನೇಹಿತೆ ರೇಖಾ ಮತ್ತೋರ್ವ ಸ್ನೇಹಿತೆಯ ಸ್ಕೂಟರ್ ಪಡೆದು ಸೋಮವಾರ ಬೆಳಗ್ಗೆ 11 ಗಂಟೆ ವೇಳೆಯಲ್ಲಿ ಹೂಟಗಳ್ಳಿ–ಕೆಆರ್‌ಎಸ್ ರಸ್ತೆಯಲ್ಲಿ ಹೋಗುತ್ತಿದ್ದಾಗ ಬಿಇಎಂಎಲ್ ಗೇಟ್ ಬಳಿ ಅಪಘಾತ ಸಂಭವಿಸಿದೆ. ನಿಯಂತ್ರಣ ಕಳೆದುಕೊಂಡು ಸ್ಕೂಟರ್ ಡಿವೈಡರ್‌ಗೆ ಡಿಕ್ಕಿ ಹೊಡೆದು ನೆಲಕ್ಕುರುಳಿದೆ. ಘಟನೆಯಲ್ಲಿ ಸ್ಕೂಟರ್ ಚಾಲನೆ ಮಾಡುತ್ತಿದ್ದ ಕವನ ತಲೆಗೆ ತೀವ್ರ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಕೆಯ ಸ್ನೇಹಿತೆ ಅದೃಷ್ಟವಶಾತ್ ಸಣ್ಣ–ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕವನ ಹೆಲ್ಮೆಟ್ ಧರಿಸಿದ್ದರಾದರೂ ಅದನ್ನು ಲಾಕ್ ಮಾಡಿರಲಿಲ್ಲ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಅಪಘಾತ ಸಂಬಂಧ ವಿವಿ ಪುರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಾಗರಾಜು

ಹಣ ದ್ವಿಗುಣಗೊಳಿಸುವ ಆಮಿಷ ತೋರಿ ಗೃಹಿಣಿಗೆ 3 ಲಕ್ಷ ವಂಚನೆ

ಮೈಸೂರು, ಆ.5(ಎಸ್‌ಬಿಡಿ)– ಹಣ ದುಪ್ಪಟ್ಟಾಗುತ್ತದೆ ಎಂದು ಆಮಿಷವೊಡ್ಡಿ ಗೃಹಿಣಿಯೊಬ್ಬರಿಂದ 3 ಲಕ್ಷಕ್ಕೂ ಹೆಚ್ಚು ಹಣವನ್ನು ವಂಚಿಸಿರುವ ಬಗ್ಗೆ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ 34 ವರ್ಷದ ಮಹಿಳೆ ಆಮಿಷಕ್ಕೊಳಗಾಗಿ ಹಣ ಕಳೆದುಕೊಂಡಿದ್ದಾರೆ. ಇವರ ಪತಿ ಖಾಸಗಿ ಸಂಸ್ಥೆ ಉದ್ಯೋಗಿಯಾಗಿದ್ದು, ತಾನೂ ಕೂಡ ಸಂಪಾದಿಸಿ ಕುಟುಂಬಕ್ಕೆ ನೆರವಾಗಬೇಕೆಂದು ವರ್ಕ್ ಫ್ರಂ ಹೋಮ್ ವಂಚನೆ ಜಾಲಕ್ಕೆ ಸಿಲುಕಿ ಮೋಸ ಹೋಗಿದ್ದಾರೆ.

ಗೃಹಿಣಿಯ ವಾಟ್ಸಾಪ್‌ಗೆ ಆ.1ರಂದು ಸಂದೇಶ ಬರುತ್ತದೆ. AWIGN ಕಂಪನಿಯಿಂದ ಅವಿಕಾ ಹೆಸರಿನಲ್ಲಿ ವರ್ಕ್ ಫ್ರಮ್ ಹೋಂ ಮೂಲಕ ಅಧಿಕ ಹಣ ಸಂಪಾದನೆ ಮಾಡಬಹುದು ಎಂದು ತಿಳಿಸಲಾಗುತ್ತದೆ. ಕೆಲವೊಂದು ಟಾಸ್ಕ್‌ಗಳನ್ನು ಕಂಪ್ಲೀಟ್ ಮಾಡಿದರೆ ಹಣ ಡಿಪಾಸಿಟ್ ಮಾಡಲು ಅವಕಾಶ ಸಿಗುತ್ತದೆ. ಹಾಗೆ ಹಣ ಹೂಡಿದರೆ ಕಂಪನಿಯಿಂದ ಡಬ್ಬಲ್(ದುಪ್ಪಟ್ಟು) ನೀಡಲಾಗುತ್ತದೆ ಎಂದು ಆಸೆ ಹುಟ್ಟಿಸಲಾಗುತ್ತದೆ. ಅಲ್ಲದೆ ಟೆಲಿಗ್ರಾಂ ಆಪ್‌ನಲ್ಲಿ ಕೆಲವೊಂದು ಟಾಸ್ಕ್‌ಗಳನ್ನು ಕಂಪ್ಲೀಟ್ ಮಾಡಿದ್ದಕ್ಕೆ 4 ಸಾವಿರ ರೂ. ಬೋನಸ್ ನೀಡಲಾಗಿದೆ.

ಈ ರೀತಿ ಗೃಹಿಣಿಯ ನಂಬಿಕೆ ಗಳಿಸಿದ ವಂಚಕರು ನಂತರ ವಂಚನೆ ಬಲೆ ಬೀಸಿದ್ದಾರೆ. ಗೃಹಿಣಿ ಸಾಲ ಮಾಡಿ, ಆ.2ರಂದು ಸಂಜೆವರೆಗೆ ಫೋನ್‌ಪೇ, ಗೂಗಲ್‌ಪೇ, ಐಎಂಪಿಎಸ್ ಮೂಲಕ ಹಂತ ಹಂತವಾಗಿ ಒಟ್ಟು 3,02,500 ರೂ.ಗಳನ್ನು ಅವರು ತಿಳಿಸಿದ ವಿವಿಧ ಅಕೌಂಟ್‌ಗಳಿಗೆ ಕಳುಹಿಸಿದ್ದಾರೆ. ನಂತರ ಬೋನಸ್ ನೀಡಿಲ್ಲ. ಇದರಿಂದ ಹೆದರಿದ ಗೃಹಿಣಿ ತಮ್ಮ ಹಣ ವಾಪಸ್ ನೀಡುವಂತೆ ಕೇಳಿದ್ದಾರೆ. ಆದರೆ ವಾಪಸ್ ಕೊಡಬೇಕಾದರೆ ಇನ್ನೂ ಹೆಚ್ಚಿನ ಹಣ ಕಳುಹಿಸಬೇಕು ಎಂದಿದ್ದಾರೆ. ಇದರಿಂದ ಮೋಸ ಹೋಗಿದ್ದಾಗಿ ತಿಳಿದು ಬ್ಯಾಂಕ್‌ಗೆ ಹೋಗಿ ತಮ್ಮ ಖಾತೆಯನ್ನು ಬ್ಲಾಕ್ ಮಾಡಿಸಿದ್ದಾರೆ. ಆದರೆ ಅವರು ಕಳುಹಿಸಿದ್ದ ಹಣ ಸುರಕ್ಷಿತವಾಗಿರುವ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿಲ್ಲ.

ಈ ಸಂಬಂಧ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸುತ್ತೂರು ಮಠದಲ್ಲಿ ಶ್ರಾವಣಮಾಸ ಪೂಜಾನುಷ್ಠಾನ, ಪ್ರವಚನಕ್ಕೆ ಚಾಲನೆ

ಪ್ರವಚನದಿಂದ ಮನಃಶಾಂತಿ, ಆಲೋಚನಾ ಕ್ರಮ ಉತ್ತಮ

ಡಿಸಿ ಜಿ.ಲಕ್ಷ್ಮೀಕಾಂತರೆಡ್ಡಿ ಅಭಿಮತ

ಮೈಸೂರು,ಆ.5(ಪಿಎಂ)– ಇಂದಿನ ವೇಗದ ಬದುಕಿನಲ್ಲಿ ಪ್ರತಿಯೊಬ್ಬರಲ್ಲೂ ಒತ್ತಡ ಹೆಚ್ಚುತ್ತಿದ್ದು, ಇಂತಹ ಸನ್ನಿವೇಶದಲ್ಲಿ ಪ್ರವಚನ ಆಲಿಸುವುದರಿಂದ ನಮಗೆ ಮನಃಶಾಂತಿ ದೊರೆಯುವ ಜೊತೆಗೆ ನಮ್ಮ ಆಲೋಚನಾ ಕ್ರಮಗಳೂ ಉತ್ತಮಗೊಳ್ಳಲಿವೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಆ.5ರಿಂದ ಸೆ.2ರವರೆಗೆ ಮಠದ ವತಿಯಿಂದ ಹಮ್ಮಿಕೊಂಡಿರುವ ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ವೇಗದ ಜಗತ್ತಿನಲ್ಲಿ ಬೆಳಗಾಗುತ್ತಿದ್ದಂತೆ ವೃತ್ತಿ ಬದುಕಿನ ಒತ್ತಡ ಆರಂಭವಾಗುತ್ತದೆ. ಈ ನಡುವೆ ಕುಟುಂಬದ ಕೆಲಸ ಕಾರ್ಯಗಳಿಗೂ ಸಮಯ ಕೊಡಬೇಕು. ಇಂತಹ ಜಂಜಾಟದ ನಡುವೆ ಪ್ರವಚನದಂತಹ ಕಾರ್ಯಕ್ರಮದಲ್ಲಿ ನಾನೂ ಒಳಗೊಂಡಂತೆ ಬಹಳಷ್ಟು ಜನಕ್ಕೆ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಆದರೆ ಬಿಡುವು ಮಾಡಿಕೊಂಡು ಈ ರೀತಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಿಂದ ಒತ್ತಡ ಮುಕ್ತಗೊಳ್ಳಲು ಸಹಕಾರಿಯಾಗಲಿದೆ ಎಂದು ಹೇಳಿದರು. ಪ್ರತಿಯೊಬ್ಬರಿಗೂ ಜೀವನದಲ್ಲಿ ಮನಃಶಾಂತಿ ಮುಖ್ಯ. ಈ ರೀತಿಯ ಪ್ರವಚನ ಕೇಳುವುದರಿಂದ ಉತ್ತಮ ಸಂದೇಶ ನಮ್ಮ ಮನಮುಟ್ಟಲಿದ್ದು, ಆ ಮೂಲಕ ಮನಃಶಾಂತಿ ದೊರೆಯಲಿದೆ. ಅಂತಹ ಒಳ್ಳೆಯ ಅವಕಾಶವನ್ನು ಪ್ರವಚನಗಳು ಕಲ್ಪಿಸಲಿವೆ. ಹಾಗಾಗಿ ಸುತ್ತೂರು ಮಠದಿಂದ ಶ್ರಾವಣಮಾಸದಲ್ಲಿ ಇಡೀ ತಿಂಗಳು ಪೂಜಾ ಮತ್ತು ಪ್ರವಚನ ಆಯೋಜಿಸಿರುವುದು ಸಂತಸದ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.

ನಾನು ಈ ರೀತಿಯ ಪ್ರವಚನ ಕಾರ್ಯಕ್ರಮಕ್ಕೆ ಹೋಗಿ 25 ವರ್ಷಗಳಿಗೂ ಮೇಲಾಗಿದೆ. ಚಿಕ್ಕವನಾಗಿದ್ದಾಗ ನನ್ನ ಅಜ್ಜಿ ಮತ್ತು ತಾಯಿ ಪ್ರವಚನ ಕಾರ್ಯಕ್ರಮಗಳಿಗೆ ಕರೆದೊಯ್ಯುತ್ತಿದ್ದರು. ಆ ಬಳಿಕ ಯಾವುದೇ ಪ್ರವಚನಕ್ಕೆ ಹೋಗುವಂತಹ ಅವಕಾಶ ದೊರೆಯಲಿಲ್ಲ. ಮಠದಲ್ಲಿ ಆಯೋಜಿಸಿರುವ ಈ ಪ್ರವಚನ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಕ್ಕೆ ಸುತ್ತೂರು ಶ್ರೀಗಳಿಗೆ ಧನ್ಯವಾದ ಅರ್ಪಿಸುತ್ತೇನೆ. ಇಲ್ಲಿ ಪಾಲ್ಗೊಂಡಿರುವುದು ಅತ್ಯಂತ ಸಂತಸ ಉಂಟು ಮಾಡಿದೆ ಎಂದು ಹೇಳಿದರು.

ಬಳಿಕ ‘ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ’ ಕುರಿತು ವಿದುಷಿ ಎಂ.ವಿ.ಶುಭಾ ರಾಘವೇಂದ್ರ ವಾಚನ ನಡೆಸಿಕೊಟ್ಟರೆ, ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಪ್ರವಚನ ನೀಡಿದರು. ಅಂತೆಯೇ ಇದೇ ವಿಚಾರ ಕುರಿತು ಆ.14ರವರೆಗೆ ಹಾಗೂ ಆ.25ರಿಂದ ಸೆ.2ರವರೆಗೆ ಡಾ.ಕೆ.ಅನಂತರಾಮು ಪ್ರವಚನ ನೀಡಲಿದ್ದು, ಆ.14ರವರೆಗೆ ವಿದುಷಿ ಎಂ.ವಿ. ಶುಭಾ ರಾಘವೇಂದ್ರ ವಾಚನ ನಡೆಸಿಕೊಡಲಿದ್ದಾರೆ. ಆ.25ರಿಂದ ಸೆ.2ರವರೆಗೆ ವಿದುಷಿ ಧರಿತ್ರಿ ಆನಂದರಾವ್ ವಾಚನ ನಡೆಸಿಕೊಡಲಿದ್ದಾರೆ. ಆ.15ರಿಂದ 24ರವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಪ್ರವಚನ ನೀಡಲಿದ್ದು, ವಿದುಷಿ ವಸಂತ ವೆಂಕಟೇಶ್ ಅವರು ವಾಚನ ನಡೆಸಿಕೊಡಲಿದ್ದಾರೆ. ಪ್ರತಿದಿನ ಸಂಜೆ 6.30ಕ್ಕೆ ಪ್ರವಚನ–ವಾಚನ ಕಾರ್ಯಕ್ರಮ ನಡೆಯಲಿದೆ. ಇದಕ್ಕೂ ಮುನ್ನ ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ.

ಇಂದಿನ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಚಾಮರಾಜನಗರ ತಾಲೂಕು ಹರವೆಯ ಶ್ರೀ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತ ಎ.ಎನ್.ರಘುನಂದನ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ನಗರದ ವಿವಿಧ ಬಡಾವಣೆಗಳಿಂದ ಭಕ್ತರು ಆಗಮಿಸಿದ್ದರು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮಕ್ಕೆ ಸೋಮವಾರ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಚಾಲನೆ ನೀಡಿದರು. ಸುತ್ತೂರು ಶ್ರೀಗಳು ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹೆಚ್‌ಡಿಕೆ-ಡಿಕೆಶಿ ವಾಕ್ಪಂಥಾ..!

ಗನ್ ಇಟ್ಟು ಸದಾಶಿವನಗರದಲ್ಲಿ ವಿಧವೆಯರ ಸೈಟ್ ಕಬ್ಜ...!

ಡಿಕೆಶಿ ವಿರುದ್ಧ ಎಚ್‌ಡಿಕೆ ಗಂಭೀರ ಆರೋಪ

ಚನ್ನಪಟ್ಟಣ, ಆ. 5– ಬಿಜೆಪಿ-ಜೆಡಿಎಸ್ ನಡೆಸುತ್ತಿರುವ 'ಮೈಸೂರು ಚಲೋ' ಪಾದಯಾತ್ರೆಯು ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ರಥಯಾತ್ರೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಮೈಸೂರು ಚಲೋ ಪಾದಯಾತ್ರೆಯ ಮೂರನೇ ದಿನ ಚನ್ನಪಟ್ಟಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಕುಮಾರಸ್ವಾಮಿ, ಪಾದಯಾತ್ರೆ ಮೈಸೂರು ತಲುಪುವುದರ ಒಳಗಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರ ಪತನಗೊಳ್ಳಲಿದೆ ಎಂದು ಅವರು ಭವಿಷ್ಯ ನುಡಿದರು.

ತಮ್ಮ ಭಾಷಣದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸುವುದನ್ನು ಇಂದೂ ಕೂಡ ಮುಂದುವರೆಸಿದ ಅವರು, ಕಂಡ ಕಂಡವರ ಆಸ್ತಿಗಳನ್ನು ಸರಣಿಯಾಗಿ ಕಬ್ಜ ಮಾಡುತ್ತಿರುವ ವ್ಯಕ್ತಿಯೊಬ್ಬ ನನ್ನ ಆಸ್ತಿ, ನನ್ನ ತಂದೆಯವರ ಆಸ್ತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ, ಅವರು ಮಾಡುತ್ತಿರುವ ಅನಾಚಾರ, ಅಕ್ರಮಗಳ ಬಗ್ಗೆ ನೊಣವಿನಕೆರೆ ಅಜ್ಜಯ್ಯನ ಮುಂದೆ ಬಂದು ಪ್ರಮಾಣ ಮಾಡಲಿ ಎಂದು ಮತ್ತೆ ಸವಾಲು ಹಾಕಿದರು.

ಸದಾಶಿವನಗರದಲ್ಲಿ ಐವರು ವಿಧವಾ ತಾಯಂದಿರ ಬಳಿ ನಿವೇಶನಗಳ ಸೇಲ್ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಆ ನಿವೇಶನಕ್ಕೆ ಸಂಪೂರ್ಣವಾಗಿ ಹಣ ಕೊಟ್ಟಿಲ್ಲ. ಕಾಂಗ್ರೆಸ್ ನಾಯಕ ಅಲ್ಲಂ ವೀರಭದ್ರಪ್ಪ ಅವರು ಒಂದು ನಿವೇಶನ ಖರೀದಿ ಮಾಡುವುದಾಗಿ ಅಡ್ವಾನ್ಸ್ ಕೊಡುತ್ತಾರೆ. ಆದರೆ, ಅವರು ಪೂರ್ಣ ಮೊತ್ತ ಕೊಡುವುದಿಲ್ಲ. ಆಮೇಲೆ ಈ ವ್ಯಕ್ತಿ ಮಧ್ಯಪ್ರವೇಶ ಮಾಡುತ್ತಾರೆ. ಈ ವ್ಯಕ್ತಿ ಮಂತ್ರಿಯಾದ ಮೇಲೆ ರಾತ್ರೋರಾತ್ರಿ ಅವರನ್ನು ಕರೆಸಿ ಹೆದರಿಸಿ, ಬೆದರಿಸಿ ರುಜು ಹಾಕಿಸಿಕೊಂಡಿದ್ದಾರೆ. ಇಂಥ ವ್ಯಕ್ತಿ ದೇವೇಗೌಡರ ಬಗ್ಗೆ ಮಾತನಾಡುತ್ತಾರೆ. ಅವರ ಹಾಗೆ ನಾವು ಮಾಡಿಲ್ಲ ಎಂದು ಗುಡುಗಿದರು.

ಗನ್ ಇಟ್ಟು ವಿಧವಾ ತಾಯಂದಿರ ನಿವೇಶನಗಳನ್ನು ರಿಜಿಸ್ಟರ್ ಮಾಡಿಸಿಕೊಂಡವರು ನೀವು, ಅನ್ಯಾಯವಾಗಿ ಕಂಡವರ ಆಸ್ತಿಯನ್ನು ಕಬ್ಜ ಮಾಡಿದವರು ನೀವು. ಇಂಥ ಕೆಟ್ಟ ಹಿನ್ನೆಲೆಯ ನೀವು ನನ್ನ ಬಗ್ಗೆ ಮಾತನಾಡುತ್ತಿದ್ದೀರಿ. ಬನ್ನಿ ಪ್ರಮಾಣ ಮಾಡೋಣ. ಅಜ್ಜಯ್ಯನ ಮುಂದೆ ಆಗಲಿ, ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ಅಮ್ಮನ ಮುಂದೆ ಆಗಲಿ ಪ್ರಮಾಣ ಮಾಡೋಣ. ನೀವೇ ವಿಧಾನಸೌಧಕ್ಕೆ ಬನ್ನಿ ಎಂದು ಕರೆದಿದ್ದಿರಲ್ಲ ಅಲ್ಲಿಗೂ ಬರಲು ನಾನು ತಯಾರಿದ್ದೇನೆ. ಬನ್ನಿ ಚರ್ಚೆ ಮಾಡೋಣ ಎಂದು ಕುಮಾರಸ್ವಾಮಿ ಅವರು ಡಿಕೆ ಶಿವ ಕುಮಾರ್‌ಗೆ ಸವಾಲು ಹಾಕಿದರು.

ಈಗ ಚನ್ನಪಟ್ಟಣಕ್ಕೆ ಬಂದು ಏನೋ ಉದ್ಧಾರ ಮಾಡುತ್ತೇವೆ ಎಂದು ಅಣ್ಣ, ತಮ್ಮ ಬಂದಿದ್ದಾರೆ. ನೂರಾರು ವರ್ಷ ಬಾಳಿ ಬದುಕಿರುವ ಮನೆಗಳಿಗೆ ಈಗ ಬಂದು ಹಕ್ಕುಪತ್ರ ಕೊಡುತ್ತಾರಂತೆ. ಹಾಗಾದರೆ, ರಾಜ್ಯದಲ್ಲಿ ನಿಮ್ಮ ಸರಕಾರ ಬಂದು ಒಂದೂವರೆ ವರ್ಷ ಆಯಿತಲ್ಲವೇ ಇಷ್ಟು ದಿನ ಏನು ಮಾಡ್ತಿದ್ರಪ್ಪ? ಎಂದು ಸಚಿವರು ತೀಕ್ಷ್ಣವಾಗಿ ಪ್ರಶ್ನಿಸಿದರು.

ಕಲ್ಲು ಗೋಡೌನ್: ಚನ್ನಪಟ್ಟಣವನ್ನು ಉದ್ಧಾರ ಮಾಡಿರುವವರು ಯಾರು ಎಂಬುದು ಇಲ್ಲಿನ ಜನರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಇಲ್ಲಿನ ಮತ್ತಿಕೆರೆ ಬಳಿ ಕಲ್ಲು ಗೋಡೌನ್ ಇದೆ ಅಲ್ಲಿ ಹೋಗಿ ನೋಡಿ, ಎಷ್ಟು ಕಲ್ಲುಗಳನ್ನು ತಂದು ಇಲ್ಲಿ ಗುಡ್ಡೆ ಹಾಕ್ತಿದ್ದೀರಿ? ಎಲ್ಲೆಲ್ಲಿಗೆ ಕಳಿಸುತ್ತಿ ದ್ದೀರಿ? ನನಗೆ ಗೊತ್ತಿಲ್ಲದ ವಿಷಯವೇ? ಎಂದ ಕೇಂದ್ರ ಸಚಿವರು, ಬಹಿರಂಗ ಸಭೆಯಲ್ಲಿ ಆ ಕಲ್ಲು ಗೋದಾಮುಗಳ ಫೋಟೋಗಳನ್ನು ತೋರಿಸಿ, ಇದಕ್ಕೆ ಉತ್ತರ ಕೊಡಪ್ಪಾ? ಎಂದು ಪ್ರಶ್ನಿಸಿದರು.

ದಲಿತರ ಕುಟುಂಬ ಹಾಳು ಮಾಡಿದ್ದೀರಾ: ಕನಕಪುರದ ಎಷ್ಟು ದಲಿತ ಕುಟುಂಬಗಳ ಹಾಳು ಮಾಡಿದ್ದೀರಿ ನೀವು. ಆ ಜನ ಕಣ್ಣಲ್ಲಿ ನೀರು ಹಾಕಿದ್ದನ್ನು ನಾನು ನೋಡಿದ್ದೇನೆ. ಕುಮಾರಸ್ವಾಮಿ ರೈತನ ಮಗ ಅಲ್ಲ ಎಂದಿದ್ದಾರೆ ಅವರು. ಪ್ಯಾಂಟ್ ತೆಗೆದು ಪಂಚೆ ಹಾಕಿದರೆ ರೈತ ಅಲ್ಲ ಎಂದು ಹೇಳಿದ್ದಾರೆ. ಬನ್ನಿ, ಬಿಡದಿಗೆ ಬಂದು ನೋಡಿ. 20 ಟನ್ ಕೊಬ್ಬರಿ ಬೆಳೆದಿದ್ದೇನೆ. ತೆಂಗು, ಬಾಳೆ, ಅಡಕೆಯಲ್ಲಿ 50 ಲಕ್ಷ ರೂಪಾಯಿ ರೈತನಾಗಿ ಸಂಪಾದನೆ ಮಾಡಿದ್ದೇನೆ. ನಿಮ್ಮಿಂದ ಇದು ಸಾಧ್ಯವೇ? ಎಂದು ಟಾಂಗ್ ಕೊಟ್ಟರು.

ಚನ್ನಪಟ್ಟಣಕ್ಕೆ ಕುಮಾರಸ್ವಾಮಿ ಮತ್ತು ದೇವೇಗೌಡರು ಏನು ಮಾಡಿದ್ದಾರೆ ಎಂದು ಕೇಳುತ್ತಿದ್ದಾರೆ. ದೇವೇಗೌಡರ ಕಾಲದಲ್ಲಿ ಇಗ್ಗಲೂರು ಜಲಾಶಯ ಕಟ್ಟಲು ಹೋದರು. ಕೆಲವರು ಆಗಲ್ಲ ಎಂದು ಹೇಳಿದರು. ಆದರೆ, ದೇವೇಗೌಡರು ಪಟ್ಟು ಹಿಡಿದು ಆ ಯೋಜನೆಯನ್ನು ಕಾರ್ಯಗತ ಮಾಡಿದರು. ಇಂದು ಈ ನೆಲಕ್ಕೆ ಆ ಜಲಾಶಯ ಜೀವನಾಡಿ ಆಗಿದೆ ಎಂದು ಕುಮಾರಸ್ವಾಮಿ ಅವರು ಡಿಕೆಶಿಗೆ ತಿರುಗೇಟು ನೀಡಿದರು.

ಚನ್ನಪಟ್ಟಣದಲ್ಲಿ ಕೆರೆಗಳನ್ನು ತುಂಬಿಸುವ ಕೆಲಸ ಕಾಂಗ್ರೆಸ್ ಸರ್ಕಾರದಿಂದ ಆಗಿಲ್ಲ. ನಾನು, ಯಡಿಯೂರಪ್ಪ, ಬೊಮ್ಮಾಯಿ ಸಿಎಂ ಆಗಿದ್ದಾಗ ಕೆರೆಗಳನ್ನು ತುಂಬಿಸಲಾಯಿತು. ಯೋಗೇಶ್ವರ್ ಕೂಡ ಮಂತ್ರಿಯಾಗಿ ಕೆಲಸ ಮಾಡಿದರು. ಕಾಂಗ್ರೆಸ್‌ನವರು ಏನೂ ಮಾಡಿಲ್ಲ ಎಂದು ಅವರು ಕಿಡಿಕಾರಿದರು.

ರಾಜ್ಯದಲ್ಲಿ ನಿಮ್ಮ ಆಡಳಿತ, ನಿರ್ವಹಣೆ ಕೆಟ್ಟದಾಗಿದೆ. ಗ್ಯಾರಂಟಿ ಎಂದು ಕೊಟ್ಟಿದ್ದೀರಿ. ಯಾರಿಗೆ ಲಾಭವಾಗಿದೆ ಅದರಿಂದ, ಒಂದು ಕೈಯ್ಯಲ್ಲಿ ಕೊಟ್ಟು ಹತ್ತು ಕೈಗಳಲ್ಲಿ ಕಿತ್ತುಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಎಷ್ಟಾಗಿದೆ? ರೈತರ ಟಿಸಿ ದರ ಎಷ್ಟಾಗಿದೆ? ಸರಣಿ ಹಗರಣಗಳ ರೀತಿಯಲ್ಲಿ ಸರಣಿ ಬೆಲೆ ಏರಿಕೆ ಮಾಡಿದ್ದೀರಿ. ರೈತರಿಗೆ ಆದಾಯ ಇಲ್ಲ. ರೈತರಿಗೆ ಏನು ಕೊಟ್ಟಿದ್ದೀರಿ? ಬರೀ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದೀರಿ ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ದಲಿತರ ಬಗ್ಗೆ ಇವರು ಚರ್ಚೆ ಮಾಡ್ತಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣ ದರೋಡೆ ಮಾಡಿದ್ದಾರೆ. ಹಣ ದೋಚಿರುವ ಸಿದ್ದರಾಮಯ್ಯ, ಡಿಕೆಶಿ ಇಲ್ಲಿ ಬಂದು ದಲಿತರ ಬಗ್ಗೆ ಚರ್ಚೆ ಮಾಡ್ತೀರಾ? ಎಂದು ಹೆಚ್ಡಿಕೆ ವಾಗ್ದಾಳಿ ನಡೆಸಿದರು.


ಗಿಫ್ಟ್ ಕೂಪನ್ ಹಂಚಿ 136 ಸೀಟು ಗೆದ್ದರು: ನಾವು 136 ಸೀಟು ಗೆದ್ದು ಅಧಿಕಾರಕ್ಕೆ ಬಂದಿದ್ದೇವೆ ಎಂದು ಕಾಂಗ್ರೆಸ್ ನಾಯಕರು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಕೂಪನ್ ಹಂಚಿ ರಾಜಕಾರಣ ಮಾಡಿದೆ. ಲುಲು ಮಾಲ್ ಕೂಪನ್ ಕೊಟ್ಟಿದ್ದಾರೆ. ಮೂರು ಸಾವಿರ, ಐದು ಸಾವಿರ ಕೂಪನ್ ಕೊಟ್ಟಿದ್ದರು. ಅದನ್ನು ತೆಗೆದುಕೊಂಡು ಹೋಗಿ ಲುಲು ಮಾಲ್‌ನಲ್ಲಿ ಕೊಟ್ಟರೆ ಅದರಲ್ಲಿ ದುಡ್ಡೇ ಇಲ್ಲ. ಜನರಿಗೆ ಕಾಂಗ್ರೆಸ್‌ನವರು ಮೋಸ ಮಾಡಿದ್ದು ಹೀಗೆ ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.



ಚನ್ನಪಟ್ಟಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡುತ್ತಿರುವುದು

ನಮ್ಮ ಪಾದಯಾತ್ರೆ ಮೈಸೂರು ತಲುಪುವುದರೊಳಗೆ ಸಿದ್ದರಾಮಯ್ಯ ರಾಜೀನಾಮೆ ನೀಡ್ತಾರೆ...!

ಮಾಜಿ ಸಿಎಂ ಯಡಿಯೂರಪ್ಪ ಭವಿಷ್ಯ



ಚನ್ನಪಟ್ಟಣ, ಆ. 5– ನಮ್ಮ ಪಾದಯಾತ್ರೆ ಮೈಸೂರು ತಲುಪುವುದರ ಒಳಗೆ, ಪಾದ ಯಾತ್ರೆಗೆ ಸಿಕ್ಕ ಜನಬೆಂಬಲವನ್ನು ನೋಡಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಮುಡಾ ಹಾಗೂ ವಾಲ್ಮೀಕಿ ಹಗರಣವನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ನಡೆಸುತ್ತಿರುವ 'ಮೈಸೂರು ಚಲೋ' ಪಾದಯಾತ್ರೆಗೆ 3ನೇ ದಿನವಾದ ಇಂದು ಚನ್ನಪಟ್ಟಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಹಣ ಬಲ, ತೋಳ್ಬಲ, ಮದ್ಯದ ಬಲದಿಂದಲೇ ಈ ಮುಖ್ಯಮಂತ್ರಿ ಅಧಿಕಾರದಲ್ಲಿ ಇದ್ದಾರೆ. ಹಲವಾರು ಭ್ರಷ್ಟಾಚಾರ ಹಗರಣಗಳಲ್ಲಿ ಭಾಗಿಯಾಗಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಪ್ರಾಮಾಣಿಕ ವಾಗಿದ್ದರೆ ಕೂಡಲೇ ಸಿದ್ದರಾಮಯ್ಯನವರಿಂದ ಸಿಎಂ ಸ್ಥಾನಕ್ಕೆ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು. ಮುಖ್ಯಮಂತ್ರಿಗಳಿಗೆ ನಾಚಿಕೆ ಎಂಬುದಿದ್ದರೆ ಅವರು ರಾಜೀನಾಮೆ ನೀಡಲಿ ಎಂದು ಯಡಿಯೂರಪ್ಪ ಆಗ್ರಹಿಸಿದ್ದಾರೆ.

ಸರ್ಕಾರಿ ಅಧಿಕಾರಿಗಳ ವರ್ಗಾವಣೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿದ ಯಡಿಯೂರಪ್ಪ, ಪೊಲೀಸ್ ಅಧಿಕಾರಿಗಳ ಆತ್ಮಹತ್ಯೆಯ ಉದಾಹರಣೆಗಳನ್ನು ಉಲ್ಲೇಖಿಸಿ, ಇಂತಹ ನಾಚಿಕೆಗೇಡಿನ ಸರ್ಕಾರ ಮುಂದುವರೆಯ ಬಾರದು ಎಂದು ಹೇಳಿದರು. ಬಿಜೆಪಿ–ಜೆಡಿ(ಎಸ್) ಮೈತ್ರಿ ಶಾಶ್ವತವಾಗಿದೆ ಎಂದ ಅವರು, ಭವಿಷ್ಯದಲ್ಲಿ ಬಿಜೆಪಿ–ಜೆಡಿ(ಎಸ್) ಸೇರಿ ಸರ್ಕಾರ ರಚಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಮೈಸೂರು ಚಲೋ ಪಾದಯಾತ್ರೆ ವೇಳೆ ಹೃದಯಾಘಾತ: ಬಿಜೆಪಿ ಕಾರ್ಯಕರ್ತೆ ಸಾವು

ಬೆಂಗಳೂರು: ಬಿಜೆಪಿ ಹಾಗೂ ಜೆಡಿಎಸ್‌ನಿಂದ ನಡೆಯುತ್ತಿರುವ ಮೈಸೂರು ಚಲೋ ಪಾದಯಾತ್ರೆ ವೇಳೆ ಬಿಜೆಪಿ ಕಾರ್ಯಕರ್ತೆಯೊಬ್ಬರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಮೃತ ಮಹಿಳೆಯನ್ನು ಬಸವನಗುಡಿಯ ಗೌರಮ್ಮ ಎಂದು ಗುರುತಿಸಲಾಗಿದೆ. ಬಹಿರಂಗ ಸಭೆಗೂ ಮುನ್ನ ನಡೆದು ಬರುತ್ತಿರುವಾಗ ಅವರಿಗೆ ಹೃದಯಾಘಾತವಾಗಿದೆ. ಪರಿಣಾಮ ಸ್ಥಳದಲ್ಲೇ ಅವರು ಸಾವನ್ನಪ್ಪಿದ್ದಾರೆ.

ಭಾಷಣ ಮಧ್ಯೆಯೇ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತೆರಳಿ ಅಂತಿಮ ದರ್ಶನ ಪಡೆದಿದ್ದಾರೆ.

ವಾಲ್ಮೀಕಿ ಹಗರಣ ಹಾಗೂ ಮುಡಾ ಹಗರಣದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಮೈಸೂರು ಚಲೋ ಪಾದಯಾತ್ರೆ ನಡೆಸುತ್ತಿದ್ದು, ಪಾದಯಾತ್ರೆ ಮೂರನೇ ದಿನಕ್ಕೆ ಕಾಲಿಟ್ಟಿದೆ.

ಬಿಜೆಪಿಯವರನ್ನ ಬ್ಲಾಕ್‌ಮೇಲ್ ಮಾಡಿ ಸಚಿವ ಸ್ಥಾನ ಗಿಟ್ಟಿಸಿಕೊಂಡಿದ್ದಿಯಾ...

- ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ
- ನೀನು ಅಧಿಕಾರದಲ್ಲಿದ್ದಾಗ ಕನಕಪುರ ಸುತ್ತಮುತ್ತ ಮಾಡಿರುವ ಆಸ್ತಿ ಪಟ್ಟಿ ಕೊಡಪ್ಪಾ...!

ಮದ್ದೂರು, ಆ.5– ವಿಜಯೇಂದ್ರ, ಅಶೋಕ್, ಕುಮಾರಸ್ವಾಮಿ ಅವರೇ ಸುಮ್ಮನೆ ಪಾದಯಾತ್ರೆ ಮಾಡುವುದಲ್ಲ ನಮ್ಮ ಪ್ರಶ್ನೆಗಳಿಗೆ ಉತ್ತರಕೊಟ್ಟು ಹೆಜ್ಜೆ ಹಾಕಿ. ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅವರನ್ನು ಮುಟ್ಟುವುದು ನಿಮ್ಮ ಹಣೆಯಲ್ಲಿ ಬರೆದಿಲ್ಲ. ಹಿಂದುಳಿದ ವರ್ಗದ ನಾಯಕ ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವುದನ್ನು ನಿಮಗೆ ಸಹಿಸಲು ಆಗುತ್ತಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಸೋಮವಾರ ಜನಾಂದೋಲನ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾಷಣದುದ್ದಕ್ಕೂ ಬಿಜೆಪಿ ಮತ್ತು ಜೆಡಿಎಸ್ ನಾಯಕರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಅದರಲ್ಲೂ ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

10 ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ತೆಗೆಯುವುದಾಗಿ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಲು ಬ್ರಿಟಿಷರ ಕೈಯಲ್ಲೇ ಆಗಲಿಲ್ಲ. ಇನ್ನು ಕುಮಾರಸ್ವಾಮಿ ಕೈಯಲ್ಲಿ ಆಗುತ್ತಾ? ಎಂದು ತಿರುಗೇಟು ನೀಡಿದರು.

ಹೆದರುವ ಮಗ ನಾನಲ್ಲ: ಡಿನೋಟಿಫಿಕೇಶನ್ ಪ್ರಕರಣದಲ್ಲಿ ಯಡಿಯೂರಪ್ಪರನ್ನು ಜೈಲಿಗೆ ಕಳುಹಿಸಿದ್ದು ಯಾರು? ನೀವು ಧರ್ಮಸ್ಥಳಕ್ಕೆ ಹೋಗಿ ಆಣೆ ಮಾಡಿದ ನಂತರ ಏನಾಯಿತು? ಎಂಬುದನ್ನು ನೀವೇ ಚರ್ಚೆ ಮಾಡಿಕೊಳ್ಳಿ. 'ಶಿವಕುಮಾರ್ ಅಪ್ಪ ಅಮ್ಮನಿಗೆ ಹುಟ್ಟಿಲ್ಲ' ಎಂದು ಹೇಳಿದ್ದ ಕುಮಾರಸ್ವಾಮಿ ಸಾತನೂರಿಗೆ ಬಂದು ಕ್ಷಮೆ ಕೇಳಿದ್ದ. ಯಾರಿಗೂ ಹೆದರದ ದೊಡ್ಡ ಆಲದಹಳ್ಳಿ ಕೆಂಪೇಗೌಡರ ಮಗನಾದ ನಾನು ಇಂದು ನಿಮ್ಮ ಪಾದಯಾತ್ರೆಗಳಿಗೆಲ್ಲ ಹೆದರುವ ಮಗ ನಾನಲ್ಲ ಎಂದು ತಿರುಗೇಟು ನೀಡಿದರು.

1985ರಿಂದಲೂ ತಿಕ್ಕಾಟ: ಕುಮಾರಸ್ವಾಮಿ, ನಾವು ನಿಮ್ಮ ಪೆನ್‌ಡ್ರೈವ್ ವಿಚಾರಕ್ಕೆ ಬಂದಿದ್ದೇವೆಯೇ? ನೀನುಂಟು ನಿಮ್ಮ ಅಣ್ಣ, ತಮ್ಮಂದಿರು ಉಂಟು. ಪೆನ್‌ಡ್ರೈವ್ ಹಿಂದೆ ಮಹಾನಾಯಕ ಇದ್ದಾರೆ ಎಂದು ಹೇಳಿದ್ದ ನೀನು ಮಾತಿಗೆ ಬದ್ಧನಾಗಿ ಇರಬೇಕಿತ್ತು. ನನ್ನ ಬಗ್ಗೆ ಮಾತನಾಡಲಿಲ್ಲ ಅಂದರೆ ನಿನಗೆ ನಿದ್ರೆ ಬರುವುದಿಲ್ಲ ಎನ್ನುವುದು ಗೊತ್ತಿದೆ. ಇದು ಇವತ್ತಿನದ್ದಲ್ಲ, 1985ರಿಂದ ನಿಮ್ಮ ಕುಟುಂಬದ ಹಾಗೂ ನನ್ನ ನಡುವೆ ತಿಕ್ಕಾಟ ನಡೆಯುತ್ತಿದೆ ಎಂದರು.

ಕುಮಾರಣ್ಣ ನೀನು ಕಬ್ಬಿಣ!: ಕಬ್ಬಿಣದ ಮಂತ್ರಿ ಕುಮಾರಣ್ಣ, ನೀವು ಮತ್ತು ಬಿಜೆಪಿಯವರು ಕಬ್ಬಿಣದಿಂದ ಕತ್ತರಿ ತಯಾರು ಮಾಡುವವರು. ನಾವು ಸೂಜಿ ತಯಾರು ಮಾಡುತ್ತೇವೆ. ನೀವು ಸಮಾಜವನ್ನು ಜಾತಿ, ಧರ್ಮದ ಹೆಸರಿನಲ್ಲಿ ಕತ್ತರಿಸುವವರು, ನಾವು ಸಮಾಜವನ್ನು ಒಗ್ಗೂಡಿಸಿ ಹೊಲಿಯುವವರು. ಇದೇ ನಮಗೂ ನಿಮಗೂ ಇರುವ ವ್ಯತ್ಯಾಸ. ಕುಮಾರಣ್ಣ ಈ ಹಿಂದೆ ಏನೇನು ಮಾತನಾಡಿದ್ದೆ? ಯಾರ ಗುಣಗಾನ ಮಾಡಿದ್ದೆ? ಎಲ್ಲವನ್ನೂ ಮೈಸೂರು ಮತ್ತು ಮಂಡ್ಯ ಸಮಾವೇಶಗಳಲ್ಲಿ ತೋರಿಸುತ್ತೇನೆ ಎಂದು ಎಚ್ಚರಿಕೆ ನೀಡಿದರು.



ನನ್ನ ಅಧ್ಯಕ್ಷತೆಯಲ್ಲಿ ಮತ್ತು ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ 136 ಸ್ಥಾನಗಳನ್ನು ಗೆದ್ದಿದೆ. ನಿನ್ನ ಅಧ್ಯಕ್ಷತೆಯಲ್ಲಿ ಗೆದ್ದಿದ್ದು ಕೇವಲ 19 ಸ್ಥಾನಗಳು ಮಾತ್ರ. ಲೋಕಸಭೆ ಚುನಾವಣೆಯಲ್ಲಿ ಎರಡು ಸೀಟು ಗೆದ್ದು, ಬಿಜೆಪಿಯವರನ್ನು 'ಬ್ಲ್ಯಾಕ್‌ಮೇಲ್' ಮಾಡಿ ಸಚಿವ ಸ್ಥಾನ ಗಿಟ್ಟಿಸಿಕೊಂಡಿದ್ದೀಯಾ ಎಂದರು.

ಲೂಟಿ, ಹಗರಣಕ್ಕೆ ಉತ್ತರ ಕೊಡಿ: 'ನನ್ನ, ನಿನ್ನ ಆಸ್ತಿಯ ಪಟ್ಟಿಯಿದೆ. ನಿನ್ನ ಬೇನಾಮಿಯಾದ ಸಹೋದರನ ಆಸ್ತಿಯ ಪಟ್ಟಿ ಕೊಡಪ್ಪ ಕುಮಾರಣ್ಣ. ನೀನು ಅಧಿಕಾರದಲ್ಲಿ ಇದ್ದಾಗ ಕನಕಪುರ ಸೇರಿದಂತೆ ಇತರೆಡೆ ಮಾಡಿರುವ ಪಟ್ಟಿ ಹೇಳಿದ್ದೇನೆ. ನೀನು ಒಂದು ಪಟ್ಟಿ ಕೊಡು. ಮೊದಲು ಪಾದಯಾತ್ರೆ ಬೇಡ ಎಂದು ನೀನು ಯಾಕೆ ಹೇಳಿದ್ದೆ, ನಂತರ ಏಕೆ ಒಪ್ಪಿಕೊಂಡೆ. ಇದಕ್ಕೆ ಮೊದಲು ಉತ್ತರಿಸು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಯಡಿಯೂರಪ್ಪ ಬೊಮ್ಮಾಯಿ ಕಾಲದಲ್ಲಿ ಎಪಿಎಂಸಿಯಿಂದ 47 ಕೋಟಿ ಲೂಟಿ. ಭೋವಿ ಅಭಿವೃದ್ಧಿ ನಿಗಮದಲ್ಲಿ 87 ಕೋಟಿ, ದೇವರಾಜು ಅರಸು ಟ್ರಕ್ ಟರ್ಮಿನಲ್ 50 ಕೋಟಿ, ಗಂಗಾ ಕಲ್ಯಾಣ ಯೋಜನೆಯಲ್ಲಿ 430 ಕೋಟಿ, ಪಿಎಸ್ಐ ಹಗರಣ, ಪರಶುರಾಮ ಪ್ರತಿಮೆ ಹಗರಣ ಸೇರಿದಂತೆ ಹಲವಾರು ಹಗರಣಗಳು ನಡೆದಿವೆ ಎಂದರು.

ಯಡಿಯೂರಪ್ಪ ಅವರ ಆಪ್ತ ಉಮೇಶ್ ಮನೆಯಲ್ಲಿ 700 ಕೋಟಿಗೂ ಹೆಚ್ಚು ಅಕ್ರಮ ಹಣದ ದಾಖಲೆಗಳು ದೊರೆಯಿತು. ಕೋವಿಡ್ ಸಮಯದಲ್ಲಿ ಹೆಣದ ಮೇಲೆ ಹಣ ಮಾಡಿದರು. ಈ ಲೂಟಿ, ಹಗರಣಗಳಿಗೆ ಮೊದಲು ನೀವು ಉತ್ತರಕೊಡಿ ಎಂದು ಆಗ್ರಹಿಸಿದರು.

ನಿನ್ನ ಧಮ್ಕಿಗೆ ಮುಸ್ಲಿಮರು ಹೆದರುವುದಿಲ್ಲ: ನಮಗೆ ಮತ ನೀಡದ ಮುಸ್ಲಿಮರ ಗತಿ ಏನಾಗುತ್ತದೆ ನೋಡಿ ಎಂದು ಕುಮಾರಸ್ವಾಮಿ ಅವರು ಧಮ್ಕಿ ಹಾಕಿದ್ದಾರೆ. ನೀವು, ನಿಮ್ಮ ತಂದೆ ಮುಸ್ಲಿಂ ಮತದಾರರು ಇಲ್ಲದಿದ್ದರೆ ವಿಧಾನಸಭೆಗೆ ಹೋಗುತ್ತಲೇ ಇರಲಿಲ್ಲ. ಮಿಸ್ಟರ್ ಕುಮಾರಸ್ವಾಮಿ ನಿಮ್ಮ ತಂದೆ 'ಮುಂದಿನ ಜನ್ಮದಲ್ಲಿ ಹುಟ್ಟಿದರೆ ಮುಸಲ್ಮಾನನಾಗಿ ಹುಟ್ಟುತ್ತೇನೆ' ಎಂದು ಹೇಳಿದ್ದರು. ಈ ಮಾತು ಮರೆಯಬೇಡಿ ನೆನಪಿನಲ್ಲಿಟ್ಟುಕೊಳ್ಳಿ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಕುವೆಂಪು ರಚಿಸಿದ ನಾಡಗೀತೆಯಲ್ಲಿ ಸರ್ವ ಜನಾಂಗದ ಶಾಂತಿಯ ತೋಟ ಎಂದು ಕರ್ನಾಟಕವನ್ನು ಕರೆಯಲಾಗಿದೆ. ನಿಮ್ಮ ಗೊಡ್ಡು ಬೆದರಿಕೆಗಳಿಗೆ ಯಾರೂ ಬಗ್ಗುವುದಿಲ್ಲ. ಎಲ್ಲಾ ಧರ್ಮದವರು ಸಹೋದರರಂತೆ ಬಾಳಬೇಕು. ನಿಮ್ಮ ಧಮ್ಕಿಗೆ ಯಾವ ಮುಸಲ್ಮಾನ ಬಂಧುಗಳು ಹೆದರುವುದಿಲ್ಲ ಎಂದು ಗುಡುಗಿದರು.

ಮದ್ದೂರಲ್ಲಿ ಕಾಂಗ್ರೆಸ್ ಜನಾಂದೋಲನ ಸಮಾವೇಶ

ಸಿದ್ದರಾಮಯ್ಯ ಸರ್ಕಾರ ಕೆಡವಲು ಬಿಜೆಪಿ, ಜೆಡಿಎಸ್ ಹುನ್ನಾರ: ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಕಿಡಿ

ಮದ್ದೂರು,ಆ.5(ಮೋಹನ್‌ರಾಜ್)– ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರನ್ನು ಕೆಡವಲು ಬಿಜೆಪಿ ಮತ್ತು ಜೆಡಿಎಸ್ ಸಂಚು ರೂಪಿಸಿದ್ದು, ಎರಡೂ ಪಕ್ಷಗಳು ದೊಡ್ಡ ರೀತಿಯಲ್ಲಿ ಹುನ್ನಾರ ಮಾಡಿವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಕಿಡಿಕಾರಿದರು.

ಸೋಮವಾರ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜನಾಂದೋಲನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಡಾ ಸೈಟ್ ಹಂಚಿಕೆ ವಿರುದ್ಧ ಪಾದಯಾತ್ರೆ ಮಾಡುವ ಮೂಲಕ ರಾಜಕೀಯ ನಾಟಕ ಮಾಡುತ್ತಿದ್ದಾರೆ. ರಾಜಭವನದ ಸಹಾಯದಿಂದ ಸಿದ್ದರಾಮಯ್ಯ ಸರ್ಕಾರ ಅಲುಗಾಡಿಸಲು ಯಡಿಯೂರಪ್ಪ ಪ್ಲಾನ್ ಮಾಡಿದ್ದು, ಅಮಿತ್ ಷಾ ಅವರ ಪರ ನಿಂತಿದ್ದಾರೆ ಎಂದು ಆರೋಪಿಸಿದರು.



ಮದ್ದೂರಿನಲ್ಲಿ ಸೋಮವಾರ ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ಸಿದ್ದರಾಮಯ್ಯ ಪತ್ನಿಯ ಭೂಮಿಯನ್ನು ಮುಡಾದವರು ಕಾನೂನುಬಾಹಿರವಾಗಿ ನಿವೇಶನ ಮಾಡಿ ಹಂಚಿದ್ದರು. ಅದಕ್ಕೆ ಪರ್ಯಾಯವಾಗಿ ಯಡಿಯೂರಪ್ಪ ಸಿಎಂ ಆಗಿದ್ದ ಸಂದರ್ಭದಲ್ಲಿ ಸಿದ್ದರಾಮಯ್ಯ ಪತ್ನಿಗೆ ಸೈಟ್ ಹಂಚಿಕೆಯಾಗಿದೆ ಎಂದ ಅವರು, ಸೈಟ್ ಕೊಟ್ಟವರು ಬಿಜೆಪಿಯವರು ಎಂದರು.

ರಾಜ್ಯಪಾಲರು ಸಿಎಂಗೆ ಅಬ್ರಹಾಂ ಅವರ ದೂರಿನ ಮೇರೆಗೆ ನೋಟಿಸ್ ನೀಡಿದ್ದು, ನಮ್ಮ ಸರ್ಕಾರಕ್ಕೆ ರಾಜ್ಯಪಾಲರು ಮುಡಾ ವಿಚಾರವಾಗಿ ಪತ್ರ ಬರೆದಿದ್ದಾರೆ. ಸಿಎಂ ಸಿದ್ದರಾಮಯ್ಯ ಇದಕ್ಕೆಲ್ಲ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಚುನಾಯಿತ ಮುಖ್ಯಮಂತ್ರಿಗೆ ವಿನಾಕಾರಣವಾಗಿ ನೋಟಿಸ್ ಕೊಟ್ಟಿದ್ದಾರೆ ಎಂದ ಅವರು, ರಾಜಭವನದಲ್ಲಿ ರಾಜ್ಯಪಾಲರು ನ್ಯಾಯಯುತವಾಗಿ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ಮುರುಗೇಶ್ ನಿರಾಣಿ ಅವರ ವಿರುದ್ಧ ಯಾಕೆ ಕ್ರಮ ಇಲ್ಲ? ರಾಜ್ಯಪಾಲರು ಮಾಡಿರುವ ಕ್ರಮ ಅನ್ಯಾಯದಿಂದಾಗಿದ್ದು, ಕನ್ನಡ ನಾಡಿನ ಜನತೆ ಸುಮ್ಮನಿರಲ್ಲ. ಬಿಜೆಪಿ–ಜೆಡಿಎಸ್ ಹುನ್ನಾರ, ಕುತಂತ್ರ ಜನರಿಗೆ ಗೊತ್ತಿದೆ. ಕನ್ನಡಿಗರ ಆಶೀರ್ವಾದದ ಮೇಲೆ ನಮ್ಮ ಸರ್ಕಾರ ಇದೆ. ಬಿಜೆಪಿ –ಜೆಡಿಎಸ್ ನಾಯಕರು ಎಚ್ಚರಿಕೆಯಿಂದ ಇರಲಿ. ಪಾದಯಾತ್ರೆಗೆ ಜನಾಂದೋಲನದ ಮೂಲಕ ತಕ್ಕ ಉತ್ತರ ಕೊಟ್ಟಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾತನಾಡಿ, ಬಿ.ಎಸ್.ಯಡಿಯೂರಪ್ಪ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಜಗಳವನ್ನು ಜನ ಹಾಗೂ ಮಾಧ್ಯಮದವರು ಇನ್ನೂ ಮರೆತಿಲ್ಲ. ನನ್ನ ದ್ವೇಷ ಏನಿದ್ದರೂ ಅಪ್ಪ-ಮಕ್ಕಳ ಮೇಲೆ ಎಂದಿದ್ದ ಯಡಿಯೂರಪ್ಪ ಇದೀಗ ಕುಮಾರಸ್ವಾಮಿ ಜೊತೆ ಕುಚುಕು ಆಗಿದ್ದಾರೆ. ನಮ್ಮ ಕಾಂಗ್ರೆಸ್ ಪಕ್ಷ ನಾಡಿನ ಉದ್ದಗಲಕ್ಕೂ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಕೊರತೆ ಮಾಡಿಲ್ಲ, ಜನರಿಗೆ ನೆರವು ನೀಡುತ್ತಿದೆ. ಈ ಪಾದಯಾತ್ರೆ ಬಿಟ್ಟು ಕರ್ನಾಟಕಕ್ಕೆ ಆಗಿರುವ ಅನ್ಯಾಯವನ್ನು ಕೇಂದ್ರದ ಮುಂದಿಟ್ಟು ರಾಜ್ಯಕ್ಕೆ ಅನುದಾನ ತಂದು ತೋರಿಸಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿಗೆ ಸವಾಲು ಹಾಕಿದರು.

ವಿಶ್ವೇಶ್ವರಯ್ಯ ನಾಲೆಗೆ ಟ್ರ್ಯಾಕ್ಟರ್ ಪಲ್ಟಿ: ರೈತ ಸಾವು

ಪಾಂಡವಪುರ: ಜಮೀನಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ವಿಶ್ವೇಶ್ವರಯ್ಯ ನಾಲೆಗೆ ಟ್ರ್ಯಾಕ್ಟರ್ ಪಲ್ಟಿಯಾಗಿ ರೈತ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಾಳೇನಹಳ್ಳಿ ಗ್ರಾಮದ ಬಳಿ ನಡೆದಿದೆ. ಕಾಳೇನಹಳ್ಳಿ ಗ್ರಾಮದ ರೈತ ಕಾಳೇಗೌಡ ಪುತ್ರ ನವೀನ್(34) ಸಾವನ್ನಪ್ಪಿದವನಾಗಿದ್ದು, ಜಮೀನಿನ ಉಳುಮೆ ಮಾಡುವುದಕ್ಕಾಗಿ ವಿಸಿ ನಾಲೆಯ ಏರಿಯ ಮೇಲೆ ಟ್ರ್ಯಾಕ್ಟರ್ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ನಿಯಂತ್ರಣ ತಪ್ಪಿ ಟ್ರ್ಯಾಕ್ಟರ್ ಸಮೇತ ನವೀನ್ ನಾಲೆಗೆ ಉರುಳಿ ಬಿದ್ದಿದೆ. ನಾಲೆಯ ತುಂಬಾ ರಭಸದಿಂದ



ನೀರು ಹರಿಯುತ್ತಿದ್ದ ಕಾರಣ ನವೀನ್ ಕೊಚ್ಚಿ ಹೋಗಿದ್ದಾನೆ. ಟ್ರ್ಯಾಕ್ಟರ್ ಬಿದ್ದಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ನವೀನ್ ಮೃತದೇಹ ಪತ್ತೆಯಾಗಿದೆ. ಈ ಸಂಬಂಧ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಉಪನ್ಯಾಸಕರಿಗೆ ಕೃತಜ್ಞತೆ ಸಲ್ಲಿಸಿದ ಎಂಎಲ್‌ಸಿ ಕೆ.ವಿವೇಕಾನಂದ



ಹಲಗೂರು ಸರ್ಕಾರಿ ಕಾಲೇಜಿನಲ್ಲಿ ಎಂಎಲ್‌ಸಿ ವಿವೇಕಾನಂದ ಅವರನ್ನು ಸನ್ಮಾನಿಸಲಾಯಿತು.

ಹಲಗೂರು,ಆ.5– ಇಲ್ಲಿನ ಚನ್ನಪಟ್ಟಣ ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ವಿಧಾನಪರಿಷತ್ ಸದಸ್ಯ ವಿವೇಕಾನಂದ ಭೇಟಿ ನೀಡಿ, ಉಪನ್ಯಾಸಕರಿಗೆ ಕೃತಜ್ಞತೆ ಸಲ್ಲಿಸಿದರು.

ಹಲಗೂರು ಸರ್ಕಾರಿ ಪ್ರಥಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಆಲಂಗೂರು ಮಂಜುನಾಥ್ ವಿವೇಕಾನಂದರವರಿಗೆ ಶುಭಾಶಯ ತಿಳಿಸುತ್ತಾ, ಶಿಕ್ಷಕರ ಕ್ಷೇತ್ರದಲ್ಲಿ ಅವರ ಸೇವೆ ಅಪಾರವಾಗಿದೆ ಇವರು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಹೆಚ್ಚು ಸೇವೆ ಸಲ್ಲಿಸಲಿ ಎಂದರು.

ವಿಧಾನಪರಿಷತ್ ಸದಸ್ಯ ವಿವೇಕಾನಂದ ಮಾತನಾಡಿ, ಅತಿ ಹೆಚ್ಚು ಮತಗಳಿಂದ ನನ್ನನ್ನು ಗೆಲ್ಲಿಸಿದ ಎಲ್ಲಾ ಮತದಾರ ಬಂಧುಗಳಿಗೆ ಧನ್ಯವಾದಗಳು. ನನಗೆ ಬರುವ ಆರು ವರ್ಷದ ಗೌರವ ಧನವನ್ನು ಶಿಕ್ಷಕರ ದಿನಾಚರಣೆ ಮತ್ತಿತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮುಡುಪಾಗಿಡುತ್ತೇನೆ. ಯಾವುದೇ ಸಮಸ್ಯೆಗಳಿದ್ದರೂ ಬಗೆಹರಿಸುತ್ತೇನೆ ಎಂದರು.

ಕಾಲೇಜು ವತಿಯಿಂದ ವಿವೇಕಾನಂದ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಆಲಂಗೂರು ಮಂಜುನಾಥ್, ಸಂತೋಷ್ ನಾಯಕ್ ಇನ್ನಿತರರಿದ್ದರು.

ನಾಗಶೆಟ್ಟಿ ಪಾಂಡವಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ

ಪಾಂಡವಪುರ,ಆ.5– ತಾಲೂಕಿನ ಪಿಎಲ್‌ಡಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ನಾಗಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು.

ಬ್ಯಾಂಕ್‌ನ ಹಿಂದಿನ ಅಧ್ಯಕ್ಷ ಎನ್.ಮುರುಳಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನಾಗಶೆಟ್ಟಿ ಹೊರತುಪಡಿಸಿ ಯಾರೊಬ್ಬರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ನಾಗಶೆಟ್ಟಿ ಅವರ ಅವಿರೋಧವಾಗಿ ಆಯ್ಕೆಯನ್ನು ಚುನಾವಣಾಧಿಕಾರಿ ನಿರ್ಮಲಾ ಘೋಷಿಸಿದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ನಾಗಶೆಟ್ಟಿ ಅವರನ್ನು ಎಲ್ಲಾ ನಿರ್ದೇಶಕರು, ಬೆಂಬಲಿಗರು ಅಭಿನಂಧಿಸಿದರು.

ಸಂದರ್ಭದಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷ ಎಂ.ಚನ್ನಯ್ಯ, ಮಾಜಿ ಅಧ್ಯಕ್ಷ ಎಂ.ಸಿ. ಯಶವಂತ್‌ಕುಮಾರ್, ಸಿ.ಪ್ರಕಾಶ್, ಸೋಮಶೇಖರ್, ಎನ್.ಮುರುಳಿ, ಶಿವಣ್ಣ, ರತ್ನಮ್ಮ, ಗೌರಮ್ಮ, ನಾಗೇಗೌಡ, ದಯಾನಂದ್, ಬಾಬು, ಜೆಡಿಎಸ್ ತಾಲೂಕು ಅಧ್ಯಕ್ಷ ಮಲ್ಲೇಶ್, ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷ ಕರೀಗೌಡ, ಗ್ರಾಪಂ ಮಾಜಿ ಸದಸ್ಯ ಬಕೋಡಿ, ವಿದ್ಯಾಮಣಿ ನಾಗಶೆಟ್ಟಿ, ಕಾರ್ಯದರ್ಶಿ ಸಂಪತ್ ಕುಮಾರ್, ನಿವೃತ್ತ ಕಾರ್ಯದರ್ಶಿ ಹುಚ್ಚೇಗೌಡ, ಸಿಬ್ಬಂದಿ ರಚನ, ಪುನೀತ್, ಅರ್ಚನ ಇತರರಿದ್ದರು.



ಪಾಂಡವಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾದ ನಾಗಶೆಟ್ಟಿ ಅವರನ್ನು ಬ್ಯಾಂಕ್ ನಿರ್ದೇಶಕರು ಹಾಗೂ ಇತರ ಮುಖಂಡರು ಅಭಿನಂದಿಸಿದರು.

ಭಾರತೀನಗರದಲ್ಲಿ ಕುರುಬರ ಸಂಘದ ಸಭೆ

ಸಿದ್ದರಾಮಯ್ಯ ಸರ್ಕಾರಕ್ಕೆ ಧಕ್ಕೆ ತಂದರೆ ರಾಜ್ಯಾದ್ಯಂತ ಪ್ರತಿಭಟನೆ



ಭಾರತೀನಗರದ ಸಂಗೊಳ್ಳಿರಾಯಣ್ಣ ಗ್ರಾಮೀಣಾಭಿವೃದ್ಧಿ ಸಂಘದ ಕಚೇರಿಯಲ್ಲಿ ನಡೆದ ಕುರುಬರ ಸಂಘದ ಸಭೆಯಲ್ಲಿ ತಾ.ಪಂ ಮಾಜಿ ಸದಸ್ಯ ಭರತೇಶ್ ಮಾತನಾಡಿದರು.

ಭಾರತೀನಗರ,ಆ.5– ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಕ್ಕೆ ಧಕ್ಕೆ ಉಂಟು ಮಾಡಿದರೆ ಹಿಂದುಳಿದ ಜನಾಂಗದವರೆಲ್ಲರು ಒಟ್ಟಾಗಿ ಸೇರಿ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ತಾಪಂ ಮಾಜಿ ಸದಸ್ಯ ಭರತೇಶ್ ಎಚ್ಚರಿಕೆ ನೀಡಿದರು.

ಭಾರತೀನಗರದ ಸಂಗೊಳ್ಳಿರಾಯಣ್ಣ ಗ್ರಾಮೀಣಾಭಿವೃದ್ಧಿ ಸಂಘದ ಕಚೇರಿಯಲ್ಲಿ ನಡೆದ ಕುರುಬರ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಿದ್ದರಾಮಯ್ಯ ಅವರ ಸರ್ಕಾರವನ್ನು ಪಥನಗೊಳಿಸಲು ಜೆಡಿಎಸ್ ಮತ್ತು ಬಿಜೆಪಿ ನಾಯಕರು ಸಂಚು ರೂಪಿಸುತ್ತಿದ್ದಾರೆ. ಬಿಜೆಪಿ ಸರ್ಕಾರವಿದ್ದಾಗ ಸಾಕಷ್ಟು ಹಗರಣಗಳನ್ನು ಬಿಜೆಪಿ ನಾಯಕರು ಮಾಡಿದ್ದಾರೆ. ಅವುಗಳೆಲ್ಲವನ್ನು ಜನರ ಮುಂದಿಡಲು ಕಾಂಗ್ರೆಸ್ ಸರ್ಕಾರ ಮುಂದಾಗಬೇಕಾಗಿದೆ ಎಂದರು.

ಸಂಗೊಳ್ಳಿರಾಯಣ್ಣ ಗ್ರಾಮೀಣಾಭಿವೃದ್ಧಿ ಸಂಘದ ಅಧ್ಯಕ್ಷ ಹೆಚ್.ರಂಗಸ್ವಾಮಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಡುತ್ತಿರುವ ಜನೋಪಯೋಗಿ ಕೆಲಸಗಳನ್ನು ಸಹಿಸಲಾಗದೆ ವಿರೋಧ ಪಕ್ಷದವರು ಕಿಡಿಕಾರುತ್ತಿದ್ದಾರೆ. ಸಿದ್ದರಾಮಯ್ಯ ಅವರು ಯಾರಿಗೂ ಹೆದರುವಂತಹ ನಾಯಕರಲ್ಲ. ಅವರನ್ನು ಎದುರಿಸುವ ಚಾಳಿಯನ್ನು ಮೊದಲು ಬಿಟ್ಟು ತಾವು ಸಹ ರಾಜ್ಯದ ಅಭಿವೃದ್ದಿಗೆ ಕೈ ಜೋಡಿಸಬೇಕು. ಇಲ್ಲದಿದ್ದರೆ ಜನತೆಯೇ ನಿಮಗೆ ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಉತ್ತರ ನೀಡುತ್ತಾರೆ ಎಂದು ಎಚ್ಚರಿಸಿದರು.

ಗೌರವಾಧ್ಯಕ್ಷ ಕೆ.ಕಾಳಯ್ಯ, ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎಂ.ಜೋಗಯ್ಯ, ಗುತ್ತಿಗೆದಾರ ಅಪ್ಪಾಜಿ, ಜಿಲ್ಲಾ ಕುರುಬರ ಸಂಘದ ಸಂಘಟನಾ ಕಾರ್ಯದರ್ಶಿ ಪೂಜಾರಿ ಮಹೇಶ್, ಗ್ರಾಪಂ ಮಾಜಿ ಅಧ್ಯಕ್ಷ ರವಿಚಂದ್ರ, ಮಾಜಿ ಸದಸ್ಯ ಪುಟ್ಟರಾಜು, ಜಿಲ್ಲಾ ನಿರ್ದೇಶಕ ಬೀರೇಶ್, ಕುರುಬರ ಸಂಘದ ತಾಲೂಕು ನಿರ್ದೇಶಕ ಪುಟ್ಟಸ್ವಾಮಿ, ಭಾರತೀ ಕಾಲೇಜು ಉಪನ್ಯಾಸಕ ಹೆಚ್.ಕೆ.ದೊಡ್ಡಯ್ಯ ಸೇರಿದಂತೆ ಹಲವರಿದ್ದರು.

ಆ.9 ರಂದು ಉದ್ಯೋಗ ಮೇಳ

ಮಂಡ್ಯ,ಆ.5– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ॥ ಹೆಚ್‌ಡಿಎಫ್‌ಸಿ, ಮೆ॥ ಅತ್ಯಾತಿ ಟೆಕ್ನಾಲಜಿ ಪ್ರೈ. ಲಿ., ಮೆ॥ ವಿ5 ಗ್ಲೋಬಲ್ ಸರ್ವಿಸ್ ಪ್ರೈ. ಲಿ., ಮೆ॥ ಇನ್ನೋವಾ ಸೋರ್ಸ್, ಮೆ॥ ಬಂಧನ್ ಬ್ಯಾಂಕ್ ಅಂಡ್ ಮೆ॥ ಗೋಗೊರ್ರಾ ಸಂಸ್ಥೆಗಳ ಸಹಯೋಗದಲ್ಲಿ ಆಗಸ್ಟ್ 9 ರಂದು ಬೆಳಿಗ್ಗೆ 10.30 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ ಉದ್ಯೋಗ ಮೇಳ ನಡೆಯಲಿದೆ. ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳಿಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಮತ್ತು ಡಿಪ್ಲೊಮೊ (ಮೆಕ್ಯಾನಿಕಲ್, ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್) ಹಾಗೂ ಯಾವುದೇ ಪದವಿ ಉತ್ತೀರ್ಣರಾದ 18 ರಿಂದ 35 ವರ್ಷದೊಳಗಿನ ಅಭ್ಯರ್ಥಿಗಳು ತಮ್ಮ ಬಯೋಡೇಟಾಗಳೊಂದಿಗೆ ನೇರ ಸಂದರ್ಶನದಲ್ಲಿ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–295124 ಮತ್ತು 91646–42684, 8970646629, 8660061488 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಮುಡಾ ನಕಾರ; ಇನ್ಯಾರಿಗಾದೆಯೋ...!

ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿದ 4,500ಕ್ಕೂ ಅಧಿಕ ನಿವೇಶನಗಳನ್ನು ಕಳ್ಳೇಪುರಿಯಂತೆ ಹಂಚಿಕೆ ಮಾಡಿ ಸಾವಿರಾರು ಕೋಟಿ ಅವ್ಯವಹಾರ ನಡೆಸಿರುವ ಮುಡಾ ಅಧಿಕಾರಿಗಳು, ಕಾಶ್ಮೀರದ ಪುಲ್ವಾಮಾ ಸ್ಫೋಟದಲ್ಲಿ ದೇಹ ಛಿದ್ರಗೊಂಡ ನಮ್ಮ ಹೆಮ್ಮೆಯ ವೀರ ಯೋಧನ ವಿಧವಾ ಪತ್ನಿಗೆ ನೋವಿನಲ್ಲಿ ನೋವು ನೀಡಿರುವುದು ಮುಡಾ ಅಸ್ತಿತ್ವವನ್ನೇ ಜನ ಪ್ರಶ್ನಿಸುವಂತಿದೆ.

ನಿವೇಶನ ಕೋರಿ ಅರ್ಜಿ ಸಲ್ಲಿಸಿದ ಹುತಾತ್ಮ ಯೋಧನ ಪತ್ನಿಗೆ 'ಪ್ರಾಧಿಕಾರದಿಂದ ನಿವೇಶನ ಹಂಚಿಕೆಗಾಗಿ ಅಧಿಸೂಚನೆ ಹೊರಡಿಸಿ ಅರ್ಜಿ ಕರೆದಾಗ ಆದ್ಯತೆ ಮೇರೆಗೆ ನಿಮ್ಮ ಮನವಿಯನ್ನು ಪರಿಗಣಿಸಲಾಗುವುದು' ಎಂದು ಮುಡಾ ವಲಯ ಕಚೇರಿ–4ರ ವಿಶೇಷ ತಹಸೀಲ್ದಾರ್ ಹಿಂಬರಹ (ಎಂಡೋರ್ಸ್‌ಮೆಂಟ್) ನೀಡಿ ಕೈತೊಳೆದುಕೊಂಡಿದ್ದಾರೆ.

ಕನಕಪುರ ತಾಲೂಕಿನ ಸಾಸಲೆಪುರ ಗ್ರಾಮದ ಹೆಚ್.ಗುರು, ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅವರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕು ಗದಲಿಗೆರೆಯ ಎಸ್. ಕಲಾವತಿ ಅವರನ್ನು ವಿವಾಹವಾಗಿದ್ದರು. ಮದುವೆಯಾಗಿ ಕೇವಲ 10 ತಿಂಗಳಲ್ಲೇ ಗುರು, ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆ ಲೇತ್‌ಪುರ ಎಂಬಲ್ಲಿ ಉಗ್ರರು ನಡೆಸಿದ ಐಇಡಿ ಸ್ಫೋಟಗೊಂಡು 2019ರ ಫೆಬ್ರವರಿ 14ರಂದು ವೀರಮರಣ ಹೊಂದಿದ್ದರು.

ನಿವೇಶನಕ್ಕಾಗಿ ಅರ್ಜಿ: 8 ವರ್ಷಗಳ ಕಾಲ ಸೇನೆಯಲ್ಲಿ ಸೇವೆ ಸಲ್ಲಿಸಿದ ಪತಿ ಪುಲ್ವಾಮಾದಲ್ಲಿನ ಉಗ್ರರ ದಾಳಿಯ ಸ್ಫೋಟದಲ್ಲಿ ವೀರಮರಣ ಹೊಂದಿರುವುದರಿಂದ ರಾಜ್ಯ ಸರ್ಕಾರದಿಂದ ಯೋಧರ ಅವಲಂಬಿತರಿಗೆ ನೀಡುವ ಉಚಿತ ನಿವೇಶನ ಮಂಜೂರು ಮಾಡುವಂತೆ ಕೋರಿ ಗುರು ಅವರ ಪತ್ನಿ ಕಲಾವತಿ 2020ರ ಜನವರಿ 16ರಂದು ಬೆಂಗಳೂರಿನ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕರಿಗೆ ಮನವಿ ಸಲ್ಲಿಸಿದ್ದರು.

ನಿವೇಶನ ನೀಡಲು ಶಿಫಾರಸ್ಸು: ಕಲಾವತಿ ಅವರ ಮನವಿ ಅನ್ವಯ ಯುದ್ಧ ಕಾರ್ಯಾಚರಣೆ ವೇಳೆ ಐಇಡಿ ಸ್ಫೋಟದಿಂದ ವೀರಮರಣ ಹೊಂದಿದ ಯೋಧ ಹೆಚ್.ಗುರು ಅವರ ಪತ್ನಿಗೆ ಉಚಿತವಾಗಿ ನಿವೇಶನ ಮಂಜೂರು ಮಾಡುವಂತೆ 2020ರ ಜನವರಿ 9ರಂದು ಮುಡಾ ಆಯುಕ್ತರಿಗೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕರಾದ ನಿವೃತ್ತ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಪತ್ರ ಬರೆದು, ಶಿಫಾರಸ್ಸು ಮಾಡಿದ್ದರು.

ಮುಡಾಗೆ ಮನವಿ: ನಂತರ 2021ರ ಅಕ್ಟೋಬರ್ 11ರಂದು ಮುಡಾಗೆ ಅರ್ಜಿ ಸಲ್ಲಿಸಿದ ಕಲಾವತಿ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕರ ಪತ್ರ ಉಲ್ಲೇಖಿಸಿ ತಮಗೆ ನಿವೇಶನ ನೀಡುವಂತೆ ಮನವಿ ಮಾಡಿದ್ದರಲ್ಲದೇ, 2003ರ ಸೆಪ್ಟೆಂಬರ್ 19ರ ಸರ್ಕಾರದ ಆದೇಶದ ಪ್ರತಿಯನ್ನೂ ಲಗತ್ತಿಸಿ, ಯುದ್ಧದಲ್ಲಿ ಹುತಾತ್ಮರಾದ ಯೋಧರ ಕುಟುಂಬದವರಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳು ನಿವೇಶನ ನೀಡಬೇಕೆಂಬುದನ್ನು ಪ್ರತಿಪಾದಿಸಿದ್ದರು. ನಿವೇಶನ ಕೋರಿ ಕಲಾವತಿ 2022ರ ಜೂನ್ 6, ಜೂನ್ 29ರಂದು ಸಹ ಮುಡಾ ಆಯುಕ್ತರಿಗೆ ಮನವಿ ಮಾಡಿಕೊಂಡಿದ್ದರು.

> **ಸಿಆರ್‌ಪಿಎಫ್‌ನಲ್ಲಿ 8 ವರ್ಷಗಳ ಕಾಲ ಸೇವೆ ಸಲ್ಲಿಸಿದ ನನ್ನ ಪತಿ, ಮದುವೆಯಾದ ಕೇವಲ 10 ತಿಂಗಳಲ್ಲಿ ಹುತಾತ್ಮರಾದರು. ಮಕ್ಕಳಿಲ್ಲದ ನಾನು ಒಂದು ನಿವೇಶನಕ್ಕಾಗಿ ಮುಡಾ ಕಚೇರಿಗೆ ಹಲವು ಬಾರಿ ಅಲೆದು ಆಯುಕ್ತರನ್ನು ಭೇಟಿ ಮಾಡಿದರೂ ಅವರು ನನ್ನ ಮನವಿಗೆ ಸ್ಪಂದಿಸಲಿಲ್ಲ. ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಯೋಧನನ್ನು ಈ ರೀತಿ ನಡೆಸಿಕೊಂಡಿರುವುದು ಘೋರ ಅನ್ಯಾಯ. ಅವರ ತ್ಯಾಗಕ್ಕೆ ಇಲ್ಲಿ ಯಾವ ಬೆಲೆಯೂ ಇಲ್ಲವಾಗಿದೆ. ಮುಡಾದ ಅಧಿಕಾರಿಗಳ ವರ್ತನೆ ಅತ್ಯಂತ ನೋವಿನ ಸಂಗತಿ.**
> **–ಎಸ್.ಕಲಾವತಿ, ಹುತಾತ್ಮ ಗುರು ಪತ್ನಿ**

ಹಿಂಬರಹದ ಉತ್ತರ: ಅವರ ಅರ್ಜಿಗೆ 2022ರ ಜುಲೈ 13ರಂದು ಹಿಂಬರಹ ನೀಡಿದ ಮುಡಾ ಅಧಿಕಾರಿಗಳು, ಹೆಚ್. ಗುರು ವೀರಮರಣ ಹೊಂದಿರುವ ಸಂಬಂಧ ಪಿಂಚಣಿ ಪಡೆಯುತ್ತಿರುವುದಕ್ಕೆ ದಾಖಲಾತಿ, ಮರಣ ಸಮರ್ಥನಾ ಪತ್ರ, ಕುಟುಂಬ ಜೀವಿತ ಸದಸ್ಯರ ದೃಢೀಕರಣ ಪತ್ರ, ವಾಸಸ್ಥಳ ದೃಢೀಕರಣ ಪತ್ರ, ಯಾವುದೇ ನಿವೇಶನವಿರುವುದಿಲ್ಲ ಎಂಬುದಕ್ಕೆ ಪ್ರಮಾಣ ಪತ್ರ, ಆಧಾರ್ ಪ್ರತಿ ಹಾಗೂ ಗುರುತಿನ ಚೀಟಿಗಳ ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆಗಾಗಿ ಕಚೇರಿಗೆ ಖುದ್ದು ಹಾಜರಾಗುವಂತೆ ಸೂಚಿಸಿದ್ದರು.

ಅದರಂತೆ ಹಾಜರಾಗಿ ದಾಖಲಾತಿ ಸಲ್ಲಿಸಿದ ಬಳಿಕ ಮತ್ತೆ 2022ರ ಅಕ್ಟೋಬರ್ 31ರಂದು ಮತ್ತೊಂದು ಹಿಂಬರಹ ನೀಡಿದ ಮುಡಾ ಅಧಿಕಾರಿಗಳು, 'ಉಚಿತ ನಿವೇಶನ ಹಂಚಿಕೆ ಮಾಡಲು ಕ್ರಮ ವಹಿಸಲಾಗಿದ್ದು, ಆಯುಕ್ತರ ಆದೇಶದಂತೆ ಪ್ರಾಧಿಕಾರದಿಂದ ಮುಂದೆ ನಿವೇಶನ ಹಂಚಿಕೆಗಾಗಿ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಆದ್ಯತೆ ಮೇರೆಗೆ ನಿಮ್ಮ ಮನವಿಯನ್ನು ಪರಿಗಣಿಸಲಾಗುವುದು' ಎಂದು ಕಲಾವತಿಯವರಿಗೆ ತಿಳಿಸಿದ್ದಾರೆ.

ಅಂದರೆ, ನಿವೇಶನ ಕೋರಿ ನಾಲ್ಕು ವರ್ಷಗಳ ಹಿಂದೆ ಅರ್ಜಿ ಸಲ್ಲಿಸಿ, ಮುಡಾ ಕಚೇರಿಗೆ ಅಲೆದರೂ, ಕರುಣೆ ತೋರದ ಮುಡಾ ಅಧಿಕಾರಿಗಳ ವರ್ತನೆ ಭಾರಿ ಆಕ್ರೋಶಕ್ಕೆ ಕಾರಣವಾಗಿದೆ.

ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟ–2024

ಭಾರತದ ಮಹಿಳಾ ಟೇಬಲ್ ಟೆನ್ನಿಸ್ ತಂಡ ಕ್ವಾರ್ಟರ್ ಫೈನಲ್‌ಗೆ



ಪ್ಯಾರಿಸ್: ಭಾರತದ ಮಹಿಳಾ ಟೇಬಲ್ ಟೆನಿಸ್ ತಂಡ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಿಂಚಿನ ಪ್ರದರ್ಶನ ತೋರುತ್ತಿದ್ದು, ಸೌತ್ ಪ್ಯಾರಿಸ್ ಅರೆನಾದಲ್ಲಿ ಸೋಮವಾರ ನಡೆದ ರೋಚಕ 16ನೇ ಸುತ್ತಿನ ಪಂದ್ಯದಲ್ಲಿ ಭಾರತ ರೊಮೇನಿಯಾವನ್ನು 3–2 ಅಂತರದಿಂದ ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಅರ್ಚನಾ ಕಾಮತ್ ಮತ್ತು ಶ್ರೀಜಾ ಅಕುಲಾ 11–9, 12–10, 11–7 ಅಂಕಗಳೊಂದಿಗೆ ಪ್ರತಿಸ್ಪರ್ಧಿ ಆದಿನಾ ಡಯಾಕೋನು ಮತ್ತು ಎಲಿಜಬೆತ್ ಸಮರಾ ಅವರನ್ನು ಮಣಿಸಿದರು. ಇದರೊಂದಿಗೆ 1–0 ಅಂತರದಿಂದ ಮುನ್ನಡೆ ಸಾಧಿಸಿದರು. ನಂತರ ಮಣಿಕಾ ಬಾತ್ರಾ ಮುನ್ನಡೆಯನ್ನು 2–0ಗೆ ಕೊಂಡೊಯ್ದರು.

ಮೂರನೇ ಸುತ್ತಿನಲ್ಲಿ ಸ್ಟಾರ್ ಪ್ಯಾಡ್ಲರ್ ಶ್ರೀಜಾ ಅಕುಲಾ ಸೋಲನುಭವಿಸಿದರು. ರೋಚಕ 5 ಗೇಮ್‌ಗಳ ಸುತ್ತಿನಲ್ಲಿ ಅಕುಲಾ, ರೊಮೇನಿಯಾದ ಎಲಿಸಬೆಟ್ಟಾ ಸಮರಾ ವಿರುದ್ಧ ಸೋಲು ಕಂಡರು. ಯೂರೋಪಿಯನ್ ಚಾಂಪಿಯನ್ ಸಮರಾ 8–11, 11–4, 7–11, 11–6, 11–8 ಅಂತರದಿಂದ ಗೆಲುವು ಸಾಧಿಸಿ 2–1 ರಿಂದ ರೊಮೇನಿಯಾದ ಖಾತೆ ತೆರೆದರು. ನಾಲ್ಕನೇ ಸುತ್ತಿನಲ್ಲಿ ಅರ್ಚನಾ ಕಾಮತ್ 11–5, 8–11, 11–7, 11–9 ಸೆಟ್‌ಗಳಿಂದ ಪ್ರತಿಸ್ಪರ್ಧಿ ವಿರುದ್ಧ ಸೋಲು ಕಂಡರು. ಇದರೊಂದಿಗೆ ರೊಮೇನಿಯಾ 2–2 ಅಂತರದಿಂದ ಸಮಬಲ ಸಾಧಿಸಿತು. ನಂತರ ತಂಡವನ್ನು ಸೆಮೀಸ್‌ಗೆ ಕೊಂಡೊಯ್ಯುವ ಹೊರೆ ಮಣಿಕಾ ಅವರ ಹೆಗಲ ಮೇಲಿತ್ತು ಅದರಂತೆ ಅಂತಿಮ ಸುತ್ತಿನಲ್ಲಿ ಪಾಯಿಂಟ್‌ಗಾಗಿ ಕಠಿಣ ಪೈಪೋಟಿ ನಡೆಸಿದ ಮಣಿಕಾ, ಎದುರಾಳಿ ಬರ್ನಾಡೆಟ್ಟೆ ವಿರುದ್ಧ 9–9 ಅಂತರದಿಂದ ಸಮಬಲ ಸಾಧಿಸಿದರು. ಎರಡನೇ ಸುತ್ತನ್ನು ತಮ್ಮದಾಗಿಸಿಕೊಳ್ಳಲು ಬಾತ್ರಾ ಕಠಿಣ ಹೋರಾಟ ನಡೆಸಿದರೂ ಸಾಧ್ಯವಾಗಲಿಲ್ಲ. 5–5 ಅಂತರದಿಂದ ಈ ಸುತ್ತು ಡ್ರಾಗೊಂಡಿತು. ಅಂತಿಮ ಸುತ್ತಿನಲ್ಲಿ ಪುಟಿದೆದ್ದ ಬಾತ್ರಾ ತನ್ನ ಎದುರಾಳಿ ಮೇಲೆ ಪ್ರಾಬಲ್ಯ ಮೆರೆದು 11–8ರಿಂದ ಗೆಲುವು ಸಾಧಿಸಿದರು. ಇದರೊಂದಿಗೆ ಭಾರತ ಕ್ವಾರ್ಟರ್ ಫೈನಲ್‌ಗೂ ಅರ್ಹತೆ ಪಡೆಯಿತು.

PARiS 2024

ಇಂದಿನಿಂದ ಭಾರತದ ಒಲಿಂಪಿಕ್ಸ್ ಕುಸ್ತಿ ಆರಂಭ

ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ಇಂದು ಕುಸ್ತಿಯಲ್ಲಿ ತನ್ನ ಅಭಿಯಾನ ಆರಂಭಿಸಲಿದೆ. ಕಳೆದ ಟೋಕಿಯೊ ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಭಾರತ ಬೆಳ್ಳಿ ಮತ್ತು ಕಂಚು ಸೇರಿ 2 ಪದಕ ಗೆದ್ದಿತ್ತು. ಈ ಬಾರಿ ಶೂಟಿಂಗ್ ಬಿಟ್ಟರೆ ಇದುವರೆಗೆ ಯಾವುದೇ ಸ್ಪರ್ಧೆಯಲ್ಲಿ ಪದಕ ಗೆದ್ದಿಲ್ಲ. ಹಾಗಾಗಿ ಕುಸ್ತಿಪಟುಗಳ ಮೇಲೆ ಪದಕ ನಿರೀಕ್ಷೆ ಇದೆ.



ಹುಟ್ಟುಹಬ್ಬ ಆಚರಣೆ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರಿಗೆ ಮೈಸೂರು ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಿಶಾಂತ್ ಪಟೇಲ್ ನೇತೃತ್ವದಲ್ಲಿ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ಸಂದರ್ಭದಲ್ಲಿ ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ರಾರ್, ಉದ್ಯಮಿ ಪ್ರದೀಪ್ ಸಿಂಗ್, ಯುವ ಮುಖಂಡರಾದ ರಾಘು, ಪವನ್ ಇತರರು ಹಾಜರಿದ್ದರು.

ಇಂದು ಕಾಂಗ್ರೆಸ್ ಸಮಾವೇಶದ ಪೂರ್ವಭಾವಿ ಸಭೆ

ಮೈಸೂರು, ಆ.5– ಮೈಸೂರಿನಲ್ಲಿ ಆ.9ರಂದು ನಡೆಯಲಿರುವ ಕಾಂಗ್ರೆಸ್ ಸಮಾವೇಶಕ್ಕೆ ಸಂಬಂಧಿಸಿದಂತೆ ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಪೂರ್ವಭಾವಿ ಸಭೆ ನಾಳೆ (ಆ.6) ಬೆಳಗ್ಗೆ 10.30ಕ್ಕೆ ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನದಲ್ಲಿ ನಡೆಯಲಿದೆ. ಈ ಸಭೆಯಲ್ಲಿ ಶಾಸಕ ಕೆ. ಹರೀಶ್‌ಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ, ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್, ಮಾಜಿ ಮೇಯರ್ ಬಿ.ಕೆ. ಪ್ರಕಾಶ್ ಸೇರಿದಂತೆ ಮುಂಚೂಣಿ ಮುಖಂಡರು ಭಾಗವಹಿಸಲಿದ್ದಾರೆ ಎಂದು ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ರಾಮಪ್ಪ ತಿಳಿಸಿದ್ದಾರೆ.

ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ

ಮೈಸೂರು ವಿವಿ ಅತಿಥಿ ಉಪನ್ಯಾಸಕರಿಂದ ದಿಢೀರ್ ಪ್ರತಿಭಟನೆ



ಮೈಸೂರು ವಿವಿ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ.ಸಿ.ಪಾಪಣ್ಣ, ಪ್ರಧಾನ ಕಾರ್ಯದರ್ಶಿ ಡಾ.ಎನ್.ಮಲ್ಲಿಕಾರ್ಜುನ ನೇತೃತ್ವದಲ್ಲಿ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸಿದರು.

ಮೈಸೂರು, ಆ.5(ಎಸ್‌ಪಿಎನ್)–ಪದವಿ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮೈಸೂರು ವಿವಿ ಅತಿಥಿ ಉಪನ್ಯಾಸಕರ ಸಂಘದ ಪದಾಧಿಕಾರಿಗಳು, ಮೈಸೂರು ವಿವಿ ಕುಲಪತಿ, ಕುಲಸಚಿವರು ಹಾಗೂ ಸಿಂಡಿಕೇಟ್ ಸದಸ್ಯರ ವಿರುದ್ಧ ಸೋಮವಾರ ರಾತ್ರಿ ಮೈಸೂರು ವಿವಿ ಕ್ರಾಫರ್ಡ್ ಹಾಲ್ ಮುಂಭಾಗ ದಿಢೀರ್ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ಮೈಸೂರು ವಿವಿ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ.ಸಿ.ಪಾಪಣ್ಣ, ಪ್ರಧಾನ ಕಾರ್ಯದರ್ಶಿ ಡಾ.ಎನ್.ಮಲ್ಲಿಕಾರ್ಜುನ ವಹಿಸಿ, ಮೈಸೂರು ವಿವಿ ಕುಲಪತಿ, ಕುಲಸಚಿವರು, ಸಿಂಡಿಕೇಟ್ ಸದಸ್ಯರ ವಿರುದ್ಧ ಧಿಕ್ಕಾರ ಕೂಗಿ, ತಮ್ಮ ಆಕ್ರೋಶ ಹೊರಹಾಕಿದರು.

ನಂತರ ಅಧ್ಯಕ್ಷ ಡಾ.ಸಿ.ಪಾಪಣ್ಣ ಮಾತನಾಡಿ, 2023–24ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರಿಗೆ ಯಾವುದೇ ಸಂದರ್ಶನವಿಲ್ಲದೆ ಯಥಾಸ್ಥಿತಿಯಲ್ಲಿ ಈ ಸಾಲಿನಲ್ಲೂ ಮುಂದುವರೆಸಬೇಕು. ಅಲ್ಲದೆ, ಪ್ರಸ್ತುತ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗಿರುವ ಎರಡು ಗಂಟೆ ಅವಧಿಯ ಕಾರ್ಯಭಾರವನ್ನು ಹಿಂಪಡೆಯಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಮೈಸೂರು ವಿವಿಯ ಪದವಿ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ 2023–24ನೇ ಸಾಲಿನಲ್ಲಿ ವಿವಿಧ ವಿಭಾಗಗಳಲ್ಲಿ 615ಕ್ಕೂ ಹೆಚ್ಚು ಮಂದಿ ಅತಿಥಿ ಉಪನ್ಯಾಸಕರು, ಕಡಿಮೆ ವೇತನಕ್ಕೆ 10ರಿಂದ15 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಇಷ್ಟು ವರ್ಷ ವಿವಿ ವ್ಯಾಪ್ತಿಯ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರನ್ನು ಕಡೆಗಣಿಸಿದರೆ, ಈ ಪ್ರತಿಭಟನೆಯನ್ನೇ ಅಹೋರಾತ್ರಿ ಧರಣಿಯನ್ನಾಗಿ ಪರಿವರ್ತಿಸುತ್ತೇವೆ. ಆಗಲೂ ವಿವಿ ಕುಲಪತಿ, ಕುಲಸಚಿವರು ಹಾಗೂ ಸಿಂಡಿಕೇಟ್ ಸದಸ್ಯರು ನಿರ್ಲಕ್ಷ್ಯವಹಿಸಿದರೆ, ಈ ಧರಣಿಯನ್ನೇ ಅನಿರ್ದಿಷ್ಟಾವಧಿ ಸತ್ಯಾಗ್ರಹವನ್ನಾಗಿ ಮಾರ್ಪಡಿಸುತ್ತೇವೆ ಎಂದು ಹಂತ ಹಂತವಾಗಿ ಹೋರಾಟದ ಕುರಿತು ಮಾಹಿತಿ ನೀಡಿದರು.

ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಬೇಕು: 2023–24ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರನ್ನು ಮತ್ತೆ ಮುಂದುವರೆಸುವಂತೆ ವಿವಿಗೆ ನಿರ್ದೇಶಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉನ್ನತ ಶಿಕ್ಷಣ ಸಚಿವರು ಮಧ್ಯಪ್ರವೇಶಿಸಿ, ನಮ್ಮ ಸಮಸ್ಯೆ ಬಗೆಹರಿಸಬೇಕು. ಅಲ್ಲಿಯವರೆಗೂ ನಮ್ಮ ಧರಣಿಯನ್ನು ವಾಪಸ್ಸು ಪಡೆಯುವುದಿಲ್ಲ. ಈ ಒತ್ತಡಕ್ಕೂ ರಾಜ್ಯ ಸರ್ಕಾರ ಗಮನಹರಿಸದಿದ್ದರೆ, ನಮ್ಮ ಕುಟುಂಬದ ಸದಸ್ಯರೆಲ್ಲರೂ ಧರಣಿಯನ್ನು ನಮ್ಮ ಬೇಡಿಕೆ ಈಡೇರುವವರೆಗೂ ಮುಂದುವರೆಸುತ್ತೇವೆ ಎಂದು ಪ್ರತಿಭಟನಾಕಾರರು ಸ್ಪಷ್ಟಪಡಿಸಿದರು.

ಸಂದರ್ಶನಕ್ಕೆ ವಿರೋಧ: ಮೈಸೂರು ವಿವಿ ವ್ಯಾಪ್ತಿಯ ಪದವಿ ಮತ್ತು ಸ್ನಾತಕೋತ್ತರ ವಿಭಾಗದ ವಿವಿಧ ವಿಷಯದಲ್ಲಿ ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.ಈ 4ರಿಂದ 5 ಬಾರಿ ಸಂದರ್ಶನದಲ್ಲಿ ಭಾಗಿಯಾಗಿದ್ದಾರೆ. ಈಗಲೂ ಸಂದರ್ಶನದ ಮೂಲಕ ಆಯ್ಕೆ ಎಂದರೆ, ಇಷ್ಟು ವರ್ಷದ ಅನುಭವಕ್ಕೆ ಬೆಲೆ ಇಲ್ಲವೇ ಎಂದು ಪ್ರಶ್ನಿಸಿದರು.

ಪ್ರತಿಭಟನೆ ವೇಳೆ ಮೈಸೂರು ವಿವಿ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಉಪಾಧ್ಯಕ್ಷೆ ಡಾ.ಬಿ.ಎಸ್.ದಿನಮಣಿ, ಕಾರ್ಯದರ್ಶಿ ಡಾ.ಹರ್ಷ ವಿಮನ್, ಖಜಾಂಚಿ ಡಾ.ಎಚ್.ವಿ.ರೇಖಾ, ಡಾ.ಎಸ್.ಜಯಶೀಲ, ಜಂಟಿ ಕಾರ್ಯದರ್ಶಿ ಡಾ.ಪಿ. ಮಂಜುನಾಥ, ಡಾ.ಎಸ್.ಸಂತೋಷ್, ಡಾ.ಆರ್. ಸೌಜನ್ಯ, ಡಾ.ಟಿ.ಎಂ.ಪವಿತಾ, ಡಾ.ಆರ್.ಗೋಪಾಲ್, ವಿದ್ಯಾರ್ಥಿ ಮುಖಂಡ ಡಾ.ಮರಿದೇವಯ್ಯ ಸೇರಿದಂತೆ ಇತರರಿದ್ದರು. ಪ್ರತಿಭಟನಾ ಸ್ಥಳದಲ್ಲಿ ಲಕ್ಷ್ಮೀಪುರಂ ಠಾಣಾ ಪೊಲೀಸರು, ಸಿಎಆರ್ ಸಿಬ್ಬಂದಿ, ಗುಪ್ತಚರ ಇಲಾಖೆ ಸಿಬ್ಬಂದಿ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದರು.

ಮೈಸೂರು ಮಿತ್ರ

ಸುಸ್ಥಿರ ಸಮಾಜಕ್ಕೆ ಗುರು-ಹಿರಿಯರ ಮಾರ್ಗದರ್ಶನ ಅವಶ್ಯ

ಮೈಸೂರು ಕೆಪಿಎ ಉಪನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಅಭಿಮತ



ಸುತ್ತೂರು ಶ್ರೀ ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪ್ರವಚನಕ್ಕೆ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಚಾಲನೆ ನೀಡಿದರು.

ಸುತ್ತೂರು,ಆ.5-ಸುಸ್ಥಿರ ಸಮಾಜಕ್ಕೆ ಗುರುಹಿರಿಯರ ಮಾರ್ಗದರ್ಶನ ಅವಶ್ಯ ಎಂದು ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಎಸ್.ಎಲ್. ಚನ್ನಬಸವಣ್ಣ ಅಭಿಪ್ರಾಯಪಟ್ಟರು.

ಸುತ್ತೂರು ಶ್ರೀ ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ದಿವ್ಯಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸಿ, ಶ್ರಾವಣ ಮಾಸದಾದ್ಯಂತ ನಡೆಯುವ ಪ್ರವಚನಕ್ಕೆ ಚಾಲನೆ ನೀಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಉತ್ತಮ ವಿಚಾರಗಳನ್ನು ಜ್ಞಾನಿಗಳಿಂದ, ಅನುಭವಿಗಳಿಂದ ಪಡೆದು ನಮ್ಮ ಮನಸ್ಸಿನಲ್ಲಿ ಶಾಂತಿ, ಸನ್ನಡತೆಯನ್ನು ರೂಢಿಸಿಕೊಳ್ಳುವುದು ಅಗತ್ಯ. ಶರಣರು, ಗುರುಹಿರಿಯರು, ಪೂಜ್ಯರ ಮಾರ್ಗದರ್ಶನದಿಂದ ಸುಸ್ಥಿರ ಸಮಾಜವನ್ನು ಸ್ಥಾಪಿಸಬಹುದು. ಈ ನಿಟ್ಟಿನಲ್ಲಿ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮವು ಜನರಿಗೆ ಸಂಸ್ಕಾರ ಮತ್ತು ಮೌಲ್ಯಗಳನ್ನು ಬಿತ್ತುವಲ್ಲಿ ಸಹಕಾರಿಯಾಗಲಿದೆ ಎಂದು ಚನ್ನಬಸವಣ್ಣ ತಿಳಿಸಿದರು.

ಉದ್ಯಮಿ ಹೆಚ್.ಎಸ್.ರಾಘವೇಂದ್ರ ರಾವ್ ಮಾತನಾಡಿ, ಶ್ರೀ ಸುತ್ತೂರು ಮಠವು ಒಂದು ಅಕ್ಷಯಪಾತ್ರೆ ಇದ್ದಂತೆ, ಅದು ನಿರಂತರವಾಗಿ ಜ್ಞಾನಾನ್ನ ದಾಸೋಹವನ್ನು ಸಮಾಜಕ್ಕೆ ನೀಡುತ್ತಾ ಬಂದಿದೆ ಎಂದು ನುಡಿದರು.

ಮೈಸೂರು ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಮಾತನಾಡಿ, ಶ್ರೀಗಳವರು ಇಡೀ ಸಮಾಜಕ್ಕೆ ಬೆಳಕಾಗಿದ್ದಾರೆ. ಸೂರ್ಯ ಜಾತಿ ಧರ್ಮ ಎನ್ನದೆ ಹೇಗೆ ಬೆಳಗುತ್ತಾನೋ, ಅದೇ ನಿಟ್ಟಿನಲ್ಲಿ ಪೂಜ್ಯ ಶ್ರೀಗಳವರು ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಬೆಳಕಾಗಿದ್ದಾರೆ. ಪವಿತ್ರವಾದ ಶ್ರಾವಣ ಮಾಸದಲ್ಲಿ ನಾವು ಪ್ರವಚನಗಳನ್ನು ಆಲಿಸುವುದರಿಂದ ನಮಗೆ ದೈವ ಸಂಕಲ್ಪ ಉಂಟಾಗುವುದು. ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯು ಅಪಾರ ಜೀವನ ಮೌಲ್ಯಗಳನ್ನು ಒಳಗೊಂಡಿದ್ದು ಇದನ್ನು ಕೇಳುವುದರಿಂದ ನಮ್ಮ ಜೀವನ ಪಾವನವಾಗುವುದು ಎಂದು ತಿಳಿಸಿದರು.

ಸುತ್ತೂರು ಶ್ರೀಮಠವು ಬಸವಣ್ಣನವರ ಆದರ್ಶಗಳನ್ನು ಪರಿಪಾಲನೆ ಮಾಡುತ್ತಿದೆ. ಕಾಯಕ ದಾಸೋಹದಲ್ಲಿ ಜಾತಿ ಭೇದವಿಲ್ಲದೆ ಸಮಾಜದ ಎಲ್ಲಾ ಜನರ ಜೀವನಕ್ಕೆ ದಾರಿದೀಪವಾಗಿದೆ ಎಂದರು.

ಜೆಎಸ್‌ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ.ಎಚ್.ಬಿ.ದೇವಣ್ಣ 'ಶಿವತತ್ತ್ವ ಚಿಂತಾಮಣಿ' ಕೃತಿಯ ಪ್ರವಚನ ನಡೆಸಿಕೊಟ್ಟರು. ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಸಿದ್ದಲಿಂಗಸ್ವಾಮಿ ಕಾವ್ಯವಾಚಿಸಿದರು.

ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಶುಭಾಶಯಗಳು



ರಾಜೀವ್ ಸ್ನೇಹ ಬಳಗದ ವತಿಯಿಂದ ಶಾಸಕ ಕೆ.ಹರೀಶ್‌ಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಶ್ರೀ ಗಂಗಮ್ಮನ ಗುಡಿ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿ, ಗೌಡರನ್ನು ಸನ್ಮಾನಿಸಲಾಯಿತು. ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ನಾಗಭೂಷಣ್, ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಮಣ್ಯ, ಕಾಂಗ್ರೆಸ್ ಮುಖಂಡರಾದ ರಾಜೀವ್, 23ನೇ ವಾರ್ಡ್ ಅಧ್ಯಕ್ಷ ಆನಂದ್, ಮಹದೇವ್, ಜ್ಞಾನೇಶ್ ಕುಮಾರ್, ಸುವರ್ಣಮ್ಮ, ಮಂಜುಳಾ, ಮಂಗಳ, ಶಾಂತ, ರಾಜೇಶ್, ಜಗದೀಶ್, ಚಂದು, ಕಾರ್ತಿಕ್, ಸಂಜಯ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಪವನ್, ಉಪಾಧ್ಯಕ್ಷ ಅಭಿ ಮತ್ತಿತರರು ಉಪಸ್ಥಿತರಿದ್ದರು.

ವಿಮಾನವನ್ನೇ ತುರ್ತು ಭೂಸ್ಪರ್ಶ ಮಾಡಿಸಿದ ಮಹಿಳಾ ಪ್ರಯಾಣಿಕಳ ತಲೆಯ ಹೇನು!

ನ್ಯೂಯಾರ್ಕ್: ತಲೆಯಲ್ಲಿ ಹೇನು ಹರಿದಾಡುವುದು ಸಮಸ್ಯೆ ನಿಜ. ಆದರೆ ಈ ಸಮಸ್ಯೆ ವಿಮಾನವನ್ನೇ ಲ್ಯಾಂಡ್ ಮಾಡುವಷ್ಟು ಗಂಭೀರ ಎಂಬುದು ಇದೀಗ ಭಾರಿ ಚರ್ಚೆಯಾಗುತ್ತಿದೆ. ಅಮೆರಿಕನ್ ಏರ್‌ಲೈನ್ಸ್ ಮಹಿಳೆ ತಲೆಯಲ್ಲಿ ಹೇನಿದೆ ಎಂಬ ಕಾರಣಕ್ಕೆ ತುರ್ತು ಲ್ಯಾಂಡ್ ಮಾಡಲಾಗಿದೆ. ಲಾಸ್ ಎಂಜಲ್ಸ್‌ನಿಂದ ನ್ಯೂಯಾರ್ಕ್‌ಗೆ ಪ್ರಯಾಣಿಸುತ್ತಿದ್ದ ವಿಮಾನ ಏಕಾಏಕಿ ಫೋನಿಕ್ಸ್‌ನಲ್ಲಿ ಲ್ಯಾಂಡ್ ಮಾಡಲಾಗಿದೆ. ಸಹ ಪ್ರಯಾಣಿಕ ಪಕ್ಕದಲ್ಲಿ ಕುಳಿತಿದ್ದ ಮಹಿಳೆ ತಲೆ ಮೇಲೆ ಹೇನು ಹರಿದಾಡುತ್ತಿದೆ ಎಂದು ದೂರು ನೀಡಿದ ಬೆನ್ನಲ್ಲೇ ವಿಮಾನ ಲ್ಯಾಂಡ್ ಆಗಿದೆ. ಇಲ್ಲಿ ಯಾಕೆ ಲ್ಯಾಂಡಿಂಗ್ ಮಾಡಿದ್ದೀರಿ. ನಮ್ಮ ಸಮಯ ವ್ಯರ್ಥವಾಗಿದೆ ಹೋಟೆಲ್ ಬುಕಿಂಗ್ ಆಗಿದೆ ಕಚೇರಿ ಸಭೆ ಇದೆ. ಹೀಗೆ ಪ್ರಯಾಣಿಕರು



ಒಬ್ಬೊಬ್ಬರು ಒಂದೊಂದು ಕಾರಣ ಹೇಳಿ ಗದ್ದಲ ಆರಂಭಿಸಿದ್ದಾರೆ. ಈ ವೇಳೆ ವಿಮಾನ ಸಂಸ್ಥೆ ತುರ್ತು ಆರೋಗ್ಯದ ಕಾರಣಕ್ಕಾಗಿ ಭೂಸ್ಪರ್ಶ ಮಾಡಲಾಗಿದೆ. ಇದಕ್ಕಾಗಿ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದಷ್ಟೇ ಮಾಹಿತಿ ನೀಡಿದ್ದಾರೆ.

ಮಹಿಳೆ ತಲೆಯಲ್ಲಿ ಹೇನು ಹರಿದಾಡುತ್ತಿರುವುದನ್ನು ಪಕ್ಕದಲ್ಲಿ ಕುಳಿತ ಪ್ರಯಾಣಿಕ ಗಮನಿಸಿದ್ದಾನೆ. ಇದೊಂದು ವಿಮಾನವನ್ನೇ ಭೂಸ್ಪರ್ಶ ಮಾಡುವ ಸಮಸ್ಯೆ ಎಂದು ತುರ್ತಾಗಿ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ.

ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ 2 ಲಕ್ಷ ಜನ

ಪೂರ್ವಭಾವಿ ಸಭೆಯಲ್ಲಿ ಮುಡಾ ಅಧ್ಯಕ್ಷ ಕೆ.ಮರೀಗೌಡ ವಿಶ್ವಾಸ



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಮೈಸೂರು ತಾಲೂಕು ಕುರುಬರ ಸಂಘದ ವತಿಯಿಂದ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮುಡಾ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿದರು.

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯರವರ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಸಂಚು ನಡೆಸಿರುವ ಬಿಜೆಪಿ ಮತ್ತು ಜೆಡಿಎಸ್ ವಿರುದ್ಧ ಆ.9ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ 2 ಲಕ್ಷಕ್ಕೂ ಹೆಚ್ಚು ಜನ ಸೇರಲಿದ್ದು, ಮೈಸೂರು ತಾಲೂಕಿನಿಂದ 10 ಸಾವಿರ ಜನ ಬರಲಿದ್ದಾರೆ ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.

ಸಿದ್ದಾರ್ಥನಗರದಲ್ಲಿರುವ ಕನಕ ಭವನದಲ್ಲಿ ಮೈಸೂರು ತಾಲೂಕು ಕುರುಬರ ಸಂಘದ ವತಿಯಿಂದ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಅಹಿಂದ ಮತ್ತು ಶೋಷಿತರ ವರ್ಗದ ನಾಯಕ ಸಿದ್ದರಾಮಯ್ಯರವರು 2ನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದು ಬಿಜೆಪಿ ಮತ್ತು ಜೆಡಿಎಸ್‌ನವರಿಗೆ ನುಂಗಲಾರದ ತುತ್ತಾಗಿದೆ. ಕಳೆದ 45 ವರ್ಷಗಳ ಸಿದ್ದರಾಮಯ್ಯನವರ ರಾಜಕೀಯ ಇತಿಹಾಸದಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದೆ ಅಹಿಂದ ವರ್ಗದ ಬಲಿಷ್ಠ ನಾಯಕರಾಗಿ ಹೊರಹೊಮ್ಮಿದ್ದಾರೆ. ಮುಡಾ ಹಗರಣಕ್ಕೂ ಸಿದ್ದರಾಮಯ್ಯರವರಿಗೂ ಯಾವುದೇ ಸಂಬಂಧವಿಲ್ಲ. ಸೈಟಿಗೆ ಸಂಬಂಧಪಟ್ಟಂತೆ ಒಂದೇ ಒಂದು ಪತ್ರವನ್ನು ಬರೆದಿಲ್ಲ ಯಾವುದೇ ಕಾನೂನು ಉಲ್ಲಂಘನೆಯಾಗಿಲ್ಲದಿದ್ದರೂ ಟಿ.ಜೆ.ಅಬ್ರಹಾಂ ಎಂಬ ವ್ಯಕ್ತಿ ನೀಡಿದ ದೂರಿನ ಮೇಲೆ ದುರುದ್ದೇಶಪೂರ್ವಕವಾಗಿ ಕೇಂದ್ರ ಸರ್ಕಾರದ ಕೈಗೊಂಬೆಯಾಗಿರುವ ರಾಜ್ಯಪಾಲರು, ಸಿದ್ದರಾಮಯ್ಯರವರಿಗೆ ನೋಟಿಸ್ ನೀಡಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್‌ನಲ್ಲಿರುವ ಭ್ರಷ್ಟಾಚಾರಿಗಳೇ ಭ್ರಷ್ಟಾಚಾರದ ವಿರುದ್ಧ ಪಾದಯಾತ್ರೆ ಮಾಡುತ್ತಿರುವುದು ವಿಪರ್ಯಾಸದ ಸಂಗತಿ. ಇಂತಹ ಗೊಡ್ಡು ಬೆದರಿಕೆಗಳಿಗೆ ಸಿದ್ದರಾಮಯ್ಯನವರು ಹೆದರಬೇಕಾಗಿಲ್ಲ. ರಾಜ್ಯದ ಅಹಿಂದ ವರ್ಗ ಶೋಷಿತ ವರ್ಗ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಂತಿದೆ ಎಂದ ಅವರು, ಇದು ನಮ್ಮ ಅಳಿವು ಉಳಿವಿನ ಹೋರಾಟವಾಗಿದೆ. 1983ರಿಂದಲೂ ಸಿದ್ದರಾಮಯ್ಯ ಅವರ ಪರನಿಂತು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಆದ್ದರಿಂದ ಈಗಲೂ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿ ಊರಿನಿಂದಲೂ ಅಭಿಮಾನಿಗಳು, ಕಾರ್ಯಕರ್ತರು ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರೊಂದಿಗೆ ಸಿದ್ದರಾಮಯ್ಯರವರ ಕೈ ಬಲಪಡಿಸಬೇಕು ಎಂದು ಹೇಳಿದರು.

ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿ, 136 ಜನ ಶಾಸಕರಿಂದ ಆಯ್ಕೆಯಾದ ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಒಬ್ಬ ಭ್ರಷ್ಟ ಆರ್‌ಟಿಐ ಕಾರ್ಯಕರ್ತ ನೀಡಿದ ಅರ್ಜಿಗೆ ರಾಜ್ಯಪಾಲರು ನೋಟಿಸ್ ನೀಡಿದ್ದಾರೆ ಎಂದರೆ ಅವರ ವಿರುದ್ಧ ಎಷ್ಟು ಕುತಂತ್ರ ನಡೆದಿದೆ ಎಂದು ಜನ ಅರ್ಥಮಾಡಿಕೊಳ್ಳಬೇಕು. ಈ ಕುತಂತ್ರಗಳನ್ನು ಎದುರಿಸುವ ಶಕ್ತಿಯನ್ನು ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುವುದರ ಮೂಲಕ ಎದುರಿಸಬೇಕಾಗಿದೆ ಎಂದು ಹೇಳಿದರು.

ಸಭೆಯಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಬಸವರಾಜು, ಗೌರವಾಧ್ಯಕ್ಷ ನಾಡನಹಳ್ಳಿ ರವಿ, ಮಾಜಿ ಮೇಯರ್ ಟಿ.ಬಿ. ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಬಂಡಿಪಾಳ್ಯ ಬಸವರಾಜು, ಅಹಿಂದ ಮುಖಂಡರಾದ ಕೆ.ಎಸ್.ಶಿವರಾಂ, ಮುಖಂಡರಾದ ಪಟೇಲ್ ಜವರೇಗೌಡ ಕೋಟೆ ಹುಂಡಿ ಮಹದೇವ, ಶ್ರೀಕಂಠ ತೊಂಡೇಗೌಡ, ಕೆ.ಎಸ್.ಕರೀಗೌಡ, ರಾಜೇಶ್ವರಿ, ಕಮಲ ಛಾಯಾ, ಸೋಮಶೇಖರ್ ಅಪ್ಪುಗೌಡ, ಹುಯಿಲಾಳು ರಾಘವೇಂದ್ರ, ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ, ಶಿವಣ್ಣ ಇನ್ನಿತರರು ಹಾಜರಿದ್ದರು.

ಬಾಂಗ್ಲಾದೇಶದಲ್ಲಿ ಪ್ರಕ್ಷುಬ್ಧತೆ

ಗಡಿಯಲ್ಲಿ BSF ಹೈ ಅಲರ್ಟ್ ಘೋಷಣೆ!

ನವದೆಹಲಿ: ನೆರೆಯ ಬಾಂಗ್ಲಾದೇಶದಲ್ಲಿ ಪ್ರಕ್ಷುಬ್ಧತೆ ಹಿನ್ನೆಲೆಯಲ್ಲಿ 4,096 ಕಿ.ಮೀ ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹೈ ಅಲರ್ಟ್ ಘೋಷಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೋಲ್ಕತ್ತಾದಲ್ಲಿ ಭದ್ರತಾ ಪರಿಸ್ಥಿತಿ ಪರಾಮರ್ಶೆ ನಡೆಸಿದ ಬಿಎಸ್‌ಎಫ್ ಮಹಾನಿರ್ದೇಶಕ ದಲ್ಜಿತ್ ಸಿಂಗ್ ಚೌಧರಿ ಮತ್ತು ಇತರ ಹಿರಿಯ ಕಮಾಂಡರ್‌ಗಳು, ಗಡಿಯಲ್ಲಿ ಕೂಡಲೇ ಎಲ್ಲಾ ಸಿಬ್ಬಂದಿ ನಿಯೋಜಿಸುವಂತೆ ಕಮಾಂಡರ್‌ಗಳಿಗೆ ನಿರ್ದೇಶಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಬಾಂಗ್ಲಾದೇಶ ಬೃಹತ್ ಪ್ರತಿಭಟನೆ, ಹಿಂಸಾಚಾರ ನಡೆಯುತ್ತಿರುವಂತೆಯೇ ಬಾಂಗ್ಲಾದೇಶದ ಗಡಿಯಲ್ಲಿ ನಿಯೋಜಿಸಲಾದ ಎಲ್ಲಾ ಸಿಬ್ಬಂದಿಗಳ ರಜೆಯನ್ನು ಕೆಲವು ದಿನಗಳಿಂದ ರದ್ದುಗೊಳಿಸಲಾಗಿದೆ. ಎಚ್ಚರಿಕೆಯಿಂದ ಇರುವಂತೆ ಸೇನೆಯ ಎಲ್ಲಾ ಘಟಕಗಳಿಗೆ ಸೂಚಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ

ಬಾಂಗ್ಲಾದೇಶ ಗಡಿ ಹಂಚಿಕೊಂಡಿರುವ ಭಾರತದ ಐದು ಜಿಲ್ಲೆಗಳಲ್ಲಿ ಭದ್ರತೆ ನೀಡುವಲ್ಲಿ ಬಿಎಸ್‌ಎಫ್ ಯೋಧರು ಮುಂಚೂಣಿಯಲ್ಲಿದ್ದಾರೆ.

ಪಶ್ಚಿಮ ಬಂಗಾಳ ಬಾಂಗ್ಲಾದೇಶದೊಂದಿಗೆ ಒಟ್ಟು 2,217 ಕಿ.ಮೀ, ತ್ರಿಪುರಾದೊಂದಿಗೆ 856 ಕಿ.ಮೀ, ಮೇಘಾಲಯ 443 ಕಿ.ಮೀ, ಅಸ್ಸಾಂ 262 ಕಿಮೀ ಮತ್ತು ಮಿಜೋರಾಂ 318 ಕಿಮೀ ಗಡಿಯನ್ನು ಹಂಚಿಕೊಂಡಿವೆ.

ಎಪಿಎಂಸಿ ಮುಂಭಾಗ ಮದ್ಯದಂಗಡಿ ವಿರೋಧಿಸಿ ದಸಂಸ ಪ್ರತಿಭಟನೆ



ಮೈಸೂರಿನ ಬಂಡಿಪಾಳ್ಯದ ಎಪಿಎಂಸಿ ಗೇಟ್ ಮುಂಭಾಗ ಮದ್ಯದಂಗಡಿ ತೆರೆಯಲು ಅವಕಾಶ ನೀಡಿರುವುದನ್ನು ವಿರೋಧಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಆ.5(ಎಂಟಿವೈ)-ಮೈಸೂರಿನ ಬಂಡಿಪಾಳ್ಯದ ಎಪಿಎಂಸಿ ಗೇಟ್ ಮುಂಭಾಗ ಮದ್ಯದಂಗಡಿ ತೆರೆಯಲು ಅವಕಾಶ ನೀಡಿರುವುದನ್ನು ವಿರೋಧಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಅನಿಕೇತನ ರಸ್ತೆಯಲ್ಲಿರುವ ಮೈಸೂರಿನ ಅಬಕಾರಿ ಆಯುಕ್ತರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ದಸಂಸ ಕಾರ್ಯಕರ್ತರು ಕೂಡಲೇ ಹೊಸದಾಗಿ ನೀಡಿರುವ ಲೈಸನ್ಸ್ ಹಿಂಪಡೆಯಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮುಂದುವರೆಸುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಶಂಕರ್ ಮಾತನಾಡಿ, ಬಂಡೀಪಾಳ್ಯದ ಎಪಿಎಂಸಿ ಗೇಟ್ ಮುಂದೆ ಉತ್ತನಹಳ್ಳಿ ರಸ್ತೆಯಲ್ಲಿ ಮದ್ಯದ ಅಂಗಡಿ ತೆರೆಯಲು ಅವಕಾಶ ನೀಡಲಾಗಿದೆ. ಇದು ಅವೈಜ್ಞಾನಿಕ ಕ್ರಮವಾಗಿದ್ದು, ಎಪಿಎಂಸಿಯಲ್ಲಿ ದುಡಿಯುವ ಶ್ರಮಿಕ ವರ್ಗಕ್ಕೆ ಕುಡಿಯಲು ಪ್ರಚೋದನೆ ನೀಡಿದಂತಾಗುತ್ತದೆ. ಅಲ್ಲದೆ, ಸುತ್ತಮುತ್ತಲಿನ ಗ್ರಾಮಗಳ ಜನರು ಕುಡಿತದ ಚಟಕ್ಕೆ ಬಲಿಯಾಗಲಿದ್ದಾರೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ಮದ್ಯದ ಅಂಗಡಿ ತೆರೆಯುವ ಅವಶ್ಯಕತೆ ಇಲ್ಲ. ಕೂಡಲೇ ಲೈಸನ್ಸ್ ರದ್ದು ಮಾಡಬೇಕೆಂದು ಒತ್ತಾಯಿಸಿದರು. ಈ ವೇಳೆ ಅಬಕಾರಿ ಉಪನಿರ್ದೇಶಕ ನಾಗರಾಜಪ್ಪಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸಂಪಾಜೆ ಬಳಿ ಬೈಕ್ ಅಪಘಾತ; ಮೈಸೂರಿನ ಇಬ್ಬರು ಯುವಕರು ಸಾವು

ಮಡಿಕೇರಿ-ಮಂಗಳೂರು ಹೆದ್ದಾರಿಯಲ್ಲಿ ಭಾನುವಾರ ಮಧ್ಯರಾತ್ರಿ ಬೈಕಿನಲ್ಲಿ ಧರ್ಮಸ್ಥಳಕ್ಕೆ ಹೋಗುತ್ತಿದ್ದಾಗ ದುರ್ಘಟನೆ

ಮೈಸೂರು,ಆ.5(ಆರ್‌ಕೆ)-ಮಡಿಕೇರಿ-ಮಂಗಳೂರು ಹೆದ್ದಾರಿಯ ಸಮೀಪ ಸಂಪಾಜೆ ಬಳಿ ಭಾನುವಾರ ಮಧ್ಯರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೈಸೂರಿನ ಯುವಕರಿಬ್ಬರು ಸಾವನ್ನಪ್ಪಿದ್ದಾರೆ.

ಮೈಸೂರಿನ ಗಾಂಧಿನಗರ ಮೊದಲನೇ ಅಡ್ಡರಸ್ತೆ ನಿವಾಸಿ ಲೇಟ್ ನಂಜಪ್ಪ ಅವರ ಮಗ ಮನೋಜ್ (32) ಹಾಗೂ 6ನೇ ಅಡ್ಡರಸ್ತೆಯ ಪರಮೇಶ್ ಅವರ ಮಗ ಪವನ್ (29) ಸಾವನ್ನಪ್ಪಿದ ದುರ್ದೈವಿಗಳು. ಖಾಸಗಿ ಬ್ಯಾಂಕುಗಳಲ್ಲಿ ಸಾಲ ಕೊಡಿಸುವ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ ಮನೋಜ್ ಮತ್ತು ಮೆಡಿಕಲ್ ರೆಪ್ರೆಸೆಂಟೇಟಿವ್ ಆಗಿದ್ದ ಪವನ್ ಅವರು ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಭಾನುವಾರ ರಾತ್ರಿ 11 ಗಂಟೆಗೆ ಧರ್ಮಸ್ಥಳಕ್ಕೆ ಹೊರಟಿದ್ದರು.

ಮಧ್ಯರಾತ್ರಿ ವೇಳೆಗೆ ಮಾರ್ಗಮಧ್ಯೆ ಮಡಿಕೇರಿ-ಮಂಗಳೂರು ಹೆದ್ದಾರಿಯ



ಸಾವನ್ನಪ್ಪಿದ ಮನೋಜ್ ಮತ್ತು ಪವನ್

ಸಂಪಾಜೆ ಸಮೀಪ ಕೊಯಿನಾಡು ಬಳಿ ನಿಯಂತ್ರಣ ತಪ್ಪಿದ ಬೈಕ್ ತಡೆಗೋಡೆಗೆ ಅಪ್ಪಳಿಸಿ, ಸುಮಾರು 15 ಅಡಿ ಆಳದ ಕಂದಕಕ್ಕೆ ಉರುಳಿಬಿದ್ದಿದೆ. ಪರಿಣಾಮ ತಲೆಗೆ ತೀವ್ರ ಗಾಯಗಳಾಗಿ ತೀವ್ರ ರಕ್ತಸ್ರಾವದಿಂದ ಸವಾರರಿಬ್ಬರೂ ಸ್ಥಳದಲ್ಲೇ ಅಸುನೀಗಿದ್ದಾರೆ.

ಮಧ್ಯರಾತ್ರಿಯಾದ್ದರಿಂದ ಅವರು ಕಂದಕಕ್ಕೆ ಬಿದ್ದಿರುವುದು ಯಾರ ಗಮನಕ್ಕೂ ಬಂದಿಲ್ಲ. ಹಾಗಾಗಿ ಯಾರೂ ನೆರವಿಗೆ ಧಾವಿಸದೇ ಅವರು ಕೊನೆಯುಸಿರೆಳೆದಿದ್ದಾರೆ. ಇಂದು ಮುಂಜಾನೆ ದಾರಿ ಹೋಕರಿಗೆ ಈ ಇಬ್ಬರು ಕಂದಕದಲ್ಲಿ ಬಿದ್ದಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ತಕ್ಷಣ ಸ್ಥಳಕ್ಕೆ ಧಾವಿಸಿದ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು, ಮಹಜರು ನಡೆಸಿ, ಮೃತದೇಹಗಳನ್ನು ಮಡಿಕೇರಿ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿ ಮರಣೋತ್ತರ ಪರೀಕ್ಷೆ ನಂತರ ಇಂದು ಮಧ್ಯಾಹ್ನ ಇಬ್ಬರ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅಪಘಾತಕ್ಕೀಡಾದ ವಾಹನವನ್ನು ವಶಕ್ಕೆ ಪಡೆದುಕೊಂಡು ತನಿಖೆ ಕೈಗೊಂಡಿದ್ದಾರೆ. ಅಪಘಾತ ಸಂಭವಿಸಿದ ತಕ್ಷಣ ಗಮನಿಸಿ ಯಾರಾದರೂ ನೆರವಿಗೆ ಧಾವಿಸಿ, ಆಸ್ಪತ್ರೆಗೆ ದಾಖಲಿಸಿದ್ದರೆ ಸವಾರರಿಬ್ಬರೂ ಸಾವಿನ ದವಡೆಯಿಂದ ಪಾರಾಗುವ ಸಾಧ್ಯತೆ ಇತ್ತೆಂದು ಹೇಳಲಾಗಿದೆ.

ಸಿಎಂಗೆ ರಾಜ್ಯಪಾಲರು ನೀಡಿರುವ ನೋಟಿಸ್ ಹಿಂಪಡೆಯಲು ಆಗ್ರಹಿಸಿ ವಾಟಾಳ್ ಪ್ರತಿಭಟನೆ



ಮೈಸೂರು,ಆ.5(ಎಂಟಿವೈ)-ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶೋಕಾಸ್ ನೋಟಿಸ್ ನೀಡಿರುವುದನ್ನು ಖಂಡಿಸಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡಪರ ಹೋರಾಟಗಾರರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಸೋಮವಾರ ಮಧ್ಯಾಹ್ನ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿದ ವಾಟಾಳ್ ನಾಗರಾಜ್ ಮಾತನಾಡಿ ರಾಜ್ಯಪಾಲರು ಯಾರ ಒತ್ತಡಕ್ಕೆ ಮಣಿದಿದ್ದಾರೋ ಗೊತ್ತಿಲ್ಲ. ಸರ್ಕಾರದ ಮೇಲೆ ಹಿಂದೆಂದೂ ಈ ರೀತಿ ರಾಜ್ಯಪಾಲರು ಗದಾಪ್ರಹಾರ ಮಾಡಿಲ್ಲ. ಯಾರೋ ಕೊಟ್ಟ ದೂರಿನ ಮೇಲೆ ನೀವು ನೋಟಿಸ್ ಕೊಟ್ಟಿದ್ದೀರಿ. ನೀವು ಸಂವಿಧಾನ ರಕ್ಷಣೆ ಮಾಡುವವರು. ಆತ್ಮಮುಟ್ಟಿ ನೋಡಿಕೊಳ್ಳಿ. ಯಾವುದೋ ಒತ್ತಡಕ್ಕೆ ನೀವು ಮಣಿದಿದ್ದೀರಿ. ನೀವು ತುರ್ತು ಶಾಸನ ಸಭೆ ಕರೆದು ದೂರಿನ ಬಗ್ಗೆ ಚರ್ಚೆ ಮಾಡಿ. ವಿರೋಧ ಪಕ್ಷದ ನಾಯಕರೊಂದಿಗೆ ಚರ್ಚಿಸಿ. ಇಲ್ಲದಿದ್ದರೆ ಹೈಕೋರ್ಟ್, ಸುಪ್ರೀಂಕೋರ್ಟ್ ಇದೆ. ಅಲ್ಲಿಯೇ ನಿರ್ಧಾರವಾಗಲಿ. ಅದನ್ನು ಬಿಟ್ಟು ಸರ್ಕಾರ ಉರುಳಿಸುವ ಪ್ರಯತ್ನ ಸರಿಯಲ್ಲ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಈ ಹಿಂದೆ 5 ವರ್ಷ ಸಿಎಂ ಆಗಿದ್ದರು. ಈಗ ಒಂದು ವರ್ಷ ಸಿಎಂ ಆಗಿದ್ದಾರೆ. ಅನುಭವವಿರುವ ವ್ಯಕ್ತಿ. ಸಿದ್ದರಾಮಯ್ಯರ ನಂತರ ಸಿಎಂ ಆಗಲು ಯಾವ ಪಕ್ಷದಲ್ಲೂ ಅರ್ಹ ವ್ಯಕ್ತಿ ಇಲ್ಲ. ಇವತ್ತಿನ ಸಿದ್ದರಾಮಯ್ಯ ಸನ್ಯಾಸಿಯಂತೆ ಕಾಣುತ್ತಿದ್ದಾರೆ. ರಾಜ್ಯಪಾಲರು ನೋಟಿಸ್ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಹೆದರುವ ಅವಶ್ಯಕತೆ ಇಲ್ಲ. ಈ ಹಿಂದೆ ಎಸ್‌ಆರ್ ಬೊಮ್ಮಾಯಿ ಸರ್ಕಾರವನ್ನು ರಾಜ್ಯಪಾಲರು ವಜಾ ಮಾಡಿದ್ದರು. ಅದನ್ನು ಸುಪ್ರೀಂಕೋರ್ಟ್ ತಪ್ಪು ಎಂದು ತೀರ್ಪು ನೀಡಿತ್ತು ಈಗಲೂ ನಾನು ಅದನ್ನೇ ಹೇಳುತ್ತೇನೆ. ಯಾರದೇ ಸರ್ಕಾರ ಇರಲಿ, ಯಾರೇ ಸಿಎಂ ಆಗಿರಲಿ. ರಾಜ್ಯಪಾಲರು ಈ ರೀತಿ ನಡೆದುಕೊಳ್ಳಬಾರದು ಎಂದು ಅಭಿಪ್ರಾಯಪಟ್ಟರು.

ಡಿ.ಕೆ.ಶಿವಕುಮಾರ್, ಹೆಚ್.ಡಿ.ಕುಮಾರಸ್ವಾಮಿ ನಡುವಿನ ವಾಕ್ಸಮರದ ಕುರಿತು ಪ್ರತಿಕ್ರಿಯಿಸಿ, ಡಿಕೆಶಿ, ಕುಮಾರಸ್ವಾಮಿ ಇಬ್ಬರು ಮಾತನಾಡುತ್ತಿರುವುದು ರಾಜ್ಯಕ್ಕೆ ಅಗೌರವ ತರುವಂತಿದೆ. ಯಾರೇ ಆಗಲಿ ತೂಕದ ಮಾತುಗಳನ್ನು ಆಡಬೇಕು. ಇಬ್ಬರದ್ದು ಲಜ್ಜೆಗೆಟ್ಟ ಮಾತುಗಳು. ಒಬ್ಬರು ಸಿಎಂ ಆಗಿದ್ದವರು, ಇನ್ನೊಬ್ಬರು ಡಿಸಿಎಂ. ಮಾತನಾಡುವಾಗ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಪಾದಯಾತ್ರೆ ಎಂದರೆ ಭ್ರಷ್ಟ ಯಾತ್ರೆಯಲ್ಲ. ಇದನ್ನು ಯಡಿಯೂರಪ್ಪ, ವಿಜಯೇಂದ್ರ, ಕುಮಾರಸ್ವಾಮಿ ಎಲ್ಲರೂ ತಿಳಿದುಕೊಳ್ಳಬೇಕು. ಮಹಾತ್ಮ ಗಾಂಧಿ ಮಾಡಿದ್ದು ನಿಜವಾದ ಪಾದಯಾತ್ರೆ. ಇವರು ಕೋಟಿ ಬೆಲೆಯ ಕಾರಿನಲ್ಲಿ ಬಂದು ಪಾದಯಾತ್ರೆ ಮಾಡಿದರೆ ಅದಕ್ಕೊಂದು ಬೆಲೆ ಇದೆಯೇ ಎಂದರು.

ಡಿಸಿ ಡಾ.ಲಕ್ಷ್ಮೀಕಾಂತ ರೆಡ್ಡಿಗೆ ಅಭಿನಂದನೆ



ಮೈಸೂರು ಡಿಸಿ ಡಾ.ಲಕ್ಷ್ಮೀಕಾಂತ ರೆಡ್ಡಿ ಅವರನ್ನು ದಿ.ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಎಸ್.ಆರ್.ರವಿಕುಮಾರ್ ಅಭಿನಂದಿಸಿದರು. ಈ ವೇಳೆ ನಂಜುಂಡಿ, ಪಡುವಾರಹಳ್ಳಿ ಕೃಷ್ಣ ಇದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಆ.5- ನಂಜನಗೂಡು ಉಪವಿಭಾಗ-2ರ ಹುರ ಶಾಖೆ ಕಾಮಗಾರಿ ನಿಮಿತ್ತ ಆ.7ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಚಿಲಕಳ್ಳಿ, ಚಿಲಕಳ್ಳಿ ಕಾಲೋನಿ, ವಡೆಯನಪುರ, ಹೆಡಿಯಾಲ, ಪಾರ್ವತಿಪುರ, ಅಂಜಾನಪುರ, ಮಹದೇವನಗರ, ಮಡುವಿನಹಳ್ಳಿ, ಹರಿಯೂರು, ಜಾಲಹಳ್ಳಿ, ಹಳೆ ಕಡಜಟ್ಟಿ, ಹೊಸ ಕಡಜಟ್ಟಿ, ನಾಗಣಾಪುರ ಕಾಲೋನಿ, ಈರೇಗೌಡನಹುಂಡಿ, ಹೊಸವೀಡು, ಹೊಸವೀಡುಹುಂಡಿ, ಮೂಡಲುಂಡಿ, ಚನ್ನಗೌಡನಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ

ದೇಶ - ವಿದೇಶ

ಅಮೆರಿಕದಲ್ಲಿ ಪರ್ವತಾರೋಹಣದ ವೇಳೆ ನಾಪತ್ತೆಯಾಗಿದ್ದ ಭಾರತೀಯ ಎಂಜಿನಿಯರ್ ಶವ ಪತ್ತೆ



ನ್ಯೂಯಾರ್ಕ್: ಅಮೆರಿಕದ ಮೊಂಟಾನಾದಲ್ಲಿ ಇರುವ ಗ್ಲೇಸಿಯರ್ ರಾಷ್ಟ್ರೀಯ ಉದ್ಯಾನದ ಹಿಮನದಿಯಲ್ಲಿ ಕೊಚ್ಚಿ ಹೋಗಿದ್ದ ಭಾರತೀಯ ಮೂಲದ ಎಂಜಿನಿಯರ್ ಮೃತದೇಹ ಕೊನೆಗೂ ಪತ್ತೆಯಾಗಿದೆ. ಘಟನೆ ನಡೆದು 4 ವಾರಗಳ ಬಳಿಕ ಪುಣೆ ಮೂಲದ ಸಿದ್ಧಾಂತ್ ಪಾಟೀಲ್ ಅವರ ಮೃತದೇಹ ಅರಣ್ಯ ಇಲಾಖೆ ರೇಂಜರ್‌ಗಳ ಕಣ್ಣಿಗೆ ಬಿದ್ದಿದೆ. ಮಹಾರಾಷ್ಟ್ರದ ಪುಣೆಯಲ್ಲಿ ಇರುವ ಸಿದ್ದಾಂತ್ ಪಾಟೀಲ್ ಅವರ ಕುಟುಂಬಸ್ಥರಿಗೆ ಅಮೆರಿಕ ಸರ್ಕಾರಿ ಅಧಿಕಾರಿಗಳು ಈ ಕುರಿತಾಗಿ ಮಾಹಿತಿ ನೀಡಿದ್ದು, ಪುಣೆಯಲ್ಲಿರುವ ಸಿದ್ದಾಂತ್ ಪಾಟೀಲ್ ಪೋಷಕರೂ ತಮ್ಮ ಮಗನ ಮೃತದೇಹ ಸಿಕ್ಕಿದೆ ಎಂದು ಹೇಳಿದ್ದಾರೆ.

ಸಿದ್ದಾಂತ್ ಪಾಟೀಲ್ ಅವರು ಅಮೆರಿಕದಲ್ಲಿ ತಮ್ಮ 7 ಗೆಳೆಯರ ಜೊತೆಗೆ ಪರ್ವತಾರೋಹಣದಲ್ಲಿ ಭಾಗಿಯಾಗಿದ್ದರು. ಈ ವೇಳೆ ಜು.6ರಂದು ಹಿಮಪಾತ ಸಂಭವಿಸಿ ಅವರು ಹಿಮ ನದಿಯ ಕಣಿವೆಗೆ ಬಿದ್ದಿದ್ದರು. ಪಾಟೀಲ್ ಅವರು ನಾಪತ್ತೆಯಾದ ದಿನದಿಂದಲೇ ಅವರ ಕುಟುಂಬ ತಮ್ಮ ಮಗ ಬದುಕುಳಿದಿರಬಹುದು ಎಂಬ ಭರವಸೆಯಲ್ಲೇ ಇತ್ತು.

ಹಿಮಾಚಲಪ್ರದೇಶದಲ್ಲಿ ಭಾರಿ ಮಳೆ: 87 ರಸ್ತೆಗಳು ಬಂದ್

ಡೆಹ್ರಾಡೂನ್: ಭಾರಿ ಮಳೆಗೆ ಹಿಮಾಚಲ ಪ್ರದೇಶದ 87 ರಸ್ತೆಗಳು ಸ್ಥಗಿತಗೊಂಡಿವೆ. ಹಲವೆಡೆ ಮೇಘಸ್ಫೋಟ ಸಂಭವಿಸಿದ್ದು, ಕಳೆದ 5 ದಿನಗಳಿಂದ ಭಾರಿ ಮಳೆಗೆ ಪ್ರವಾಹ, ಭೂಕುಸಿತ ಉಂಟಾಗಿದೆ. ಸ್ಥಳೀಯ ಹವಾಮಾನ ಇಲಾಖೆ ನಿರ್ದಿಷ್ಟ ಪ್ರದೇಶಗಳಲ್ಲಿ



ಯೆಲ್ಲೋ ಅಲರ್ಟ್ ಘೋಷಣೆ ಮಾಡಿದ್ದು, ಆ.8ರವರೆಗೆ ಗುಡುಗು ಮತ್ತು ಮಿಂಚು ಸಹಿತ ಭಾರಿ ಮಳೆಯಾಗಲಿದೆ ಎಂದು ತಿಳಿಸಿದೆ. ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರದ ಪ್ರಕಾರ, ಕುಲುವಿನಲ್ಲಿ 30, ಮಂಡಿಯಲ್ಲಿ 25, ಲಾಹೌಲ್ ಮತ್ತು ಸ್ಪಿತಿಯಲ್ಲಿ 14, ಶಿಮ್ಲಾದಲ್ಲಿ 9, ಕಂಗ್ರಾದಲ್ಲಿ 7 ಮತ್ತು ಕಿನ್ನೌರ್ ಜಿಲ್ಲೆಯಲ್ಲಿ 2 ರಸ್ತೆಗಳನ್ನು ಬಂದ್ ಮಾಡಲಾಗಿದೆ. ಹಿಮಾಚಲ ಪ್ರದೇಶದ ಕೆಲವು ಭಾಗಗಳಲ್ಲಿ ಮಧ್ಯಂತರ ಮಳೆಯಾಗಿದ್ದು, ಹಮೀರ್‌ಪುರದಲ್ಲಿ 54 ಮಿಮೀ ಅತಿ ಹೆಚ್ಚು ಮಳೆಯಾಗಿದೆ, ನಂತರ ಬರ್ಥಿನ್ ಮತ್ತು ಧರ್ಮಶಾಲಾ ತಲಾ 19 ಮಿಮೀ, ನೇರಿ 11 ಮಿಮೀ, ಕಂಗ್ರಾ 9.7 ಮಿಮೀ, ಕುಕುಮ್‌ಸೇರಿ 9.6 ಮಿಮೀ, ಸುಂದರನಗರ 8.1 ಮಿಮೀ, ಮನಾಲಿ ಮತ್ತು ಚಂಬಾ ತಲಾ 6 ಮಿ.ಮೀ ಮತ್ತು ಬಜೌರಾದಲ್ಲಿ 5 ಮಿ.ಮೀ ಮಳೆಯಾಗಿದೆ.

ಯುದ್ಧೋನ್ಮಾದ ಸುಳಿಯಲ್ಲಿ ಮಧ್ಯಪ್ರಾಚ್ಯ ಕಾದಾಟಕ್ಕೆ ಇಸ್ರೇಲ್-ಇರಾನ್ ಸಜ್ಜು

ಟೆಲ್ ಅವಿವ್: ಇರಾನ್ ಮಿತ್ರಕೂಟದ ಸಂಭವನೀಯ ದಾಳಿಗೂ ಮೊದಲೇ ಬಂಡುಕೋರರ ಮೇಲೆ ಇಸ್ರೇಲ್ ರಕ್ಷಣಾ ಪಡೆ ಮುಗಿಬಿದ್ದಿದೆ. ಭಾನುವಾರ ಮುಂಜಾನೆ



ಗಾಜಾಪಟ್ಟಿಯಲ್ಲಿನ ವಿವಿಧ ಪ್ರದೇಶಗಳ ಮೇಲೆ ನಡೆಸಿದ ವಾಯುದಾಳಿಯಲ್ಲಿ 18 ಮಂದಿ ಮೃತರಾಗಿದ್ದಾರೆ. ಬಂಡುಕೋರರ ಪ್ರತಿ ದಾಳಿಗೆ ಇಸ್ರೇಲ್‌ನಲ್ಲಿ ಇಬ್ಬರು ನಾಗರಿಕರು ಸಾವಿಗೀಡಾಗಿದ್ದು, ಮಧ್ಯಪ್ರಾಚ್ಯದಲ್ಲಿ ಯುದ್ಧೋನ್ಮಾದದ ಸ್ಥಿತಿ ನಿರ್ಮಾಣವಾಗಿದೆ.

ಪ್ಯಾಲೆಸ್ತೀನ್ ಬಂಡುಕೋರರನ್ನು ಗುರಿಯಾಗಿಸಿ ಇಸ್ರೇಲ್ ರಕ್ಷಣಾ ಪಡೆ ಭಾನುವಾರ ಆಲ್ ಅಕ್ಸಾ ಆಸ್ಪತ್ರೆ ಮೇಲೆ ವಾಯುದಾಳಿ ನಡೆಸಿದೆ. ಒಬ್ಬ ಮಹಿಳೆ ಸೇರಿ ನಾಲ್ವರು ಮೃತಪಟ್ಟಿದ್ದಾರೆ. ನಿರಾಶ್ರಿತರಿಗೆ ಆಶ್ರಯ ನೀಡಲಾಗಿದ್ದ ಡೀರ್ ಅಲ್ ಬಲಾಹ್ ಆಸ್ಪತ್ರೆ ಮೇಲೆ ನಡೆದ ಮತ್ತೊಂದು ದಾಳಿಯಲ್ಲಿ ಮೂರು ಮಂದಿ ಮೃತರಾಗಿದ್ದಾರೆ. ಉತ್ತರ ಗಾಜಾದ ಮನೆಯೊಂದರ ಮೇಲೆ ನಡೆದ ದಾಳಿಯಲ್ಲಿ ಎಂಟು ಮಂದಿ ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಪಾಕಿಸ್ತಾನದಲ್ಲಿ ಭಾರಿ ಮಳೆ, ಪ್ರವಾಹಕ್ಕೆ 11 ಮಂದಿ ಸಾವು

ಪೇಶಾವರ: ವಾಯುವ್ಯ ಪಾಕಿಸ್ತಾನದಲ್ಲಿ ಧಾರಾಕಾರ ಮಳೆಯಿಂದ ಹಠಾತ್ ಪ್ರವಾಹ ಉಂಟಾಗಿದ್ದು, ಕೆಲವು ಕಡೆ ಮನೆಗಳ ಚಾವಣಿಗಳು ಕುಸಿದಿವೆ. ಕಳೆದ 24 ತಾಸುಗಳಲ್ಲಿ ಮಳೆ



ಸಂಬಂಧಿ ಅವಘಡಗಳಿಂದ 11 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಫ್ಘಾನಿಸ್ತಾನದ ಗಡಿಯ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಟ್ಯಾಂಕ್ ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ಮನೆಯ ಚಾವಣಿ ಕುಸಿದು ಏಳು ಜನರು ಮತ್ತು ಕರಕ್ ಜಿಲ್ಲೆಯಲ್ಲಿ ನಾಲ್ವರು ಪ್ರವಾಹದಲ್ಲಿ ಮುಳುಗಿ ಸತ್ತಿದ್ದಾರೆ ಎಂದು ಪ್ರಾಂತೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಮಳೆಯಿಂದ ಹಾನಿಗೀಡಾದ ಪ್ರದೇಶಗಳ ಜನರಿಗೆ ಸಾಧ್ಯವಾದಷ್ಟು ನೆರವು ಮತ್ತು ಪರಿಹಾರ ನೀಡುವಂತೆ ಆಯಾ ಜಿಲ್ಲಾಡಳಿತಗಳಿಗೆ ಖೈಬರ್ ಪಖ್ತುಂಖ್ವಾ ಮುಖ್ಯಮಂತ್ರಿ ಅಲಿ ಅಮೀನ್ ಗಂಡಪುರ್ ಸೂಚಿಸಿದರು.

ಸೋಮಾಲಿಯಾದಲ್ಲಿ ಆತ್ಮಹತ್ಯಾ ಬಾಂಬ್ ದಾಳಿಗೆ 32 ಮಂದಿ ಬಲಿ

ಸೋಮಾಲಿಯಾ: ಸೋಮಾಲಿಯಾದ ರಾಜಧಾನಿ ಮೊಗಾದಿಶುವಿನ ಬೀಚ್ ಹೋಟೆಲ್‌ನಲ್ಲಿ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, ಪರಿಣಾಮ 32 ಮಂದಿ ಸಾವನ್ನಪ್ಪಿದ್ದು, 63



ಜನರು ಗಾಯಗೊಂಡಿದ್ದಾರೆ. ಅಲ್-ಖೈದಾದ ಪೂರ್ವ ಆಫ್ರಿಕಾದ ಅಂಗಸಂಸ್ಥೆ ಅಲ್-ಶಬಾಬ್ ತನ್ನ ರೇಡಿಯೋ ಸ್ಟೇಷನ್ ಮೂಲಕ ತನ್ನ ಹೋರಾಟಗಾರರು ದಾಳಿ ನಡೆಸಿದ್ದಾರೆ ಎಂದು ಹೇಳಿದೆ. ದಾಳಿಯಲ್ಲಿ ಓರ್ವ ಯೋಧ ಸಾವನ್ನಪ್ಪಿದ್ದು, ಉಳಿದವರು ನಾಗರಿಕರು ಎಂದು ಪೊಲೀಸ್ ವಕ್ತಾರ ಮೇಜರ್ ಅಬ್ದಿಫತಾ ಆದಾನ್ ಹಸನ್ ಪತ್ರಕರ್ತರಿಗೆ ತಿಳಿಸಿದ್ದಾರೆ. ದಾಳಿಯಲ್ಲಿ ಮತ್ತೊಬ್ಬ ಯೋಧ ಕೂಡ ಗಾಯಗೊಂಡಿದ್ದಾರೆ ಎಂದು ಹಸನ್ ತಿಳಿಸಿದ್ದಾರೆ. ಪ್ರತ್ಯಕ್ಷದರ್ಶಿಗಳು ಸ್ಫೋಟದ ನಂತರ ಗುಂಡಿನ ದಾಳಿಯೂ ನಡೆದಿರುವುದಾಗಿ ತಿಳಿಸಿದ್ದಾರೆ. ಸೋಮಾಲಿಯಾದಲ್ಲಿ ಅಂತಾರಾಷ್ಟ್ರೀಯ ಬೆಂಬಲ ಪಡೆದಿರುವ ಫೆಡರಲ್ ಸರ್ಕಾರದ ವಿರುದ್ಧ ಬಂಡೆದ್ದಿರುವ ಅಲ್‌ಖೈದಾದ ಜತೆ ಸಂಪರ್ಕವಿರುವ ಅಲ್-ಶಬಾಬ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

ಮೈಸೂರು ಮಿತ್ರ ಮಂಗಳವಾರ 6 ಆಗಸ್ಟ್, 2024

ಸಿಎನ್‌ಸಿ ರಿಟ್ ಅರ್ಜಿ ವಿಚಾರಣೆ ಅ.21ಕ್ಕೆ ಮುಂದೂಡಿಕೆ


ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್‌ಸ್ವಾಮಿ ಅವರೊಂದಿಗೆ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಜಗದೀಶ್ ಶೆಟ್ಟಿ, ಬಿ.ಎಂ.ಪಾರ್ವತಿ, ಶ್ರೇಯಾ ನಾಚಪ್ಪ ಇದ್ದರು.

ಮಡಿಕೇರಿ, ಆ.5–ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಮತ್ತು ಎಸ್‌ಟಿ ಟ್ಯಾಗ್ ಕುರಿತು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಬೇಡಿಕೆಗೆ ಪೂರಕವಾಗಿ ಆಯೋಗ ರಚಿಸಬೇಕೆಂದು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್‌ಸ್ವಾಮಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಅ.21ಕ್ಕೆ ಮುಂದೂಡಿದೆ.

ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ನಿಲಯ್ ವಿಪಿನ್ ಚಂದ್ರ ಅಂಜಾರಿಯಾ ಅವರನ್ನೊಳಗೊಂಡ ವಿಭಾಗೀಯ ಪೀಠ ಅರ್ಜಿ ವಿಚಾರಣೆ ನಡೆಸಿತು. ಡಾ.ಸುಬ್ರಮಣಿಯನ್‌ಸ್ವಾಮಿ ಅವರ ಕಾನೂನು ಸಹಾಯಕರಾದ ಹೈಕೋರ್ಟ್ ವಕೀಲ ಕಿರಣ್ ನಾರಾಯಣ್, ಸುಪ್ರೀಂಕೋರ್ಟ್ ವಕೀಲ ಸತ್ಯ ಸಬರವಾಲ್ ಹಾಗೂ ವಿಶೇಷ್ ಕನೋಡಿಯ ಅವರು ಸೋಮವಾರ ನಡೆದ ವಿಚಾರಣೆಯಲ್ಲಿ ಭಾಗಿಯಾಗಿದ್ದರು.

ಸಿಎನ್‌ಸಿ ಬೇಡಿಕೆಗೆ ಆಕ್ಷೇಪ ಸಲ್ಲಿಸಿದ ಪ್ರತಿವಾದಿಗಳ ಅಹವಾಲನ್ನು ಕೂಡ ಆಲಿಸಿದ ನ್ಯಾಯಾಲಯ ವಿಚಾರಣೆಯನ್ನು ಅ.21ಕ್ಕೆ ಮುಂದೂಡಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಅರ್ಜಿದಾರ ಸಂಖ್ಯೆ–2 ಆಗಿದ್ದರೆ, ಕೇಂದ್ರ ಕಾನೂನು ಸಚಿವಾಲಯ, ಕೇಂದ್ರ ಗೃಹ ಸಚಿವಾಲಯ ಮತ್ತು ಕರ್ನಾಟಕ ಪ್ರತಿವಾದಿ ಸಂಖ್ಯೆ ಕ್ರಮವಾಗಿ 1, 2 ಮತ್ತು 3 ಎಂದು ಉಲ್ಲೇಖಿಸಲಾಗಿದೆ.

> “ಕಾನೂನು ಹೋರಾಟದಿಂದ ಕೊಡವ ಬುಡಕಟ್ಟು ಜನಾಂಗಕ್ಕೆ ನ್ಯಾಯ ಸಿಗಲಿದ್ದು, ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಮತ್ತು ಎಸ್‌ಟಿ ಟ್ಯಾಗ್ ಪಡೆಯುವ ವಿಶ್ವಾಸವಿದೆ.
> –ಎನ್.ಯು.ನಾಚಪ್ಪ, ಸಿಎನ್‌ಸಿ ಅಧ್ಯಕ್ಷ

ಈ ಸಂದರ್ಭ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ, ವಿರಾಟ್ ಹಿಂದೂಸ್ತಾನ್ ಸಂಘಟನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ಲೆಫ್ಟಿನೆಂಟ್ ಕರ್ನಲ್ ಬಿ.ಎಂ. ಪಾರ್ವತಿ, ಶ್ರೇಯಾ ನಾಚಪ್ಪ, ಬೊಟ್ಟಂಗಡ ಗಿರೀಶ್, ಅರೆಯಡ ಗಿರೀಶ್, ಕಿರಿಯ ಮಾಡ ಶೆರಿನ್, ಚಂಬಂಡ ಜನತ್, ಬೇಪಡಿ ಯಂಡ ದಿನು, ನಂದೇಟಿರ ರವಿ, ಪಳಂಗಂಡ ಸುಬಣ್ಣ, ಚಂಗಣಮಕ್ಕಡ ವಿನು, ವಿಎಚ್‌ಎಸ್ ಸದಸ್ಯರಾದ ಶಶಿಕುಮಾರ್, ನಟರಾಜ್, ರವಿಶಂಕರ್, ವಕೀಲ ಶ್ರೀಕಾಂತ ಶರ್ಮ ಹಾಗೂ ಮಹೇಶ್ ಉಪಸ್ಥಿತರಿದ್ದರು.

ಪ್ರವಾಹ ಪೀಡಿತ ಪ್ರದೇಶದಲ್ಲಿ ಮತ್ತಷ್ಟು ಎಚ್ಚರ ವಹಿಸಿ

ವಿಡಿಯೋ ಸಂವಾದದಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚನೆ


ಡಿಸಿ ವೆಂಕಟ್ ರಾಜಾ

ಮಡಿಕೇರಿ, ಆ.5–ಕೊಡಗು ಜಿಲ್ಲೆಯಲ್ಲಿ ಎರಡು–ಮೂರು ದಿನಗಳಿಂದ ಮಳೆ ಕಡಿಮೆಯಾಗಿದೆ ಎಂದು ಅಧಿಕಾರಿಗಳು ಮೈಮರೆಯಬಾರದು. ಭೂ ಕುಸಿತ ಹಾಗೂ ಪ್ರವಾಹ ಪೀಡಿತ ಸೂಕ್ಷ್ಮ ಪ್ರದೇಶಗಳಲ್ಲಿ ಅಗತ್ಯ ಕಟ್ಟೆಚ್ಚರ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ನಿರ್ದೇಶಿಸಿದರು.

ಸೋಮವಾರ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಜಿಲ್ಲಾಧಿಕಾರಿ, ಮುಂದಿನ ಮೂರು–ನಾಲ್ಕು ದಿನಗಳ ನಂತರ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆದ್ದರಿಂದ ಮುಂದಿನ 10 ರಿಂದ 15 ದಿನ ಸಾಕಷ್ಟು ಎಚ್ಚರವಹಿಸಬೇಕಿದೆ. ಆ ನಿಟ್ಟಿನಲ್ಲಿ ಭೂ ಕುಸಿತ ಹಾಗೂ ಪ್ರವಾಹ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿನ ಜನರಿಗೆ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ಹತ್ತಿರದ ವಯನಾಡು ಜಿಲ್ಲೆಯಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದ ದುರಂತ ಎಲ್ಲಿಯೂ ಮರುಕಳಿಸಬಾರದು. ಜನ–ಜಾನುವಾರುಗಳ ರಕ್ಷಣೆ ಅತೀ ಮುಖ್ಯವಾಗಿದೆ. ಆ ನಿಟ್ಟಿನಲ್ಲಿ ಯಾವುದೇ ಪ್ರಾಣಹಾನಿ ಉಂಟಾಗದಂತೆ ಮುನ್ನೆಚ್ಚರವಹಿಸುವುದು ಅಗತ್ಯ. ಜುಲೈನಲ್ಲಿ ಸುರಿದ ಧಾರಾಕಾರ ಮಳೆಯಿಂದ ನದಿ, ಜಲಾಶಯ, ತೊರೆ, ಹಳ್ಳ ಕೊಳ್ಳಗಳು ತುಂಬಿ ಹರಿದಿವೆ. ಇದರಿಂದ ಅಂತರ್ಜಲ ಮಟ್ಟ ಹೆಚ್ಚಾಗಿದೆ. ಆದ್ದರಿಂದ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಎಚ್ಚರ ವಹಿಸಬೇಕಿದೆ. ಕಾಳಜಿ ಹಾಗೂ ಪರಿಹಾರ ಕೇಂದ್ರಗಳಲ್ಲಿ ಅಗತ್ಯ ಮೂಲಸೌಲಭ್ಯ ಒದಗಿಸಬೇಕು. ಯಾವುದೇ ದೂರು ಬರದಂತೆ ಗಮನಹರಿಸುವುದು ಸೂಕ್ತ ಎಂದು ತಹಸೀಲ್ದಾರ್‌ಗಳಿಗೆ ಸೂಚಿಸಿದರು.

> “ಪ್ರಕೃತಿ ವಿಕೋಪ ಎದುರಿಸಲು ಪೊಲೀಸ್ ಇಲಾಖೆ ಜಿಲ್ಲಾಡಳಿತದೊಂದಿಗೆ ಸದಾ ಕೈಜೋಡಿಸಲಿದೆ. ಆ ನಿಟ್ಟಿನಲ್ಲಿ ತಳಮಟ್ಟದಲ್ಲಿ ಪೊಲೀಸ್ ಇಲಾಖೆ ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸಹಕರಿಸಲಿದೆ.
> –ಕೆ.ರಾಮರಾಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮಳೆ ಹಾನಿ ತಕ್ಷಣದ ಕಾರ್ಯಗಳಿಗೆ ಗ್ರಾಪಂನಿಂದ ಹಣ ಬಿಡುಗಡೆ ಮಾಡಲಾಗುವುದು. ಸರ್ಕಾರದ ಮಾರ್ಗಸೂಚಿಯಂತೆ ತಾಪಂ ಇಓಗಳು ಕಾರ್ಯನಿರ್ವಹಿಸಬೇಕು. ಲೋಕೋಪಯೋಗಿ, ಪಂಚಾಯತ್ ರಾಜ್, ಸೆಸ್ಕ್, ಶಾಲೆಗಳು, ಅಂಗನವಾಡಿ ಕಟ್ಟಡಗಳು, ಸರ್ಕಾರಿ ಕಟ್ಟಡಗಳು ಹೀಗೆ ಮಳೆ ಹಾನಿ ಸಂಬಂಧ ನಿಖರ ಮಾಹಿತಿ ಒದಗಿಸುವಂತೆ ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಆದೇಶಿಸಿದರು.

ಜಿಪಂ ಸಿಇಓ ಆನಂದ ಪ್ರಕಾಶ್ ಮೀನಾ ಮಾತನಾಡಿ, ತಾಪಂ ಮತ್ತು ಗ್ರಾಪಂ ಮಟ್ಟದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧ ಜಿಲ್ಲಾಡಳಿತದ ನಿರ್ದೇಶನದಂತೆ ಎಲ್ಲಾ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಂವಾದದಲ್ಲಿ ತಹಸೀಲ್ದಾರ್‌ಗಳು, ವಿವಿಧ ಇಲಾಖೆ ಇಂಜಿನಿಯರ್ ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು.

ಗಮಕ ವಾಚನ ಉಳಿವಿಗೆ ಸರ್ಕಾರ ಗಮನಹರಿಸಲಿ



ಅರಮೇರಿ ಕಳಂಚೇರಿ ಮಠದಲ್ಲಿ ನಡೆದ ಮಾಸಿಕ ತತ್ತ್ವ ಚಿಂತನಾ ಗೋಷ್ಠಿಯನ್ನು ಪತ್ರಕರ್ತ ಅನಂತಶಯನ ಉದ್ಘಾಟಿಸಿದರು.

ವಿರಾಜಪೇಟೆ: ಗಮಕ ವಾಚನ ಕಲೆ ಉಳಿಸಿ ಬೆಳೆಸಲು ಸರ್ಕಾರ ಗಮನಹರಿಸಬೇಕು ಎಂದು ಮೈಸೂರಿನ ಗಮಕ ವಾಚನ ಉಪನ್ಯಾಸಕಿ ಪದ್ಮಿನಿ ಶ್ರೀನಿವಾಸ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಕಿರಣ–222 ಮಾಸಿಕ ತತ್ತ್ವ ಚಿಂತನಾ ಗೋಷ್ಠಿಯಲ್ಲಿ 'ಗೀತ ರಾಮಾಯಣದಲ್ಲಿ ಶ್ರೀರಾಮ ಪಟ್ಟಾಭಿಷೇಕ' ಕುರಿತು ಉಪನ್ಯಾಸ ನೀಡಿದ ಅವರು, ಧರ್ಮದ ಮಾರ್ಗದಲ್ಲಿ ನಡೆಯಲು ರಾಮನಾಮದ ಗಮಕ ಕಲೆಯನ್ನು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಆದರೆ, ಗಮಕ ವಾಚನದ ಬಗ್ಗೆ ಮೊದಲು ಶಿಕ್ಷಕರಿಗೆ ತರಬೇತಿ ನೀಡಿದರೆ ಮಾತ್ರ ವಿದ್ಯಾರ್ಥಿಗಳಿಗೆ ಹೇಳಿಕೊಡಲು ಸಾಧ್ಯ. ಜೊತೆಗೆ ಪ್ರತಿಯೊಬ್ಬರು ಆತ್ಮೀಯತೆಯಿಂದ ಬದುಕಿದಾಗ ರಾಮ ರಾಜ್ಯವಾಗಲು ಸಾಧ್ಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪತ್ರಕರ್ತ ಅನಂತಶಯನ, ಪವಿತ್ರ ಶ್ರೀರಾಮನ ಬಗ್ಗೆ ಸಾಕಷ್ಟು ವಿಚಾರಗಳಿವೆ. ರಾಮಾಯಣದಲ್ಲಿನ ಶ್ರೀ ರಾಮ ಪಟ್ಟಾಭಿಷೇಕವನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಸಂಗೀತಕ್ಕಿಂತ ಸುಂದರವಾದ ಗಮಕ ವಾಚನಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ತಿಳಿಸಿದರು.

ಶ್ರೀಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ರಾಮಾಯಣವನ್ನು ಹೆಚ್ಚು ಜನರು ಕೇಳಿರುತ್ತಾರೆ. ಆದರೆ, ರಾಮನ ಪಟ್ಟಾಭಿಷೇಕ ಅದ್ಭುತ. ಗಮಕ ವಾಚನ ಕೇಳಲು ಮನಸ್ಸಿರಬೇಕು. ಮಾನವ ಜೀವನದಲ್ಲಿ ದ್ವೇಷಗಳನ್ನು ಬಿಟ್ಟು ಪರಿವರ್ತನೆ ಕಾಣಬೇಕು. ಕಲ್ಮಶಗಳನ್ನು ತೊಳೆದು ಹೃದಯ ಮುಟ್ಟುವಂತೆ ನಮ್ಮನ್ನು ನಾವು ಭಗವಂತನಿಗೆ ಒಪ್ಪಿಸುವಂತಾಗಬೇಕು ಆಗ ಮಾತ್ರ ಆತ್ಮದಲ್ಲಿ ಗುಡಿ ಕಟ್ಟಲು ಸಾಧ್ಯ ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ದೀಪ್ತಿ, ದಿವ್ಯ ದರ್ಶಿಣಿ, ವರ್ಷಿಣಿ ಮತ್ತಿತರರಿದ್ದರು.

ಸಗಣಿ ಗುಂಡಿಗೆ ಬಿದ್ದ ಕಾಡಾನೆ


ನೂಕ್ಯ ಗ್ರಾಮದ ಲೈನ್ ಮನೆ ಸಗಣಿ ಗುಂಡಿಗೆ ಬಿದ್ದ ಕಾಡಾನೆ.

ಮಡಿಕೇರಿ, ಆ.5–ಪೊನ್ನಂಪೇಟೆ ತಾಲೂಕಿನ ತಿತಿಮತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೂಕ್ಯ ಗ್ರಾಮದ ಕಾಫಿ ತೋಟದ ಲೈನ್ ಮನೆಯ ಹಿಂಭಾಗದ ಸಗಣಿ ಗುಂಡಿಗೆ ಕಾಡಾನೆ ಬಿದ್ದು ಹೊರ ಬರಲಾರದೆ ಕೆಲಕಾಲ ಪರದಾಡಿದೆ.

ಕಾಡಾನೆ ಗುಂಡಿಗೆ ಬಿದ್ದು ಹೊರ ಬರಲಾರದೆ ಒದ್ದಾಡುತ್ತಿರುವುದನ್ನು ಕಂಡ ತೋಟದ ರೈಟರ್ ವಸಂತ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಆದರೆ, ಅರಣ್ಯ ಅಧಿಕಾರಿಗಳು ಸ್ಥಳಕ್ಕೆ ಬರುವಷ್ಟರಲ್ಲಿ ಗುಂಡಿಯಿಂದ ಮೇಲೆದ್ದು ಬಂದ ಆನೆ ಕಾಫಿ ತೋಟದೊಳಗೆ ಸೇರಿಕೊಂಡಿತ್ತು. ನಂತರ ಅರಣ್ಯ ಸಿಬ್ಬಂದಿ ಕಾಡಾನೆಯನ್ನು ನಾಗರಹೊಳೆ ಅಭಯಾರಣ್ಯಕ್ಕೆ ಓಡಿಸಿದರು.

ಈ ಸಂದರ್ಭ ಆರ್‌ಎಫ್‌ಓ ಗಂಗಾಧರ್, ಉಪ ವಲಯ ಅರಣ್ಯಾಧಿಕಾರಿ ದೇವರಾಜ್, ತಿತಿಮತಿ ಹಾಗೂ ಮತ್ತಿಗೋಡು ವನ್ಯಜೀವಿ ವಲಯದ ಸಿಬ್ಬಂದಿ ಹಾಜರಿದ್ದರು.

ಬಸ್, ಗೂಡ್ಸ್ ವಾಹನ ಡಿಕ್ಕಿ: ಚಾಲಕ, ನಿರ್ವಾಹಕನಿಗೆ ಗಾಯ


ಬಸ್ ಮುಂಭಾಗ ಜಖಂಗೊಂಡಿರುವುದು.

ಮಡಿಕೇರಿ, ಆ.5–ಕೇರಳ ಸಾರಿಗೆ ಬಸ್ ಹಾಗೂ ಗೂಡ್ಸ್ ವಾಹನ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಬಸ್ ಚಾಲಕ ಹಾಗೂ ನಿರ್ವಾಹಕ ಗಾಯಗೊಂಡ ಘಟನೆ ಪೊನ್ನಂಪೇಟೆ ತಾಲೂಕಿನ ದೇವರಪುರ ಗ್ರಾಮ ಪಂಚಾಯಿತಿ ವ್ಯಾಪ್ತಿ ಭದ್ರಗೋಳ ಗ್ರಾಮದಲ್ಲಿ ಸೋಮವಾರ ಮುಂಜಾನೆ ನಡೆದಿದೆ.

ಕೇರಳದ ಕೋಯಿಕೋಡ್‌ನಿಂದ ಪೊನ್ನಂಪೇಟೆ ಮಾರ್ಗವಾಗಿ ಬೆಂಗಳೂರಿಗೆ ತೆರಳುತ್ತಿದ್ದ ಬಸ್ ಹಾಗೂ ಮೈಸೂರಿನಿಂದ ಕೇರಳದ ಮಟ್ಟನ್ನೂರಿಗೆ ತರಕಾರಿ ಸಾಗಿಸುತ್ತಿದ್ದ ಗೂಡ್ಸ್ ವಾಹನ ನಡುವೆ ಡಿಕ್ಕಿ ಸಂಭವಿಸಿದೆ. ಪರಿಣಾಮ ಬಸ್ ಮುಂಭಾಗ ಜಖಂಗೊಂಡಿದ್ದು, ಚಾಲಕ ಪ್ರವೀಣ್ ಹಾಗೂ ನಿರ್ವಾಹಕ ರಶೀದ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ. ಬಸ್‌ನಲ್ಲಿದ್ದ 38 ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಗೋಣಿಕೊಪ್ಪಲು ಪೊಲೀಸ್ ಠಾಣಾಧಿಕಾರಿ ರೂಪಾದೇವಿ ಬಿರಾದಾರ್ ಮತ್ತು ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಾಸ್ಯ ಬರಹದಲ್ಲಿ 30 ಸ್ಪರ್ಧಿಗಳು ಭಾಗಿ

ಪೊಂಬೊಳ್ಚ ಕೂಟ ಲಾಂಛನ

ಗೋಣಿಕೊಪ್ಪ, ಆ.5–ಪೊಂಬೊಳ್ಚ ಕೂಟದಿಂದ ಆಯೋಜಿಸಿದ್ದ ಕಕ್ಕಡತೋರ್ ಚೋದ್ ಆನ್‌ಲೈನ್ ಹಾಸ್ಯ ಬರಹದಲ್ಲಿ ಸುಮಾರು 30 ಬರಹಗಾರರು ಭಾಗವಹಿಸಿದರು.

ನಂಬಿಯಪಂಡ ರಂಜು ನಾಣಯ್ಯ ಪ್ರಥಮ, ಅಣ್ಣಳಮಾಡ ಕಾಂತಿ ಚೋಂದಮ್ಮ ದ್ವಿತೀಯ ಹಾಗೂ ಕೂಪದೀರ ಸುಂದರಿ ಮಾಚಯ್ಯ ತೃತೀಯ ಸ್ಥಾನ ಗಳಿಸಿದರು.

ಕರವಂಡ ಸರಸು ಪೆಮ್ಮಯ್ಯ ಬಹುಮಾನ ವಿತರಿಸಿದರು. ತೀರ್ಪುಗಾರರಾಗಿ ಲೆಫ್ಟಿನೆಂಟ್ ಬಿದ್ದಂಡ ನಾಣಿ ದೇವಯ್ಯ ಹಾಗೂ ಸಂಚಾಲಕರಾಗಿ ಚೇನಂಡ ತೇಜ ಬೋಪಣ್ಣ ಕಾರ್ಯ ನಿರ್ವಹಿಸಿದರು ಎಂದು ಕೂಟದ ಸ್ಥಾಪಕ ಅಧ್ಯಕ್ಷ ಕೋಟೆರ ಪೂಣಚ್ಚ ತಿಳಿಸಿದ್ದಾರೆ.

ಮಹಡಿಯಿಂದ ಬಿದ್ದು ಮೆಕಾನಿಕ್ ಸಾವು


ಶಶಿ

ಸುಂಟಿಕೊಪ್ಪ, ಆ.5–ಮನೆ ಮಹಡಿಯಿಂದ ಆಯತಪ್ಪಿ ಬಿದ್ದು ಮೆಕಾನಿಕ್ ಮೃತಪಟ್ಟ ಘಟನೆ ಸುಂಟಿ ಕೊಪ್ಪದಲ್ಲಿ ಸೋಮವಾರ ನಡೆದಿದೆ.

ಸುಂಟಿಕೊಪ್ಪದ ಬೈಕ್ ಮೆಕಾನಿಕ್ ಶಶಿ (40) ಮೃತಪಟ್ಟಿದ್ದು, ಈತ ತಮ್ಮ ಮನೆ ಹಿಂಭಾಗದ ಮಹಡಿಯಿಂದ ಬಿದ್ದಿದ್ದರು. ಇದರಿಂದ ಗಂಭೀರ ಗಾಯಗೊಂಡಿದ್ದ ಶಶಿಯನ್ನು ಕೂಡಲೇ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೃತರು ಪತ್ನಿ ಸಂಧ್ಯಾ, ಪುತ್ರಿ ಹಾಗೂ ಪುತ್ರನನ್ನು ಅಗಲಿದ್ದಾರೆ.

ಪ್ರವಾಹ ಹಾನಿ ಸೂಕ್ತ ವರದಿ ಸಲ್ಲಿಸಿ

ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪಿ.ಮಣಿವಣ್ಣನ್ ಸೂಚನೆ

ಕೊಳ್ಳೇಗಾಲ, ಆ.5–ತಾಲೂಕಿನ ಗ್ರಾಮಗಳಲ್ಲಿ ಪ್ರವಾಹದಿಂದ ಉಂಟಾದ ಬೆಳೆ ಹಾಗೂ ಮನೆ ಹಾನಿ ಕುರಿತು ಸರ್ವೇ ಕಾರ್ಯ ಕೈಗೊಂಡು ಸೂಕ್ತ ವರದಿ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪಿ.ಮಣಿವಣ್ಣನ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣ ಉಪವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನ ವಿವಿಧ ಗ್ರಾಮಗಳಲ್ಲಿ ಇತ್ತೀಚೆಗೆ ಪ್ರವಾಹದಿಂದ ಜಮೀನು ಹಾಗೂ ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿರುವ ಕುರಿತು ಸರ್ವೇ ನಡೆಸಬೇಕು. ಎಷ್ಟು ಪ್ರಮಾಣದಲ್ಲಿ ಬೆಳೆ ನಾಶವಾಗಿದೆ. ಎಷ್ಟು ಮನೆಗಳಿಗೆ ಹಾನಿಯಾಗಿದೆ ಎಂದು ಸಮರ್ಪಕವಾಗಿ ಸಮೀಕ್ಷೆ ನಡೆಸಿ, ಸಮಗ್ರ ವರದಿ ನೀಡಬೇಕು ಎಂದು ನಿರ್ದೇಶಿಸಿದರು.

ಪ್ರವಾಹ ಪೀಡಿತ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಸಬೇಕು. ಕಲುಷಿತ ನೀರು ಸರಬರಾಜಾಗುತ್ತಿದೆಯೇ ಎಂದು ಖಾತರಿ ಪಡಿಸಿಕೊಳ್ಳಬೇಕು. ನೀರು ಪರೀಕ್ಷೆ ವರದಿ ಪಡೆದುಕೊಳ್ಳಬೇಕು. ಗ್ರಾಮಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ಯಾವುದೇ ರೋಗರುಜಿನ ಹರಡದಂತೆ ಮುತುವರ್ಜಿ ವಹಿಸಿ, ನೈರ್ಮಲ್ಯ ಕಾರ್ಯ ಕೈಗೊಳ್ಳಬೇಕು ಎಂದರು.


ಕೊಳ್ಳೇಗಾಲ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪಿ.ಮಣಿವಣ್ಣನ್ ಮಾಹಿತಿ ಪಡೆದರು.

ಸಂತ್ರಸ್ತ ಗ್ರಾಮಗಳಲ್ಲಿ ಕೈಗೊಂಡ ಕ್ರಮಗಳು, ಕಾಳಜಿ ಕೇಂದ್ರಗಳ ನಿರ್ವಹಣೆ, ಜನರ ಸ್ಥಳಾಂತರ ಇನ್ನಿತರ ವಿವರ ನೀಡಿದ ಜಿಲ್ಲಾಧಿಕಾರಿ ಶಿಲ್ಪನಾಗ್, ಪ್ರವಾಹ ತಡೆಗೆ ಶಾಶ್ವತ ಪರಿಹಾರ ಕೈಗೊಳ್ಳಲು ಜನರು ಬಯಸಿದ್ದಾರೆ. ಪ್ರವಾಹ ತಡೆಯಲು ತಡೆಗೋಡೆ ನಿರ್ಮಾಣಕ್ಕಾಗಿ 150 ಕೋಟಿ ರೂ. ವೆಚ್ಚದಲ್ಲಿ ಅಂದಾಜುಪಟ್ಟಿ ಸಿದ್ಧಪಡಿಸಿದ್ದು, ಸಚಿವರ ಗಮನಕ್ಕೆ ತರಲಾಗಿದೆ ಎಂದು ಮಾಹಿತಿ ನೀಡಿದರು.

ಮಣಿವಣ್ಣನ್ ಮಾತನಾಡಿ, ಪ್ರವಾಹ ಸಂದರ್ಭದಲ್ಲಿ ಜಿಲ್ಲೆಯ ಅಧಿಕಾರಿಗಳ ತಂಡ ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಪ್ರತಿಯೊಂದು ವಿಪತ್ತು ನಿರ್ವಹಣಾ ಸಮಯದಲ್ಲೂ ಇದೇ ರೀತಿ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಿ, ಜನರಿಗೆ ಸ್ಪಂದಿಸಬೇಕು ಎಂದು ತಿಳಿಸಿದರು.

ಸಭೆಗೂ ಮುನ್ನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಣಿವಣ್ಣನ್ ಅಧಿಕಾರಿಗಳೊಂದಿಗೆ ತಾಲೂಕಿನ ಪ್ರವಾಹ ಪೀಡಿತ ಗ್ರಾಮಗಳಿಗೆ ಭೇಟಿ ನೀಡಿ, ಖುದ್ದು ಪರಿಶೀಲಿಸಿದರು. ಇದೇ ವೇಳೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಉಪವಿಭಾಗಾಧಿಕಾರಿ ಮಹೇಶ್, ಜಂಟಿ ಕೃಷಿ ನಿರ್ದೇಶಕ ಅಬೀದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ, ತಾಪಂ ಇಓ ಶಿವಪ್ರಕಾಶ್, ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕಿ ಎಂ.ವಿ.ಸುಧಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ತಾಲೂಕು ಅಧಿಕಾರಿಗಳು, ಪಿಡಿಓಗಳು, ಗ್ರಾಮಲೆಕ್ಕಿಗರು ಇದ್ದರು.

> “ಕೇರಳದ ವಯನಾಡು ಭೂ ಕುಸಿತ ದುರಂತದಲ್ಲಿ ಜಿಲ್ಲಾಡಳಿತ ತ್ವರಿತವಾಗಿ ಸ್ಪಂದಿಸಿದೆ. ಜಿಲ್ಲೆಯಲ್ಲಿ ಕಂಟ್ರೋಲ್ ರೂಂ ಹಾಗೂ ಸಹಾಯವಾಣಿ ತೆರೆದು ಕರೆಗಳನ್ನು ಸ್ವೀಕರಿಸಿ, ಅವರ ನೆರವಿಗೆ ಮುಂದಾಗಿದೆ. ಆರೋಗ್ಯ ಹಾಗೂ ವಿವಿಧ ಇಲಾಖೆ ಅಧಿಕಾರಿ ತಂಡವನ್ನು ವಯನಾಡಿಗೆ ಕಳುಹಿಸಲಾಗಿತ್ತು. ಜಿಲ್ಲೆಯ ಅಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಿ, ಸಂತ್ರಸ್ತರಿಗೆ ನೆರವಾಗಿದ್ದಾರೆ.
> –ಶಿಲ್ಪನಾಗ್, ಜಿಲ್ಲಾಧಿಕಾರಿ

ವಾಡಿಕೆಗಿಂತ ಅಧಿಕ ಮುಂಗಾರು ಮಳೆ ಹಿನ್ನೆಲೆ

ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಚುರುಕು



ಚಾಮರಾಜನಗರ, ಆ.5– ಈ ಬಾರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಡಿ ವಾಡಿಕೆಗಿಂತ ಅಧಿಕ ಮಳೆಯಾಗುತ್ತಿದ್ದು, ಜಿಲ್ಲೆಯ ಜಲಾಶಯ, ಕೆರೆಕಟ್ಟೆಗಳಿಗೆ ನೀರು ಹರಿದು ಬರುತ್ತಿದೆ. ಇದರಿಂದ ಕೃಷಿ ಚಟುವಟಿಕೆ ಕಾರ್ಯ ಚುರುಕುಗೊಂಡಿದೆ.

ಕಳೆದ ಎರಡು ವರ್ಷಗಳಿಂದ ಮುಂಗಾರು ಮಳೆ ವಿಳಂಬವಾಗಿ ಆರಂಭವಾಗುತ್ತಿತ್ತು. ಅಲ್ಲದೆ, ನಿರೀಕ್ಷಿತ ಸಮಯದಲ್ಲಿ ಮಳೆಯಾಗದೆ ರೈತರನ್ನು ನಷ್ಟಕ್ಕೆ ದೂಡುವಂತೆ ಮಾಡಿತ್ತು. ಆದರೆ, ಈ ಬಾರಿ ನಿರೀಕ್ಷಿತ ಅವಧಿಯಲ್ಲಿ ಮುಂಗಾರು ಆಗಮನವಾಗಿದೆ. ಆದ್ದರಿಂದ ಉತ್ತಮ ಬೆಳೆ ನಿರೀಕ್ಷೆಯಲ್ಲಿ ಅನ್ನದಾತರು ಇದ್ದಾರೆ. ಈಗಾಗಲೇ ಉತ್ತಮವಾಗಿ ಪೂರ್ವ ಮುಂಗಾರು ಮಳೆ ಆಗಿದ್ದು, ರೈತರು ಜಮೀನು ಹದಗೊಳಿಸಿ ಬಹುತೇಕ ಕಡೆಗಳಲ್ಲಿ ಬಿತ್ತನೆ ಕಾರ್ಯ ಪೂರ್ಣಗೊಳಿಸಿದ್ದಾರೆ.

ಬಿತ್ತನೆ ಖರೀದಿ ಜೋರು: ಕೃಷಿ ಇಲಾಖೆ ಅಧಿಕಾರಿಗಳು ಮಳೆಗೂ ಮುನ್ನ ಬಿತ್ತನೆ ಬೀಜಗಳನ್ನು ಸಂಗ್ರಹಿಸಿದ್ದರು. ಇಲಾಖೆ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದ್ದು, ರೈತರು ಬಿತ್ತನೆ ಖರೀದಿಗೆ ಮುಂದಾಗಿದ್ದಾರೆ. ಗ್ರಾಮೀಣ ಭಾಗದ ಬಹುತೇಕ ರೈತರು ಬಳಿ ಎತ್ತುಗಳಿಲ್ಲ ಹೀಗಾಗಿ ಜಾನುವಾರುಗಳನ್ನು ಹೊಂದಿರುವ ರೈತರಿಗೆ ಬೇಡಿಕೆ ಹೆಚ್ಚಿದೆ. ನೇಗಿಲಿನ ಮೂಲಕವೇ ಬಿತ್ತನೆ ಮಾಡಿಸಬೇಕೆಂಬುದು ರೈತರ ಆಶಯ. ಹೀಗಾಗಿ ಕೆಲವು ರೈತರು ಒಂದು ದಿನಕ್ಕೆ 2 ಸಾವಿರ ರೂ. ನೀಡಿ ಸೂರ್ಯಕಾಂತಿ, ಜೋಳ, ಅಲಸಂದೆ ಬಿತ್ತುತ್ತಿದ್ದಾರೆ.

57.77 ಕ್ವಿಂಟಾಲ್ ವಿತರಣೆ: ಜಿಲ್ಲಾ ಕೃಷಿ ಇಲಾಖೆಗೆ 921.80 ಕ್ವಿಂಟಾಲ್‌ಗಳಷ್ಟು ಬಿತ್ತನೆ ಬೀಜ ಪೂರೈಕೆಯಾಗಿದ್ದು, ಈಗಾಗಲೇ ಜಿಲ್ಲಾದ್ಯಂತ 57.77 ಕ್ವಿಂಟಾಲ್‌ಗಳಷ್ಟು ಬಿತ್ತನೆ ವಿತರಿಸಲಾಗಿದೆ. ಇನ್ನೂ 864.03 ಕ್ವಿಂಟಾಲ್‌ಗಳಷ್ಟು ದಾಸ್ತಾನು ಮಾಡಲಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಧಾರಕಾರ ಮಳೆ: ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯ ಹಲವೆಡೆ ಕಳೆದ ಹದಿನೈದು ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿದ್ದು, ಇದರಿಂದ ಜಿಲ್ಲೆಯೂ ಮಲೆನಾಡಿನಂತೆ ಭಾಸವಾಗುತ್ತಿದೆ.

ನೇಮಕಾತಿ ನಿಯಮ ತಿದ್ದುಪಡಿಗೆ ಒತ್ತಾಯಿಸಿ ಶಿಕ್ಷಕರ ಪ್ರತಿಭಟನೆ


ಚಾಮರಾಜನಗರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಎದುರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಆ.5–ಶಿಕ್ಷಕರ ಹೊಸ ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿಗೊಳಿಸಬೇಕು ಎಂದು ಒತ್ತಾಯಿಸಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಯಿತು.

2017ರ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು 2016ಕ್ಕಿಂತ ಮೊದಲು ನೇಮಕಾತಿಯಾದವರಿಗೆ ಪೂರ್ವಾನ್ವಯಗೊಳಿಸಬಾರದು. ಇದರಿಂದ ಪ್ರಾಥಮಿಕ ಶಾಲಾ ಸೇವಾನಿರತ ಶಿಕ್ಷಕರಿಗಾಗಿರುವ ಅನ್ಯಾಯ ಸರಿಪಡಿಸಬೇಕು. ಪದವಿ ಪೂರೈಸಿದ ಶಿಕ್ಷಕರನ್ನು ಸೇವಾ ಜ್ಯೇಷ್ಠತೆಯೊಂದಿಗೆ ಪದವೀಧರ ಶಿಕ್ಷಕರೆಂದು ಪದನಾಮೀಕರಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 2016ರ ಪೂರ್ವಾನ್ವಯದಂತೆ ಅರ್ಹತೆ ಆಧಾರದ ಮೇಲೆ ಪ್ರೌಢಶಾಲೆಗೆ ಬಡ್ತಿ ನೀಡಬೇಕು. ಆ.7ರಂದು ಜಿಲ್ಲಾ ಮಟ್ಟ ಹಾಗೂ 12ರಂದು ರಾಜ್ಯ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ನಂತರ ಮೆರವಣಿಗೆ ನಡೆಸಿದ ಶಿಕ್ಷಕರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್.ಮಾದಪ್ಪ, ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಮಹದೇವಸ್ವಾಮಿ, ಪದಾಧಿಕಾರಿಗಳಾದ ಗೀತಾ, ಶಶಿಕಲಾ, ಎಂ.ಡಿ.ಮಹದೇವಯ್ಯ, ಎನ್.ಸುಧಾ, ಬಿ.ಕೃಷ್ಣಮೂರ್ತಿ, ಸಿ.ಮಹದೇವಸ್ವಾಮಿ, ಸವಿತಾರಾಣಿ, ಮಂಜುಳಾ, ಸಿ.ಎಂ.ಮುರುಗೇಶ್ ಕುಮಾರ್, ಎಸ್.ಜಿ.ರಾಜು, ರಾಚಯ್ಯ, ಸುಶೀಲಾ ಮತ್ತಿತರರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ...


ಬೇಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಸಚಿವ ದಿ.ಹೆಚ್.ಎಸ್.ಮಹದೇವಪ್ರಸಾದ್ ಹುಟ್ಟುಹಬ್ಬದ ಅಂಗವಾಗಿ ಕಲಿಕಾ ಸಾಮಗ್ರಿ ವಿತರಿಸಿದರು. ಗ್ರಾಪಂ ಸದಸ್ಯ ಬಿ.ಎನ್.ಪುನೀತ್ ಕುಮಾರ್, ಗ್ರಾಮದ ಯಜಮಾನ ಶಿವಮೂರ್ತಿ, ಮುಖಂಡರಾದ ಎ.ರವಿ, ಭಾಸ್ಕರ್, ಸುರೇಶ್ ಈಡಿಗ್, ರೈತ ಸಂಘದ ಮರಿಶೆಟ್ಟಿ, ವೆಂಕಟೇಶ್, ಮಹೇಶ್, ಶಿಕ್ಷಕರು ಇದ್ದರು.

ಕೊಳ್ಳೇಗಾಲ ಕರಾಟೆ ಪಟುಗಳ ಪದಕ ಸಾಧನೆ


ರಾಷ್ಟ್ರೀಯ ಕರಾಟೆ ಓಪನ್ ಚಾಂಪಿಯನ್‌ಶಿಪ್‌ನಲ್ಲಿ ಪದಕ ಗಳಿಸಿದ ಕೊಳ್ಳೇಗಾಲ ಶೋಟೋಕಾನ್ ಸ್ಕೂಲ್ ಆಫ್ ಕರಾಟೆ ಶಾಲೆ ವಿದ್ಯಾರ್ಥಿಗಳು.

ಕೊಳ್ಳೇಗಾಲ: ಬೆಂಗಳೂರಲ್ಲಿ ನಡೆದ 11ನೇ ರಾಷ್ಟ್ರೀಯ ಕರಾಟೆ ಓಪನ್ ಚಾಂಪಿಯನ್ ಶಿಪ್‌ನಲ್ಲಿ ಪಟ್ಟಣದ ಶೋಟೋಕಾನ್ ಕರಾಟೆ ಶಾಲೆಯ 19 ವಿದ್ಯಾರ್ಥಿಗಳು 2 ಚಿನ್ನ, 6 ಬೆಳ್ಳಿ ಹಾಗೂ 11 ಕಂಚಿನ ಪದಕ ಗಳಿಸಿದ್ದಾರೆ. ಕಥಾ ವಿಭಾಗದಲ್ಲಿ ಎಸ್.ಧ್ರುವ, ಜೆ.ಸಾತ್ವಿಕ್ ಚಿನ್ನ, ಜೀವನ್ ನಾಯಕ್, ಸನ್ನಿಧಿ ಪಟೇಲ್, ಪ್ರೀತಮ್, ನಯನ, ಲಿಖಿತಾ, ಅರ್ಜುನ್, ಶ್ರೇಯಸ್, ಕುಶಾಲ್, ಅಭಯ್, ಪ್ರಣತಿ, ಆರ್.ಅಥರ್ವ, ಹರ್ಷಿತಾ, ದಿವ್ಯಾಂಕ, ಪಿ.ಅಕ್ಷಯ, ಪ್ರಣವಜಯಂತ್, ಕೈಲಾಶ್ ನಾಗ್, ಸಾಯಿ ವೈಷ್ಣವಿ ಕಂಚಿನ ಪದಕ ಗಳಿಸಿದ್ದಾರೆ. ಕುಮಿಥೆ ವಿಭಾಗದಲ್ಲಿ 6 ಬೆಳ್ಳಿ ಪದಕ ಗಳಿಸಿದ್ದಾರೆ. ಇದೇ ವೇಳೆ ವಿಜೇತ ವಿದ್ಯಾರ್ಥಿಗಳನ್ನು ಶೋಟೋಕಾನ್ ಸ್ಕೂಲ್ ಆಫ್ ಕರಾಟೆ ಇಂಡಿಯಾ ಕಾರ್ಯದರ್ಶಿ ರೆನ್ಶಿ ಯೋಗೇಶ್, ಕರಾಟೆ ತರಬೇತುದಾರ ಸೆನ್ಸೈ ಸೌಜನ್ಯ ಪ್ರಭಾಕರ್ ಅಭಿನಂದಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಸಾಕುಪ್ರಾಣಿ ಬಿಡದಂತೆ ಸೂಚನೆ

ಚಾಮರಾಜನಗರ, ಆ.5–ನಗರದ ಸಾರ್ವಜನಿಕ ಸ್ಥಳಗಳಲ್ಲಿ ಸಾಕುಪ್ರಾಣಿಗಳನ್ನು ಬಿಡದಂತೆ ನಗರಸಭೆ ಸೂಚನೆ ನೀಡಿದೆ.

ನಗರಸಭೆ ವ್ಯಾಪ್ತಿಯಲ್ಲಿ ಹಸು, ಆಡು, ಕುರಿ, ಹಂದಿ, ನಾಯಿ, ಕುದುರೆ ಹಾಗೂ ಇತರೆ ಯಾವುದೇ ಸಾಕುಪ್ರಾಣಿಗಳನ್ನು ಬಿಡುವಂತಿಲ್ಲ. ರಸ್ತೆ ಮಧ್ಯದಲ್ಲೇ ಸಾಕುಪ್ರಾಣಿಗಳು ಮಲಗಿಕೊಳ್ಳುವುದು ಹಾಗೂ ರಸ್ತೆಗೆ ಅಡ್ಡಲಾಗಿ ನಿಂತುಕೊಳ್ಳುವುದರಿಂದ ವಾಹನ ಸವಾರರು ಅಪಘಾತಗಳಿಗೆ ಒಳಗಾಗಿ ತೊಂದರೆ ಅನುಭವಿಸುವಂತಾಗಿದೆ.

ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕ ಓಡಾಟಕ್ಕೆ ಅಡಚಣೆ ಆಗುತ್ತಿದೆ. ಮಾಲೀಕರು ಸಾಕುಪ್ರಾಣಿಗಳನ್ನು ತಮ್ಮ ಸುಪರ್ದಿಯಲ್ಲಿ ಇಟ್ಟುಕೊಂಡು ಸಾಕಬೇಕು. ಪಟ್ಟಣದಿಂದ 5 ಕಿಮೀ ದೂರದಲ್ಲಿ ಹಂದಿಗಳನ್ನು ಸಾಕಬೇಕು. ತಪ್ಪಿದ್ದಲ್ಲಿ ನಗರಸಭೆ ವತಿಯಿಂದ ಸಾಕುಪ್ರಾಣಿಗಳನ್ನು ಸೆರೆ ಹಿಡಿದು, ಗೋ ಶಾಲೆಗೆ ಸೇರಿಸಲಾಗುವುದು ಎಂದು ನಗರಸಭೆ ಪೌರಾಯುಕ್ತರು ಎಚ್ಚರಿಸಿದ್ದಾರೆ.

ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ



ಮೈಸೂರು, ಆ.5(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ(ಆ.6) ದಿಢೀರ್ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಆ.9ರವರೆಗೂ ಮೈಸೂರಲ್ಲೇ ವಾಸ್ತವ್ಯ ಹೂಡುವ ಸಾಧ್ಯತೆ ಇದೆ ಎನ್ನಲಾಗಿದೆ. ಕಳೆದೊಂದು ವಾರದಿಂದ ನೆರೆಹಾವಳಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರುವ ಮುಖ್ಯಮಂತ್ರಿಗಳು, ಸೋಮವಾರ ಕೂಡ ಬೆಳಗಾವಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ್ದಾರೆ. ನಾಳೆ(ಆ.6) ಸಂಜೆ 5 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಟು 5.25ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿ ವಾಸ್ತವ್ಯ ಇರಲಿದ್ದಾರೆ. ಬಿಜೆಪಿ–ಜೆಡಿಎಸ್ ಪಾದಯಾತ್ರೆ ಪಾದಯಾತ್ರೆ ಆ.10ರಂದು ಮೈಸೂರಿಗೆ ತಲುಪಲಿದ್ದು, ಅದಕ್ಕೂ ಒಂದು ದಿನ ಮುಂಚಿತವಾಗಿ ಆ.9 ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸುವ ಸಾಧ್ಯತೆಗಳಿವೆ. ಇದರ ನಡುವೆ ಮುಡಾ ಹಗರಣ ಸಂಬಂಧದ ನ್ಯಾಯಾಂಗ ತನಿಖೆಗೂ ಸಹಕರಿಸಲಿದ್ದಾರೆ ಎನ್ನಲಾಗಿದೆ.

ಪ್ರಧಾನಿ ಶೇಖ್ ಹಸೀನಾ ದೇಶದಿಂದ ಪಲಾಯನ

ಬಾಂಗ್ಲಾದೇಶದಲ್ಲಿ ಸೇನೆಯಿಂದ ಮಧ್ಯಂತರ ಸರ್ಕಾರ ಘೋಷಣೆ





ಶೇಖ್ ಹಸೀನಾ

ಢಾಕಾ: ನೆರೆಯ ಬಾಂಗ್ಲಾದೇಶದಲ್ಲಿ ನಾಟಕೀಯ ಬೆಳವಣಿಗೆಯಲ್ಲಿ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆ ಸಲ್ಲಿಸಿ, ದೇಶ ಬಿಟ್ಟು ಪಲಾಯನ ಮಾಡಿದ್ದಾರೆ. ಸರ್ಕಾರಿ ಉದ್ಯೋಗಗಳಲ್ಲಿನ ಕೋಟಾ ವ್ಯವಸ್ಥೆ ವಿರುದ್ಧದ ಹೋರಾಟ ಸರ್ಕಾರವನ್ನೇ ಬುಡ ಮೇಲಾಗಿಸಿದೆ. ಸುಪ್ರೀಂಕೋರ್ಟ್ ಮಧ್ಯಪ್ರವೇಶದೊಂದಿಗೆ ತಿಳಿಯಾಗಿದ್ದ ಪ್ರತಿಭಟನೆ, ಭಾನುವಾರ ಮತ್ತೆ ಕಿಚ್ಚು ಪಡೆದುಕೊಂಡಿತ್ತು. ದೇಶವ್ಯಾಪಿ ಕರ್ಫ್ಯೂ, ಇಂಟರ್ನೆಟ್ ಸಂಪರ್ಕ ಕಡಿತ, ಭದ್ರತಾ ಪಡೆಗಳ ಬಲ ಪ್ರಯೋಗ ಮಾಡಲಾಯಿತಾದರೂ ಹಸೀನಾ ರಾಜೀನಾಮೆಗೆ ಪಟ್ಟು ಹಿಡಿದಿದ್ದ ಜನರ ಗುಂಪು ಯಾವ ಬೆದರಿಕೆಗೂ ಜಗ್ಗದೆ ಪ್ರಧಾನಿ ನಿವಾಸಕ್ಕೆ ಲಗ್ಗೆ ಇರಿಸಿ, ಕಚೇರಿಗೆ ಬೆಂಕಿ ಹಚ್ಚಿದೆ. 300ಕ್ಕೂ ಅಧಿಕರು ಬಲಿಯಾಗಿದ್ದಾರೆ. ಹಿಂಸಾಚಾರವನ್ನು ನಿಯಂತ್ರಿಸಲಾಗದೆ ಹಸೀನಾ, ರಾಜೀನಾಮೆ ನೀಡಿದ್ದಾರೆ. ಇದಕ್ಕೆ ಬಾಂಗ್ಲಾ ದೇಶ ಸೇನೆಯ ಒತ್ತಡವೂ ಕಾರಣ. 45 ನಿಮಿಷಗಳಲ್ಲಿ ಅಧಿಕಾರ ತ್ಯಜಿಸುವಂತೆ ಹಸೀನಾ ಅವರಿಗೆ ಬಾಂಗ್ಲಾ ಸೇನೆ ಸೋಮವಾರ ಮಧ್ಯಾಹ್ನ ತಾಕೀತು ಮಾಡಿತ್ತು. ಇದರೊಂದಿಗೆ ಶೇಖ್ ಹಸೀನಾ ಅವರ 15 ವರ್ಷಗಳ ಆಡಳಿತ ಅಂತ್ಯಗೊಂಡಿದೆ.

ದಂಗೆಯೆದ್ದ ಜನರ ಗುಂಪು ಹಸೀನಾ ಅವರ ಅರಮನೆಗೆ ನುಗ್ಗಿ ಸಂಭ್ರಮಾಚರಣೆ ನಡೆಸಿದೆ. ನಾಲ್ಕು ಲಕ್ಷಕ್ಕೂ ಅಧಿಕ ಪ್ರತಿಭಟನಾಕಾರರು ಬೀದಿಗಿಳಿದಿದ್ದಾರೆ. ಶೇಖ್ ಹಸೀನಾ ಅವರ ಕಚೇರಿಗೆ ತೆರಳುವ ಮಾರ್ಗದಲ್ಲಿ ಬ್ಯಾರಿಕೇಡ್‌ಗಳು, ತಂತಿ ಬೇಲಿಗಳನ್ನು ನಿರ್ಮಿಸಿ ಪೊಲೀಸರು ಹಾಗೂ ಸೈನಿಕರು ಶಸ್ತ್ರಸಜ್ಜಿತರಾಗಿ ನಿಂತಿದ್ದರು. ಆದರೆ ಜನಪ್ರವಾಹವನ್ನು ನಿಯಂತ್ರಿಸುವುದು ಅವರಿಂದ ಸಾಧ್ಯವಾಗಲಿಲ್ಲ. ಹಸೀನಾ ಅವರ ರಾಜೀನಾಮೆ ಬಳಿಕ ಮಾತನಾಡಿದ ಬಾಂಗ್ಲಾದೇಶ ಸೇನಾ ಮುಖ್ಯಸ್ಥ ವಾಕೆರ್–ಉಜ್ ಜಮಾನ್, ನಾವು ಮಧ್ಯಂತರ ಸರ್ಕಾರ ರಚಿಸಲಿದ್ದೇವೆ ಎಂದು ತಿಳಿಸಿದ್ದಾರೆ. ದೇಶದಲ್ಲಿ ಸೇನಾ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂದಿರುವ ಅವರು, ಶಾಂತಿ ಕಾಪಾಡುವಂತೆ ಜನರಿಗೆ ಮನವಿ ಮಾಡಿದ್ದಾರೆ. ಬಿಎನ್‌ಪಿ ಅವಾಮಿ ಲೀಗ್ ಮತ್ತು ನಾಗರಿಕ ಸಮಾಜದ ನಡುವಿನ ಚರ್ಚೆ ಬಹಳ ಪರಿಣಾಮಕಾರಿಯಾಗಿದೆ. ನಮಗೆ ಮಧ್ಯಂತರ ಸರ್ಕಾರ ರಚಿಸಿ ಶಾಂತಿಯನ್ನು ಮರಳಿ ಸ್ಥಾಪಿಸಲು ಸಾಧ್ಯವಾಗಲಿದೆ ಎಂದು ಅವರು ಹೇಳಿದ್ದಾರೆ.

ಭಾರತಕ್ಕೆ ಹಸೀನಾ: ಸೇನಾ ಮುಖ್ಯಸ್ಥರ ಪತ್ರದ ಬೆನ್ನಲ್ಲೇ ರಾಜೀನಾಮೆ ನೀಡಿದ ಶೇಖ್ ಹಸೀನಾ (76), ಸಹೋದರಿ ಶೇಖ್ ರೆಹಾನಾ ಜತೆ ಹೆಲಿಕಾಪ್ಟರ್ ಮೂಲಕ ಭಾರತಕ್ಕೆ ಪಲಾಯನ ಮಾಡಿದ್ದಾರೆ ಎನ್ನಲಾಗಿದೆ. ಸದ್ಯಕ್ಕೆ ಅವರು ತ್ರಿಪುರಾದ ಅಗರ್ತಲಾದಲ್ಲಿ ಇದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಅವರ ಹೆಲಿಕಾಪ್ಟರ್ ಬಂಗಾಳ ಮತ್ತು ಜಾರ್ಖಂಡ್ ಮೂಲಕ ದಿಲ್ಲಿ ಕಡೆ ಪ್ರಯಾಣಿಸಿದೆ ಎಂದು ಇನ್ನು ಕೆಲವು ವರದಿಗಳು ಹೇಳಿವೆ. ಹಸೀನಾ ಅವರ ಅವಾಮಿ ಲೀಗ್‌ನ ನಾಯಕರು, ಬೆಂಬಲಿಗರು ಹಾಗೂ ಸಂಸದರು ಕೂಡ ಜೀವ ರಕ್ಷಣೆಗಾಗಿ ಮುಂದಿನ 48 ಗಂಟೆಗಳಲ್ಲಿ ಅಗರ್ತಲಾಕ್ಕೆ ನುಸುಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಸರ್ಕಾರಕ್ಕೆ ರುಪ್ಸಾ ಡೆಡ್‌ಲೈನ್: ಆ.21ರ ನಂತರ ಖಾಸಗಿ ಶಾಲೆ ಬಂದ್ ಎಚ್ಚರಿಕೆ

ಬೆಂಗಳೂರು: ಶಾಲಾ ಶಿಕ್ಷಣ ಇಲಾಖೆಯಲ್ಲಿನ ಭ್ರಷ್ಟಾಚಾರ ಹಾಗೂ ಖಾಸಗಿ ಶಾಲೆಗಳ ಮೇಲಿನ ಅನ್ಯಾಯ ವಿರೋಧಿಸಿ ರುಪ್ಸಾ ಕರ್ನಾಟಕ ಖಾಸಗಿ ಅನುದಾನ ರಹಿತ ಶಾಲೆಗಳ ಒಕ್ಕೂಟದಿಂದ ಶಾಲೆಗಳನ್ನ ಬಂದ್ ಮಾಡಿ ಪ್ರತಿಭಟನೆ ಮಾಡುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗಿದೆ. ಈ ಬಗ್ಗೆ ಇಂದು ರುಪ್ಸಾ (ಖಾಸಗಿ ಶಾಲೆಗಳ ಒಕ್ಕೂಟ) ಕರ್ನಾಟಕ ಅಧ್ಯಕ್ಷ ಲೇಪಾಕ್ಷಿ ಹಾಲನೂರು ಅಧ್ಯಕ್ಷತೆಯಲ್ಲಿ ಪತ್ರಿಕಾಗೋಷ್ಠಿ ಮಾಡಿದ್ದು, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಶಾಲಾ ಶಿಕ್ಷಣ ಇಲಾಖೆಗೆ ಮುಂದಿನ ಹದಿನೈದು ದಿನ ಡೆಡ್‌ಲೈನ್ ನೀಡಲಾಗಿದೆ.

ಆಗಸ್ಟ್ 21 ರವರೆಗೆ ಗಡುವು ಎಂದ ಹಾಲನೂರು ಲೇಪಾಕ್ಷಿ: ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಹಾಲನೂರು ಲೇಪಾಕ್ಷಿ, 15 ದಿನದಲ್ಲಿ ಇಲಾಖೆ ನಡೆಸುತ್ತಿರುವ ಕ್ರಮಗಳಿಂದ ಹಿಂದೆ ಸರಿಯಬೇಕು. ಶಾಲೆಗಳ ನವೀಕರಣಕ್ಕೆ ಇಲಾಖೆಯ 64 ಅಂಶಗಳನ್ನು ನಿಗದಿಪಡಿಸಿ ದಾಖಲೆ ಪಡೆಯುತ್ತಿದೆ. ಇದರಿಂದ ಶಾಲೆಗಳ ನವೀಕರಣ ಪಡೆಯುವುದು ಕಷ್ಟವಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿನ ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳ ತೆರಿಗೆ ಬಾಕಿ ವಸೂಲಿ ಕೈ ಬಿಡಬೇಕು. ಈ ವಿಚಾರಗಳ ಬಗ್ಗೆ ಹದಿನೈದು ದಿನ ಅಂದರೆ ಆಗಸ್ಟ್ 21 ರವರೆಗೆ ಗಡುವು ನೀಡಿದ್ದೇವೆ ಎಂದು ಹೇಳಿದ್ದಾರೆ.

ರುಪ್ಸಾ ಸೇರಿದ್ದಂತೆ ಖಾಸಗಿ ಶಾಲೆಗಳ ಒಕ್ಕೂಟದ ಜೊತೆ ಸರ್ಕಾರ ಸಭೆ ಮಾಡಬೇಕು. ಇಲಾಖೆಯಿಂದ ಆಗುತ್ತಿರುವ ಅಕ್ರಮಗಳಿಗೆ ಕಡಿವಾಣ ಹಾಕಬೇಕು. ಸರ್ಕಾರ ಇದಕ್ಕೆಲ್ಲ ಕಡಿವಾಣ ಹಾಕದೆಯಿದ್ದರೆ ಶಾಲೆ ಬಂದ್ ಮಾಡಿ ಬೆಂಗಳೂರು ಚಲೋ ಮಾಡುತ್ತೇವೆ ಅಂತಾ ಎಚ್ಚರಿಕೆ ನೀಡಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸುಲಿಗೆ ಮಾಡುತ್ತಿದ್ದಾರೆ. ಶಾಲಾ ಶಿಕ್ಷಣ ಇಲಾಖೆ ಶೈಕ್ಷಣಿಕ ಉದ್ದೇಶಕ್ಕೆ ಬಳಸುವ ನಿವೇಶನ ಅಥವಾ ಕಟ್ಟಡಗಳಿಗೆ ಕಾನೂನು ಬಾಹಿರವಾಗಿ ಟ್ಯಾಕ್ಸ್ ವಸೂಲಿ ಮಾಡುತ್ತಿದೆ. ಆರ್‌ಆರ್ ವಿಚಾರದಲ್ಲಿ ಅಧಿಕಾರಿಗಳ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ನಡೆಸುತ್ತಿರುವ ಸುಲಿಗೆ ಸೇರಿದ್ದಂತೆ ಅನೇಕ ವಿಷಯಗಳಿಗೆ ವಿರೋಧ ವ್ಯಕ್ತಪಡಿಸಲಾಗಿದೆ. ಇನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟಗಳು ಈ ಪ್ರತಿಭಟನೆಗೆ ಸಾಥ್ ನೀಡಿವೆ.

ಒಂದನೇ ಪುಟದಿಂದ

ರಾಜ್ಯಪಾಲರ ನಿರ್ಣಯ ನಿಗೂಢ!


ಐವರ ವಿರುದ್ಧ ರಾಜಭವನಕ್ಕೆ ದೂರುಗಳು ಬಂದಿದ್ದವು. ಈ ದೂರುಗಳಿಗೆ ಸಂಬಂಧಿಸಿದಂತೆ ರಾಜಭವನ ಸಂಬಂಧಪಟ್ಟವರಿಗೆ ಪ್ರಾಸಿಕ್ಯೂಷನ್‌ಗೆ ಏಕೆ ನೀಡಬಾರದು ಎಂದು ಕೇಳಿ ನೋಟಿಸ್ ನೀಡಿತ್ತೆ ಎಂದು ಮುಖ್ಯಮಂತ್ರಿ ಅವರು ಪತ್ರ ಬರೆದು ರಾಜ್ಯಪಾಲರನ್ನು ಕೋರಿದ್ದಾರೆ.

ಸರ್ಕಾರ ಬರೆದಿರುವ ಎಲ್ಲಾ ಪತ್ರಗಳ ಬಗ್ಗೆಯೂ ಕೂಲಂಕಷವಾಗಿ ಪರಿಶೀಲನೆ ನಡೆಸುತ್ತಿರುವ ರಾಜಭವನ, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಮಾಹಿತಿ ಮತ್ತು ದಾಖಲೆಗಳನ್ನು ಸಂಬಂಧಪಟ್ಟವರಿಂದ ಪಡೆದುಕೊಂಡಿದೆ.

ಇದರ ಆಧಾರದ ಮೇಲೆ ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದೇ ಅಥವಾ ಬೇಡವೇ, ಇಲ್ಲ ತಮಗಿರುವ ಅಧಿಕಾರ ಬಳಸಿ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಿ ಮೂರು ತಿಂಗಳಲ್ಲಿ ವರದಿ ಪಡೆದುಕೊಳ್ಳುವುದೇ ಎಂಬ ಚಿಂತನೆಯಲ್ಲಿದ್ದಾರೆ. ಅಲ್ಲದೆ, ಪ್ರಕರಣವನ್ನು ಸಿಬಿಐಗೆ ವಹಿಸಲು ರಾಜ್ಯಪಾಲರಿಗೆ ಸಂವಿಧಾನದತ್ತ ಅಧಿಕಾರ ಇದೆಯೇ ಎಂಬ ವಿಚಾರವೂ ಸೇರಿದಂತೆ ಹಲವು ಮಗ್ಗುಲುಗಳಲ್ಲಿ ಚರ್ಚೆ ನಡೆದಿದೆ.

ರಾಜಕಾರಣಿಗಳಿಂದ ಭಾಷೆ, ಸಂಸ್ಕೃತಿ ನಾಶವಾಗುತ್ತಿದೆ

● ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್ ಕಿತ್ತಾಟಕ್ಕೆ ಮಾಜಿ ಸಚಿವ, ಹಾಲಿ ಎಂಎಲ್ಸಿ ವಿಶ್ವನಾಥ್ ವಿಷಾದ ● ಸರ್ಕಾರದ ಫಲಾನುಭವಿಗಳಾದ ಸಾಹಿತಿಗಳು, ಚಿಂತಕರ ಮೌನಕ್ಕೆ ಟೀಕೆ



ಮೈಸೂರು, ಆ.5 (ಎಂಟಿವೈ)– ಬಿಜೆಪಿ–ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ನಾಯಕರ ಕೆಸರೆರಚಾಟ ಹಾಗೂ ಮಾತಿನ ಮಸೆ ಅಸಹ್ಯ ಹುಟ್ಟಿಸುತ್ತಿದೆ. ಈ ಮೂರೂ ಪಕ್ಷದವರು ಮೂರು ಬಿಟ್ಟಂತೆ ವರ್ತಿಸುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಕಿಡಿಕಾರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ–ಜೆಡಿಎಸ್ ಪಾದಯಾತ್ರೆ ಹಾಗೂ ಕಾಂಗ್ರೆಸ್‌ನ ಜನಾಂದೋಲನ ಸಮಾವೇಶದಲ್ಲಿ ಹೆಚ್.ಡಿ. ಕುಮಾರಸ್ವಾಮಿ ಮತ್ತು ಡಿ.ಕೆ. ಶಿವಕುಮಾರ್ ಪರ ಸ್ವರ ಏಕವಚನದಲ್ಲಿ ಕಿತ್ತಾಡುತ್ತಿರುವುದನ್ನು ನೋಡಿದರೆ ಛೀ..ಥೂ.. ಎನ್ನಿಸುತ್ತದೆ. ಬಹಿರಂಗವಾಗಿ ಕಾರ್ಯಕರ್ತರ ಮುಂದೆ ನೀನು ಕಳ್ಳ, ನಿಮ್ಮಪ್ಪ ಕಳ್ಳ ಎಂದು ಮೂರೂ ಪಕ್ಷದವರು ಪರಸ್ಪರ ಕೆಸರೆರಚಾಡುತ್ತಾ, ಜನರ ಮುಂದೆ ಬೆತ್ತಲಾಗುತ್ತಿದ್ದಾರೆ. ಈ ರಾಜಕಾರಣಿಗಳು ಸಜ್ಜನಿಕೆ ಮರೆತವರಂತೆ ವರ್ತಿಸುತ್ತಿದ್ದಾರೆ. ಕೀಳುಮಟ್ಟದ ಪದ ಬಳಕೆ ಮಾಡುತ್ತಾ ಕನ್ನಡ ಪದಗಳನ್ನು ಕೊಲ್ಲುತ್ತಿದ್ದಾರೆ. ಕನ್ನಡ ಭಾಷೆಯ ಮೇಲೆ ಅತ್ಯಾಚಾರವಾಗುತ್ತಿದೆ. ಏಕವಚನದ ರೂವಾರಿ ಸಿದ್ದರಾಮಯ್ಯ ಹೇ.. ಹೇ.. ಎಂದು ಮಾತನಾಡುತ್ತಾ ಇವರೆಲ್ಲರಿಗೂ ಈ ಭಾಷೆಯ ಮಾರ್ಗದರ್ಶನ ನೀಡಿದ್ದಾರೆ ಎಂದು ಕಿಡಿಕಾರಿದರು.

ರಾಜಕಾರಣಿಗಳಿಂದ ಭಾಷೆ, ಸಂಸ್ಕೃತಿ ನಾಶವಾಗುತ್ತಿದೆ. ಮೈಸೂರಿನಂತಹ ಸಾಂಸ್ಕೃತಿಕ ನಗರಿಯಿಂದ ಹೋದವರಲ್ಲೂ ಸಂಸ್ಕೃತಿ ಸಂಸ್ಕಾರ ಇಲ್ಲದೇ ಇರುವುದನ್ನು ನೋಡಲಾಗುತ್ತಿಲ್ಲ. ಸಾಹಿತಿಗಳು, ಚಿಂತಕರು ಸರ್ಕಾರದ ಫಲಾನುಭವಿಗಳಾಗಿರುವುದರಿಂದ ಏನನ್ನೂ ಮಾತನಾಡದೇ ಅವರ ಪಾಡಿಗೆ ಅವರು ಮಲಗಿಬಿಡುತ್ತಾರೆ. ಆದ್ದರಿಂದ ಇದರ ವಿರುದ್ಧ ಕನ್ನಡ ಚಳವಳಿಗಾರರು ಹೋರಾಟ ನಡೆಸುವ ಮೂಲಕ ರಾಜಕಾರಣಿಗಳ ಈ ಭಾಷಾ ಪ್ರಯೋಗ ನಿಲ್ಲುವಂತೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಮಕ್ಕಳ ಭವಿಷ್ಯಕ್ಕಾಗಿ ರಾಜಕಾರಣ: ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ರಾಜ್ಯದ ಹಿತಾಸಕ್ತಿ ಮರೆತು ತಮ್ಮ ಮಕ್ಕಳ ರಾಜಕೀಯ ಭವಿಷ್ಯಕ್ಕಾಗಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಅವರು, ಸಿದ್ದರಾಮಯ್ಯ ಅವರಿಗೆ ಮಗ ಡಾ. ಯತೀಂದ್ರರನ್ನು ಬೆಳೆಸುವ ಚಿಂತೆ. ಯಡಿಯೂರಪ್ಪ ಅವರಿಗೆ ಮಕ್ಕಳಾದ ಶಾಸಕ ಬಿ.ವೈ. ವಿಜಯೇಂದ್ರ, ಸಂಸದ ಬಿ.ವೈ. ರಾಘವೇಂದ್ರ ಬೆಳವಣಿಗೆಯೇ ಗುರಿಯಾದರೆ, ಹೆಚ್.ಡಿ.ಕುಮಾರಸ್ವಾಮಿಗೆ ತಮ್ಮ ಪುತ್ರ ನಿಖಿಲ್‌ನನ್ನು ರಾಜಕೀಯವಾಗಿ ಮುಂದೆ ತರಬೇಕು ಎಂಬ ಛಲ. ಹೀಗಾಗಿ ಇವರೆಲ್ಲರಿಗೂ ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವುದಕ್ಕಿಂತ ಕೌಟುಂಬಿಕ ಹಿತಾಸಕ್ತಿಯೇ ಮುಖ್ಯವಾಗಿದೆ ಎಂದರು.

ಯಾವ ಪುರುಷಾರ್ಥಕ್ಕಾಗಿ...: ಬಿಜೆಪಿ ಮತ್ತು ಜೆಡಿಎಸ್‌ನವರು ಬೆಂಗಳೂರಿನಿಂದ ಮೈಸೂರಿಗೆ ನಡೆಸುತ್ತಿರುವ ಪಾದಯಾತ್ರೆ, ಇದಕ್ಕೆ ಪರ್ಯಾಯವಾಗಿ ಕಾಂಗ್ರೆಸ್‌ನವರ ಜನಾಂದೋಲನ ಸಭೆ ಯಾವ ಪುರುಷಾರ್ಥಕ್ಕಾಗಿ ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಕಾಡುತ್ತಿದೆ. ಹಗರಣಗಳ ಆರೋಪ –ಪ್ರತ್ಯಾರೋಪ ಮಾಡಿಕೊಂಡು ಪ್ರತಿಭಟಿಸುತ್ತಿರುವ ಈ ರಾಜಕೀಯ ನಾಯಕರ ಹೋರಾಟದ ಹಿಂದೆ ಸಾರ್ವಜನಿಕರ ಹಿತಾಸಕ್ತಿ ಇಲ್ಲವೇ ಇಲ್ಲ. ಎಲ್ಲವೂ ತಮ್ಮ ತಮ್ಮ ಕುಟುಂಬಕ್ಕಾಗಿ ಎಂದು ವಿಶ್ವನಾಥ್ ಹರಿಹಾಯ್ದರು.

ಪಂಚೆಗೆ ಅಂಟಿರುವ ಮಸಿ ಮುಖಕ್ಕೆ ತಾಗುವ ಮುನ್ನ ನಿವೇಶನ ಹಿಂದಕ್ಕೆ ಕೊಟ್ಟು ಬಿಡಿ!

● ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಸಲಹೆ ● ಇರುವ ಒಬ್ಬ ಮಗನಿಗೆ ಇನ್ನೆಷ್ಟು ಬೇಕು ಹೇಳಿ... ● ಮುಡಾದಲ್ಲಿ ಎಲ್ಲಾ ಶಾಸಕರು ಕೈಚಾಚಿ ಕುಳಿತರೆ; ನಾನು, ಶ್ರೀವತ್ಸ ಕಾಲುಚಾಚಿ ಕುಳಿತಿದ್ದೇವೆ



ಮೈಸೂರು, ಆ.5– ಮುಡಾದಿಂದ ತಮ್ಮ ಪತ್ನಿ ಹೆಸರಿನಲ್ಲಿ ಪಡೆದಿರುವ 14 ನಿವೇಶನಗಳನ್ನು ಹಿಂತಿರುಗಿಸಿ, ಮುಡಾ ನಿವೇಶನ ಹಂಚಿಕೆ ಹಗರಣವನ್ನು ಸಿಬಿಐ ತನಿಖೆಗೆ ವಹಿಸಿ ಕಳಂಕದಿಂದ ಹೊರಬರುವ ಮೂಲಕ ಘನತೆ ಹೆಚ್ಚಿಸಿಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ವಿಧಾನ ಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಚೆಗೆ ಮಸಿ ಅಂಟಿಕೊಂಡಿದೆ. ಅದು ಮುಖಕ್ಕೆ ತಾಗುವ ಮುನ್ನ ನಿವೇಶನಗಳನ್ನು ಹಿಂತಿರುಗಿಸಿ, ಪ್ರಕರಣವನ್ನು ಸಿಬಿಐ ತನಿಖೆಗೆ ಕೊಟ್ಟುಬಿಡಲಿ. ಹಗರಣದಲ್ಲಿ ಭಾಗಿಯಾದವರೆಲ್ಲಾ ಸಿಕ್ಕಿಹಾಕಿಕೊಂಡು ಸಾಯಲಿ ಎಂದ ಅವರು, ಸಿದ್ದರಾಮಯ್ಯ, ನೀವು ಸಮಾಜವಾದಿ ಎಂದು ಹೇಳಿಕೊಳ್ಳುತ್ತೀರಿ. 14 ನಿವೇಶನ ಇಟ್ಟುಕೊಂಡು ನೀವೇನು ಮಾಡಬೇಕು. ಅದನ್ನು ಮುಡಾಕ್ಕೆ ವಾಪಸ್ಸು ಕೊಟ್ಟುಬಿಡಿ. ಪ್ರತಿಷ್ಠೆ ಬಿಟ್ಟು ನಿವೇಶನ ವಾಪಸ್ ಕೊಟ್ಟು ದೊಡ್ಡತನ ಮೆರೆಯಿರಿ. ಇರುವ ಒಬ್ಬ ಮಗನಿಗೆ ಇನ್ನೆಷ್ಟು ಬೇಕು ಎಂದು ಪ್ರಶ್ನಿಸಿದರು. ಈ ವಿಚಾರವಾಗಿ ಕಾನೂನು ತಮ್ಮ ಕಡೆ ಇದೆ ಎಂದು ಹೇಳುತ್ತಿದ್ದೀರಿ. ಆದರೆ ನಾನು ಹೇಳುತ್ತಿರುವುದು ಪುಸ್ತಕದ ಕಾನೂನಲ್ಲ. ಸಾರ್ವಜನಿಕ ನ್ಯಾಯಸ್ಥಾನದ ಕಾನೂನನ್ನು ಹೇಳುತ್ತಿದ್ದೇನೆ.

ಮುಖ್ಯಮಂತ್ರಿಯಾಗಿ 14 ನಿವೇಶನ ಮುಡಾದಿಂದ ಬರೆಸಿಕೊಂಡಿದ್ದಾರೆ ಎಂದು ಜನರು ಮಾತನಾಡುವುದನ್ನು ಯಾವ ರೀತಿ ನಿವಾರಣೆ ಮಾಡಿಕೊಳ್ಳುತ್ತೀರಿ ಎಂದ ವಿಶ್ವನಾಥ್, ನಾನು ಮೊದಲೇ ಹೇಳಿದಂತೆ ನಿಮ್ಮ 3.16 ಎಕರೆ ಜಮೀನಿನಲ್ಲಿ ಶಾಲೆ ತೆರೆಯಿರಿ. ಬೇರೆ ಬೇರೆ ಕಲ್ಯಾಣ ಯೋಜನೆಗಳ ಕೇಂದ್ರಗಳನ್ನು ಸ್ಥಾಪನೆ ಮಾಡಿ. ಯಾಕೆಂದರೆ ಅಲ್ಲಿ ಅಹಿಂದ ಜನರೇ ಹೆಚ್ಚಾಗಿ ವಾಸ ಮಾಡುತ್ತಿದ್ದಾರೆ. ಈಗಲೂ ಕಾಲ ಮಿಂಚಿಲ್ಲ. ನಿವೇಶನ ವಾಪಸ್ಸು ಕೊಟ್ಟುಬಿಡಿ ಎಂದರು.

ಎಲ್ಲಾ ಕಿತ್ತಾಕಿದ್ದಾರೆ: ನಿವೇಶನ ಹಗರಣ ತನಿಖೆ ಮಾಡಬೇಕೆಂದು ಅಲ್ಲಿನ ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ. ಆದರೆ, ಮತ್ತೆ ಅವರೇ ವಾಪಸ್ಸು ಬಂದಿದ್ದಾರೆ ಮುಡಾದಲ್ಲಿರುವ ಸಿಸಿ ಕ್ಯಾಮರಾಗಳನ್ನು ಕಿತ್ತು ಬಿಸಾಡಿದ್ದಾರೆ. ಹೊಸದಾಗಿ ಬಂದಿರುವ ಆಯುಕ್ತರು ಇದನ್ನೆಲ್ಲಾ ಸುಮ್ಮನೆ ನೋಡುತ್ತಾ ಕುಳಿತಿದ್ದಾರೆ. ವರ್ಗಾವಣೆಯಾಗಿ ಮತ್ತೆ ಮುಡಾಗೆ ಬಂದಿರುವವರು ನಗರಾಭಿವೃದ್ಧಿ ಸಚಿವರ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿರುವವರನ್ನು ಹೊರಗೆ ಕಳುಹಿಸದೆ ಯಾವುದೇ ತನಿಖೆ ನ್ಯಾಯಯುತವಾಗಿ ನಡೆಯುವುದಿಲ್ಲ ಎಂದರು.

ಯಾರೂ ಸತ್ಯವಂತರಲ್ಲ: ಮುಡಾ ವಿಚಾರದಲ್ಲಿ ಯಾರೂ ಸತ್ಯವಂತರಲ್ಲ. ಹೆಚ್.ಡಿ.ಕುಮಾರಸ್ವಾಮಿ, ಯಡಿಯೂರಪ್ಪ ಸತ್ಯವಂತರೇ? ಎಂದು ಪ್ರಶ್ನಿಸಿದ ವಿಶ್ವನಾಥ್ ಎಲ್ಲಾ ಶಾಸಕರು ಮುಡಾದಲ್ಲಿ ಕೈಚಾಚಿ ಕುಳಿತಿದ್ದಾರೆ. ನಾನು ಮತ್ತೆ ಶ್ರೀವತ್ಸ ಮಾತ್ರ ಕಾಲುಚಾಚಿ ಕುಳಿತಿದ್ದೇವೆ ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಮಂಜೂರಾದ

14 ನಿವೇಶನ ವಾಪಸು ಪಡೆಯಿರಿ

ಮುಡಾ ಆಯುಕ್ತ ರಘುನಂದನ್‌ಗೆ ಮನವಿ ಮಾಡಿದ ಅಬ್ರಹಾಂ



ಟಿ.ಜೆ.ಅಬ್ರಹಾಂ

ಮೈಸೂರು, ಆ.5(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್‌ಗೆ ದೂರು ನೀಡಿರುವ ಸಾಮಾಜಿಕ ಹೋರಾಟಗಾರ ಟಿ.ಜೆ.ಅಬ್ರಹಾಂ ಇಂದು ಮುಡಾ ಆಯುಕ್ತ ರಘುನಂದನ್ ಭೇಟಿ ಮಾಡಿ, ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ನೀಡಿರುವ 14 ನಿವೇಶನ ವಾಪಸು ಪಡೆಯುವಂತೆ ಲಿಖಿತ ಮನವಿ ಸಲ್ಲಿಸಿದರು.

ಸಿದ್ದರಾಮಯ್ಯ ವಿರುದ್ಧ ದೂರು ನೀಡಿದ ನಂತರ ಇದೇ ಮೊದಲ ಬಾರಿಗೆ ಮುಡಾಗೆ ಆಗಮಿಸಿದ ಅಬ್ರಹಾಂ, ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದಂತೆ ಮುಂದಿನ ಕಾನೂನು ಹೋರಾಟಕ್ಕಿಳಿದಿರುವುದು ಈ ಪ್ರಕರಣ ಮತ್ತೊಂದು ತಿರುವು ಪಡೆಯುವಂತಿದೆ. ಮುಡಾ ಆಯುಕ್ತ ರಘುನಂದನ್ ಭೇಟಿ ಮಾಡಿದ ಅಬ್ರಹಾಂ, ಸುಮಾರು ಅರ್ಧ ಗಂಟೆಗಳ ಕಾಲ ಮಾತುಕತೆ ನಡೆಸಿದರು. ಈ ವೇಳೆ ಕಾನೂನಿನ ಯಾವ ಆಧಾರದ ಮೇಲೆ ಪಾರ್ವತಿ ಅವರಿಂದ ನಿವೇಶನ ವಾಪಸು ಪಡೆಯಬೇಕು ಎಂಬ ಬಗ್ಗೆ ವಿವರಿಸಿ, ಆಯುಕ್ತರಿಗೆ ಮನದಟ್ಟು ಮಾಡುವ ಪ್ರಯತ್ನ ಮಾಡಿದರು.

ಮುಡಾ ಆಯುಕ್ತ ರಘುನಂದನ್ ಭೇಟಿ ಮಾಡಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅಬ್ರಹಾಂ, ಕೆಸರೆ ಬಡಾವಣೆಯ ಸರ್ವೆ ನಂಬರ್ 464 ರಲ್ಲಿರುವ 3.16 ಎಕರೆ ಜಮೀನು 1998 ರಿಂದ 2004 ರವರೆಗೆ ಮುಡಾ ಸ್ವಾಧೀನದಲ್ಲಿದೆ. ಇದು ದಾಖಲಾತಿಯಲ್ಲಿ ನಮೂದಾಗಿದೆ. ಇದರಿಂದ 2004 ರವರೆಗೆ ಈ ಜಮೀನು ಯಾರ ಹಕ್ಕಿಗೂ ಒಳಪಟ್ಟಿಲ್ಲ. ಜೊತೆಗೆ ಇದು ಕೃಷಿ ಭೂಮಿ ಕೂಡ ಆಗಿರಲಿಲ್ಲ. ಹೀಗಿರುವಾಗ ಪಾರ್ವತಿ ಅವರು ಯಾವ ಆಧಾರದ ಮೇಲೆ ವಿಜಯನಗರದಲ್ಲಿ ಬದಲಿ ನಿವೇಶನ ಪಡೆದರು ಎಂದು ಪ್ರಶ್ನಿಸಿದರು.

ಇಷ್ಟೆ ಅಲ್ಲದೆ 2004ರಲ್ಲಿ ಆ ಜಮೀನಿನಲ್ಲಿ ಸರ್ವೆ ನಂಬರ್ ಕೂಡ ಇರಲಿಲ್ಲ. ಕೆಸರೆ ಬದಲಾಗಿ ಅದು ದೇವನೂರು ಬಡಾವಣೆಯಾಗಿ ಮಾರ್ಪಾಡಾಗಿತ್ತು. ಅದರಲ್ಲೂ ಅಭಿವೃದ್ಧಿಯಾಗಿರುವ ಬಡಾವಣೆಯಾಗಿತ್ತು. ಹೀಗಿರುವಾಗ ಇಲ್ಲದಿರುವ ಜಮೀನಿಗೆ ಅದು ಹೇಗೆ ಬದಲಿ ನಿವೇಶನ ಪಡೆದರು ಎಂದು ಪ್ರಶ್ನಿಸಿದರು. ಇಷ್ಟೆಲ್ಲಾ ಆದರೂ 2004 ರಲ್ಲಿ ಸಿದ್ದರಾಮಯ್ಯ ಭಾವಮೈದನನಿಗೆ ಕ್ರಯಪತ್ರ ಆಗುತ್ತದೆ, 2005 ರಲ್ಲಿ ಭೂ ಪರಿವರ್ತನೆ ಆಗುತ್ತದೆ. ತರುವಾಯ ಪಾರ್ವತಿ ಹೆಸರಿಗೆ ದಾನಪತ್ರವಾಗುತ್ತದೆ. ಕೃಷಿ ಭೂಮಿಯೇ ಇಲ್ಲದಿದ್ದರೂ ಇದೆಲ್ಲಾ ಹೇಗೆ ಆಗುತ್ತದೆ ಎಂದು ಅಬ್ರಹಾಂ ಪ್ರಶ್ನಿಸಿದರು.

ತಮ್ಮ ತಾಯಿಗೆ ಮುಡಾದಲ್ಲಿ ಪರಿಹಾರದ ಹೆಸರಿನಲ್ಲಿ ಭೂಮಿ ಸಿಗುವಾಗ ನಡೆದ ಹಲವು ಪ್ರಮುಖ ಸಭೆಗಳಲ್ಲಿ ಯತೀಂದ್ರ ಭಾಗವಹಿಸಿದ್ದರು ಎಂದು ಆರೋಪಿಸಿದರು. ಒಟ್ಟಾರೆ ನಾನು ಮನವಿ ಮಾಡಿರುವಂತೆ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುತ್ತಾರೆಂಬ ಭರವಸೆ ಇದೆ ಎಂದು ಅಬ್ರಹಾಂ ವಿಶ್ವಾಸ ವ್ಯಕ್ತಪಡಿಸಿದರು.

ಅಂದು ನಾನು ಸತ್ಯವಂತ, ಈಗ ಬ್ಲ್ಯಾಕ್‌ಮೇಲರ್ ಆದೆನಾ...

ಬಿ.ಎಸ್.ಯಡಿಯೂರಪ್ಪ ಹಾಗೂ ಜಗದೀಶ್ ಶೆಟ್ಟರ್ ವಿರುದ್ಧ ದೂರು ನೀಡಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ನಡೆ ಸರಿ ಎಂದು ಹೇಳಿದ್ದರು. ಅಬ್ರಹಾಂ ದೂರು ನೀಡಿದ್ದಾರೆಂದರೆ ಅದು ಸತ್ಯ ಎನ್ನುತ್ತಿದ್ದರು. ಅಂದು ಸತ್ಯ ಹೇಳುತ್ತಿದ್ದ ನಾನು ಇಂದು ಬ್ಲ್ಯಾಕ್‌ಮೇಲರ್ ಆಗಿ ಬಿಟ್ಟೆನಾ. ಇಂತಹ ಆರೋಪ ಮಾಡುತ್ತಿರುವ ಸಿದ್ದರಾಮಯ್ಯ ತಪ್ಪು ಒಪ್ಪಿಕೊಂಡಂತೆ ಆಗಿದೆ ಎಂದು ಹೇಳಿದರು. ಪಾರ್ವತಿ ಅವರಿಗೆ 15 ಸಾವಿರ ಚದರಡಿಯ 14 ನಿವೇಶನ ದೊರೆತಿದೆ. ಇದರ ಬೆಲೆ ಸುಮಾರು 58, 80 ಕೋಟಿ. ಆದರೆ ಇದರ ಬೆಲೆ 62 ಕೋಟಿ ಎಂದು ಸಿದ್ದರಾಮಯ್ಯ ಅವರೇ ಹೇಳುತ್ತಿದ್ದಾರೆ. ತಮ್ಮ ಹಕ್ಕಿಗೆ ಒಳಪಡದ ಕೋಟ್ಯಾಂತರ ರೂಪಾಯಿ ಮೌಲ್ಯದ ಸರ್ಕಾರದ ಭೂಮಿಯನ್ನು ಇವರು ಹೇಗೆ ಪಡೆಯುತ್ತಾರೆ ಎಂದು ಅಬ್ರಹಾಂ ಪ್ರಶ್ನಿಸಿದರು.

ಈ ಹಿನ್ನೆಲೆಯಲ್ಲಿ ನಿವೇಶನ ವಾಪಸು ಪಡೆಯುವಂತೆ ಮುಡಾ ಆಯುಕ್ತರಿಗೆ ಪತ್ರ ನೀಡಿದ್ದೇನೆ. ಮುಂದೆ ಯಾವ ಕ್ರಮ ಕೈಗೊಳ್ಳುತ್ತಾರೆ ಎಂಬುವುದನ್ನು ನೋಡೋಣ. ನಾನಂತೂ ಕಾನೂನು ರೀತಿಯ ಹೋರಾಟ ಮಾಡುತ್ತೇನೆ ಎಂದು ತಿಳಿಸಿದರು. ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯಗೆ ಬೆಂಬಲವಾಗಿ ನಿಂತಿದೆ. ನಾನು ದೆಹಲಿಗೆ ಬರುತ್ತೇನೆ. ನಾನು ಕೇಳುವ ಪ್ರಶ್ನೆಗಳಿಗೆ ರಾಹುಲ್ ಗಾಂಧಿಯಿಂದ ಪ್ರತಿಕ್ರಿಯೆ ಕೊಡಿಸುತ್ತೀರಾ ಎಂದು ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಅಬ್ರಹ್ರಾಂ ಪ್ರಶ್ನಿಸಿದರು.

ಸಿದ್ದರಾಮಯ್ಯ ಸಹಿ ಹಾಕದಿದ್ದರೂ ಪ್ರಭಾವ ಬೀರಿರುವುದು ಸ್ಪಷ್ಟ

ಮುಡಾದಲ್ಲಿ ಪಾರ್ವತಿ ಅವರು ನಿವೇಶನ ಪಡೆದಿರುವ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ದಾಖಲಾತಿಗೆ ಸಹಿ ಹಾಕದಿದ್ದರೂ ಪ್ರಭಾವ ಬೀರಿರುವ ಕಾರಣ ಇದು ಭ್ರಷ್ಟಾಚಾರ ತಡೆ ಕಾಯ್ದೆಗೆ ಒಳಪಡುತ್ತದೆ ಎಂದು ಸಾಮಾಜಿಕ ಹೋರಾಟಗಾರ ಟಿ.ಜೆ.ಅಬ್ರಹಾಂ ಸ್ಪಷ್ಟಪಡಿಸಿದರು. ಅಂದು ಮುಖ್ಯಮಂತ್ರಿ ಆಗಿದ್ದ ಬಿ.ಎಸ್.ಯಡಿಯೂರಪ್ಪ ಪ್ರಕರಣದಲ್ಲೂ ಇದೇ ಅಂಶವನ್ನು ನಾನು ಉಲ್ಲೇಖಿಸಿದ್ದೆ ಎಂದು ತಿಳಿಸಿದರು. ದಾನದಿಂದ ಬಂದಿರುವ ಈ ಆಸ್ತಿ ತನ್ನ ಹಕ್ಕಿಗೆ ಒಳಪಟ್ಟಿದೆ ಎಂದು ವಾದಿಸುತ್ತಿರುವ ಪಾರ್ವತಿ ಅವರ ಜಮೀನು ಡಿನೋಟಿಫಿಕೇಷನ್ ಆಗುವ ಸಂದರ್ಭದಲ್ಲಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಆಗಿದ್ದರು. ನನಗೆ ಸಂಬಂಧ ಇಲ್ಲ ಎಂದು ಹೇಳುತ್ತಿರುವ ಡಿ ನೋಟಿಫಿಕೇಷನ್ ಆಗಿರುವ ಆಸ್ತಿ ನಿಮ್ಮ ಮನೆಗೆ ಬಂದು ಸೇರಿತ್ತಲ್ಲವೆ ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು. ಇದೆಲ್ಲಾ ಸಿದ್ದರಾಮಯ್ಯ ಅವರ ಪ್ರಭಾವದಿಂದ ಆಗಿದೆ. ಇದರಿಂದ ಇದು ಭ್ರಷ್ಟಾಚಾರ ತಡೆ ಕಾಯ್ದೆ ವ್ಯಾಪ್ತಿಗೆ ಬರುತ್ತದೆ ಎಂದು ಅಬ್ರಹಾಂ ತಿಳಿಸಿದರು.

ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿದರೆ ರಾಜ್ಯಪಾಲರ ವಿರುದ್ಧ ಕಾನೂನು ಸಮರಕ್ಕೆ ಕಾಂಗ್ರೆಸ್ ಸಜ್ಜು



ಬೆಂಗಳೂರು, ಆ.5(ಕೆಎಂಶಿ)– ಮುಡಾ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದ ಪ್ರಕರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ನೀಡಿದರೆ ಕಾನೂನು ಹೋರಾಟದ ಜೊತೆಗೆ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆಯೂ ರಾಷ್ಟ್ರಪತಿಗಳಿಗೆ ಮನವಿ ಮಾಡಲು ಕಾಂಗ್ರೆಸ್ ನಿರ್ಧರಿಸಿದೆ.

ಪ್ರಕರಣ ತೀವ್ರತೆ ಪಡೆಯುತ್ತಿದ್ದಂತೆ ನಗರಕ್ಕೆ ಧಾವಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಜೊತೆ ಪ್ರತ್ಯೇಕವಾಗಿ ಚರ್ಚೆ ನಡೆಸಿ ಈ ತೀರ್ಮಾನಕ್ಕೆ ಬಂದಿದ್ದಾರೆ. ರಾಜ್ಯಪಾಲರ ನಡೆಯ ಬಗ್ಗೆ ತಾವು ಹಿರಿಯ ವಕೀಲರಾದ ಪಿ.ಚಿದಂಬರಂ ಹಾಗೂ ಅಭಿಷೇಕ್ ಮನುಸಿಂಘ್ವಿ ಸೇರಿದಂತೆ ಪ್ರಮುಖ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿದ್ದು, ಅವರ ಮಾರ್ಗದರ್ಶನದಂತೆ ಹೋರಾಟ ನಡೆಸೋಣ ಎಂದು ಮುಖ್ಯಮಂತ್ರಿ ಅವರಿಗೆ ವೇಣುಗೋಪಾಲ್ ತಿಳಿಸಿದ್ದಾರೆ.

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಕೊಡುವ ಸಾಧ್ಯತೆ ದಟ್ಟವಾಗಿದೆ. ನಾವೆಲ್ಲರೂ ಮಾನಸಿಕವಾಗಿ ಸಿದ್ಧರಾಗೋಣ, ಪ್ರಾಸಿಕ್ಯೂಷನ್‌ಗೆ ಕೊಟ್ಟಲ್ಲಿ ಕಾನೂನು ಹೋರಾಟ ನಡೆಸೋಣ. ಟಿ.ಜೆ.ಅಬ್ರಹಾಂ ನ್ಯಾಯಾಲಯಕ್ಕೆ ಹೋದರೆ ನಾವೂ ಹೋಗೋಣ, ನ್ಯಾಯಾಲಯದಿಂದ ನೋಟಿಸ್ ಬಂದಲ್ಲಿ ಆಕ್ಷೇಪಣೆ ಸಲ್ಲಿಸೋಣ, ಇದಕ್ಕಾಗಿ ಸಮರ್ಥ ವಕೀಲರನ್ನು ನೇಮಿಸೋಣ.

ಮುಖ್ಯಮಂತ್ರಿ ವಿರುದ್ಧ ಯಾವುದೇ ತನಿಖೆ ನಡೆಯದಿರುವಾಗ ತಪ್ಪು ಮಾಡಿರೋದೆಲ್ಲಿ ಎಂದು ಪ್ರಶ್ನಿಸೋಣ, ಇದು ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳ ವಿಚಾರ ಆಗಿರದೆ, ಮುಖ್ಯಮಂತ್ರಿ ವರ್ಸಸ್ ಸರ್ಕಾರ ಎನ್ನುವಂತೆ ನೋಡಿಕೊಳ್ಳೋಣ.

ಕೆಳ ಹಂತದ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ತೀರ್ಪು ಬರದಿದ್ದರೆ ಸುಪ್ರೀಂಕೋರ್ಟ್‌ಗೂ ಹೋಗೋಣ, ರಾಜ್ಯಪಾಲರನ್ನ ವಾಪಸ್ ಕರೆಸಿಕೊಳ್ಳಿ ಎಂಬ ಮನವಿಯನ್ನೂ ರಾಷ್ಟ್ರಪತಿ ಅವರಿಗೆ ಮಾಡೋಣ.

ತಮಿಳುನಾಡು, ಪಶ್ಚಿಮಬಂಗಾಳ, ಕೇರಳ, ದೆಹಲಿ ರಾಜ್ಯಗಳಂತೆ ರಾಜ್ಯಪಾಲರ ವಿರುದ್ಧ ನಾವೂ ಹೋರಾಡೋಣ, ರಾಜ್ಯಪಾಲರ ನಿರ್ಧಾರ ಕಾನೂನಾತ್ಮಕವೇ ಎಂಬುದಾಗಿ ನಾವು ಪ್ರಶ್ನಿಸೋಣ. ಆ ಮೂಲಕ ರಾಜ್ಯಪಾಲರ ನಡೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯೋಣ, ಜೊತೆಗೆ ಜನತಾ ನ್ಯಾಯಾಲಯದ ಮುಂದೆಯೂ ತೆಗೆದುಕೊಂಡು ಹೋಗಿ ಹೋರಾಟ ಮಾಡೋಣ.

ತಪ್ಪದೆ ಕಾನೂನು ಹೋರಾಟ ಮುಂದುವರೆಸೋಣ, ಮುಖ್ಯಮಂತ್ರಿ ಹಾಗೂ ಸರ್ಕಾರದ ಪ್ರತಿಷ್ಠೆಗೆ ಧಕ್ಕೆ ತರುವ ಷಡ್ಯಂತ್ರಕ್ಕೆ ತೆರೆ ಎಳೆಯೋಣ, ಇದರ ಜೊತೆಯಲ್ಲೇ ಬಿಜೆಪಿ, ಜೆಡಿಎಸ್ ಕುತಂತ್ರದ ವಿರುದ್ಧವೂ ಹೋರಾಟ ನಡೆಸಲು ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಎಂತಹ ಪರಿಸ್ಥಿತಿಯಲ್ಲೂ ಸಿದ್ದರಾಮಯ್ಯ ಬೆಂಬಲಕ್ಕೆ ಎಲ್ಲಾ ಸಚಿವರು, ನಾಯಕರು ನಿಲ್ಲಬೇಕು. ಜೊತೆಗೆ ರಾಜಕೀಯ ಹಾಗೂ ಕಾನೂನಾತ್ಮಕ ಹೋರಾಟಕ್ಕೂ ಮುಂದಾಗಲು ನಾಯಕರು ತೀರ್ಮಾನಿಸಿದ್ದಾರೆ.

ವಾಲ್ಮೀಕಿ ನಿಗಮದ ಹಗರಣ: ಮಾಜಿ ಸಚಿವ ಬಿ.ನಾಗೇಂದ್ರ, ಶಾಸಕ ಬಸನಗೌಡ ದದ್ದಲ್ ಕೈಬಿಟ್ಟು ಪ್ರಾಥಮಿಕ ಚಾರ್ಜ್‌ಶೀಟ್ ಸಲ್ಲಿಸಿದ ಎಸ್‌ಐಟಿ

ಬೆಂಗಳೂರು, ಆ. 5(ಕೆಎಂಶಿ)– ಮಹರ್ಷಿ ವಾಲ್ಮೀಕಿ ನಿಗಮದ ಕೋಟ್ಯಂತರ ರೂ. ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ, ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರನ್ನು ಹೊರಗಿಟ್ಟು 12 ಮಂದಿ ವಿರುದ್ಧ ಎಸ್‌ಐಟಿ ಪ್ರಾಥಮಿಕ ಚಾರ್ಜ್‌ಶೀಟ್ ಸಲ್ಲಿಸಿದೆ.

ನಿಗಮದ ಇಬ್ಬರು ಅಧಿಕಾರಿಗಳೂ ಸೇರಿದಂತೆ 12 ಮಂದಿ ವಿರುದ್ಧ 187 ಕೋಟಿ ರೂ. ಅಕ್ರಮ ವರ್ಗಾವಣೆ ನಡೆಸಿದ ಆರೋಪ ಹೊರಿಸಿದೆ.

ಅಧಿಕಾರಿಗಳ ಮೂಲಕ ಆಂಧ್ರಪ್ರದೇಶದ 10 ಮಂದಿ ಮಧ್ಯವರ್ತಿಗಳಿಗೆ ಈ ಹಣ ವರ್ಗಾವಣೆಗೊಂಡು ಭಾರಿ ಅವ್ಯವಹಾರಕ್ಕೆ ಕಾರಣವಾಗಿದೆ ಎಂದಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕಲ್ಯಾಣ ಖಾತೆ ಸಚಿವರಾಗಿದ್ದ ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷರಾಗಿದ್ದ ದದ್ದಲ್ ಅವರನ್ನು ಸಂಪೂರ್ಣವಾಗಿ ಆರೋಪಪಟ್ಟಿಯಿಂದ ಹೊರಗಿಡಲಾಗಿದೆ.



ಬಿ.ನಾಗೇಂದ್ರ



ದದ್ದಲ್

ಪ್ರಕರಣ ಬಯಲಾಗುತ್ತಿದ್ದಂತೆ ಸರ್ಕಾರ ತನಿಖೆಗೆ ಎಸ್‌ಐಟಿ ರಚನೆ ಮಾಡಿದ್ದಲ್ಲದೆ, ಇಲಾಖೆ ಹೊಣೆ ಹೊತ್ತಿದ್ದ ಸಚಿವ ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷ ದದ್ದಲ್ ಅವರ ರಾಜೀನಾಮೆ ಪಡೆಯಲಾಗಿತ್ತು. ಇದಾದ ನಂತರ ಎಸ್‌ಐಟಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸುವ ವೇಳೆ ಕಾಂಗ್ರೆಸ್‌ನ ಈ ಇಬ್ಬರನ್ನು ವಿಚಾರಣೆಗೆ ಒಳಪಡಿಸಿ ಬಿಡುಗಡೆ ಗೊಳಿಸಿತ್ತು. ಇದರ ಮಧ್ಯೆ ಭಾರಿ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.) ತನಿಖೆ ಆರಂಭಿಸಿ, ಪ್ರಕರಣದ ಆರೋಪಿಗಳ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿತ್ತು.

ಇ.ಡಿ.ಗೆ ದೊರೆತ ಪ್ರಥಮ ಮಾಹಿತಿ ಆಧಾರದ ಮೇಲೆ ನಾಗೇಂದ್ರ ಅವರನ್ನು ವಶಕ್ಕೆ ಪಡೆದು ನಂತರ ನ್ಯಾಯಾಂಗ ಬಂಧನದಲ್ಲಿರಿಸಿದೆ. ಕೋಟ್ಯಂತರ ರೂ. ಅವ್ಯವಹಾರಕ್ಕೆ ಸಂಬಂಧಿಸಿದಂತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೀಡಿದ ದೂರಿನ ಹಿನ್ನೆಲೆಯಲ್ಲಿ ಸಿಬಿಐ ಪ್ರತ್ಯೇಕವಾಗಿ ತನಿಖೆ ನಡೆಸುತ್ತಿದೆ.

ಕೇಂದ್ರ ಸ್ವಾಮ್ಯದ ಉನ್ನತ ಸಂಸ್ಥೆಗಳು ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಮಧ್ಯೆಯೇ ಎಸ್‌ಐಟಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ಜೆ.ಜಿ. ಪದ್ಮನಾಭ್, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಲೆಕ್ಕಾಧೀಕ್ಷಕ ಪರಶುರಾಮ ದುರ್ಗಣ್ಣನವರ್, ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ನಿಯಮಿತದ ಅಧ್ಯಕ್ಷ ಸತ್ಯನಾರಾಯಣ ಇಟಕಾರಿ, ಮಾಜಿ ಸಚಿವ ನಾಗೇಂದ್ರ ಪರಿಚಯಸ್ಥ ನೆಕ್ಕುಂಟೆ ನಾಗರಾಜ್, ನೆಕ್ಕುಂಟೆ ನಾಗರಾಜ್ ಅವರ ಭಾವಮೈದನ ನಾಗೇಶ್ವರರಾವ್, ಹೈದರಾಬಾದ್‌ನ ಎಂ.ಚಂದ್ರ ಮೋಹನ್, ಹೈದರಾಬಾದ್‌ನ ಗಾದಿ ರಾಜು ಸತ್ಯನಾರಾಯಣ ವರ್ಮ, ಉಡುಪಿಯ ಜಗದೀಶ ಜಿ.ಕೆ., ಬೆಂಗಳೂರಿನ ತೇಜ ತಮ್ಮಯ್ಯ, ಆಂಧ್ರಪ್ರದೇಶ ಗಚ್ಚಿಬೌಲಿಯ ಪಿಟ್ಟಲ ಶ್ರೀನಿವಾಸ, ಹೈದರಾಬಾದ್‌ನ ಸಾಯಿತೇಜ ಮತ್ತು ಆಂಧ್ರಪ್ರದೇಶದ ಕಾಕಿ ಶ್ರೀನಿವಾಸರಾವ್ ಅವರ ವಿರುದ್ಧ ಎಸ್‌ಐಟಿ ಪ್ರಾಥಮಿಕ ಚಾರ್ಜ್‌ಶೀಟ್ ಸಲ್ಲಿಸಿದೆ.

ಮೈಸೂರು ಮಿತ್ರ ಮಂಗಳವಾರ 6 ಆಗಸ್ಟ್ 2024

ಯಾದಗಿರಿ ಎಸ್‌ಐ ಸಾವಿನ ತನಿಖೆಗೆ ಆಗ್ರಹಿಸಿ ಪ್ರತಿಭಟನೆ



ದಲಿತ ಸಂಘಟನೆಗಳ ಸಮನ್ವಯ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ಆ.5– ಯಾದಗಿರಿ ಎಸ್‌ಐ ಪರಶುರಾಮ್ ಅವರ ಸಾವಿನ ಪ್ರಕರಣವನ್ನು ಉನ್ನತ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ನಗರದ ತಾಲೂಕು ಕಚೇರಿ ಎದುರು ಸೋಮವಾರ ದಲಿತ ಸಂಘಟನೆಗಳ ಸಮನ್ವಯ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ತಾಲೂಕು ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ದಲಿತ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಮಂಜು ಮಾತನಾಡಿ, ಸಂತೆಮರ ಹಳ್ಳಿಯ ದಲಿತ ಯುವಕರ ಜೋಡಿ ಕೊಲೆ, ವಾಲ್ಮೀಕಿ ನಿಗಮದ ಲೆಕ್ಕಾಧಿಕಾರಿ ಚಂದ್ರಶೇಖರ್ ಸಾವು, ಕನಕಪುರದ ದಲಿತ ಯುವಕನ ಕೈ ಕತ್ತರಿಸಿದ ಪ್ರಕರಣ, ಯಾದಗಿರಿ ಎಸ್‌ಐ ಪರಶುರಾಮ್ ಅವರ ಅನುಮಾನಸ್ಪದ ಸಾವಿನ ಪ್ರಕರಣ ಸೇರಿದಂತೆ ಇಂತಹ ಸಾಕಷ್ಟು ದಲಿತ ಅಧಿಕಾರಿಗಳು, ಸಾಹಿತಿಗಳ ಕೊಲೆ ಪ್ರಕರಣ ನಡೆದರೂ ಆರೋಪಿಗಳ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕಾಯ್ದೆ ಜಾರಿಗೊಳಿಸುವಲ್ಲಿ ವಿಫಲವಾಗಿದೆ. ಸಿಎಂ ಸಿದ್ದರಾಮಯ್ಯ ಯಾದಗಿರಿ ಎಸ್‌ಐ ಸಾವಿನ ಪ್ರಕರಣವನ್ನು ಉನ್ನತ ತನಿಖೆ ಮಾಡಿಸಬೇಕು. ಇಲ್ಲದಿದ್ದಲ್ಲಿ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ದಸಂಸ ತಾಲೂಕು ಸಂಚಾಲಕ ಮಹೇಶ್ ಮಾತನಾಡಿ, ಎಸ್‌ಐ ಪರಶುರಾಮ್ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಯಾದಗಿರಿ ಶಾಸಕ ಚನ್ನರೆಡ್ಡಿ ಪಾಟೀಲ್, ಆತನ ಮಗ ಪಂಪನಗೌಡ ಎಂಬುವರನ್ನು ಕೂಡಲೇ ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಬೇಕು. ಚನ್ನರೆಡ್ಡಿ ಪಾಟೀಲ್ ರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಿ ಆತನ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು. ಎಸ್‌ಐ ಪರಶುರಾಮ ಪತ್ನಿ ಶ್ವೇತ ಅವರಿಗೆ ಪೊಲೀಸ್ ಇಲಾಖೆಯಲ್ಲಿ ಕಾಯಂ ಹುದ್ದೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಅಂಬೇಡ್ಕರ್ ಸೇನೆ ರಾಜ್ಯಾಧ್ಯಕ್ಷ ನಾಗೇಂದ್ರ, ಸುರೇಶ್, ನಟರಾಜ, ಮಹದೇವಸ್ವಾಮಿ, ಬೊಕ್ಕಹಳ್ಳಿ ಮಹದೇವಸ್ವಾಮಿ, ಶಿವರಾಜು, ಶಿವಣ್ಣ, ಗಜೇಂದ್ರ, ಮಹೇಶ್, ಸಿದ್ದರಾಜು, ಮಂಜೇಶ್ ಉಪಸ್ಥಿತರಿದ್ದರು

ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂದು ಆರೋಪ

ಹಾಸ್ಟೆಲ್‌ಗಳಿಗೆ ತಹಸೀಲ್ದಾರ್, ಆರೋಗ್ಯಾಧಿಕಾರಿ ಭೇಟಿ, ಪರಿಶೀಲನೆ



ಹಾಸ್ಟೆಲ್‌ಗೆ ತಹಸೀಲ್ದಾರ್ ಶ್ರೀನಿವಾಸ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ಆ.5– ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂಬ ಆರೋಪದ ಹಿನ್ನೆಲೆಯಲ್ಲಿ ಹಾಸ್ಟೆಲ್‌ಗಳಿಗೆ ತಹಸೀಲ್ದಾರ್ ಶ್ರೀನಿವಾಸ್ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪಟ್ಟಣದ ಯಲ್ಲಮ್ಮ ತಾಯಿ ದೇವಸ್ಥಾನ ಬಳಿಯ ಮೆಟ್ರಿಕ್ ನಂತರದ ಪದವಿಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂದು ಪುರಸಭಾ ಸದಸ್ಯ ನಾಗರಾಜ್ ಅವರು ಸುದ್ದಿಗೋಷ್ಠಿ ನಡೆಸಿ ಆರೋಪಿಸಿದ ಹಿನ್ನೆಲೆಯಲ್ಲಿ ಸೋಮವಾರ ಹಾಸ್ಟೆಲ್‌ಗಳಿಗೆ ತಹಸೀಲ್ದಾರ್, ತಾಲೂಕು ಆರೋಗ್ಯಾಧಿಕಾರಿ ಭೇಟಿ ನೀಡಿ ಆಹಾರ ಪರಿಶೀಲಿಸಿದರು.

ಈ ವೇಳೆ ಹಾಸ್ಟೆಲ್‌ನಲ್ಲಿ ನೀಡುತ್ತಿರುವ ಆಹಾರದ ಬಗ್ಗೆ ಮಕ್ಕಳಿಂದ ಸಂಪೂರ್ಣ ಮಾಹಿತಿ ಪಡೆದ ಅವರು ಬಳಿಕ ಅಡುಗೆ ಸಿಬ್ಬಂದಿಯೊಂದಿಗೆ ಚರ್ಚೆ ನಡೆಸಿ ಮಕ್ಕಳಿಗೆ ನಿತ್ಯ ನಿಮ್ಮ ಹಾಸ್ಟೆಲ್‌ನ ಮೆನು ಪ್ರಕಾರ ಗುಣಮಟ್ಟದ ಆಹಾರ ನೀಡಬೇಕು. ಅಲ್ಲದೇ ಮಕ್ಕಳಿಗೆ ಊಟದ ವಿಷಯದಲ್ಲಿ ಯಾವುದೇ ತೊಂದರೆಯಾಗದ ಹಾಗೆ ಅಡುಗೆಯವರು ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು. ವಾರ್ಡನ್‌ಗಳು ನಿತ್ಯ ಸಮಯಕ್ಕೆ ಸರಿಯಾಗಿ ಹಾಸ್ಟೆಲ್‌ಗಳಿಗೆ ಆಗಮಿಸಿ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಲು ಸೂಚಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ ಅವರಿಗೆ ತಹಸೀಲ್ದಾರ್ ಶ್ರೀನಿವಾಸ್ ಸೂಚಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಮಕ್ಕಳಿಗೆ ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂಬ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ಅಡುಗೆ ಮಾಡುವವರು ಅಡುಗೆ ಮಾಡುವ ಸ್ಥಳ ಮತ್ತು ಮಕ್ಕಳಿಗೆ ಊಟ ಬಡಿಸುವ ಸ್ಥಳದಲ್ಲಿ ಶುಚಿತ್ವಕ್ಕೆ ಒತ್ತು ನೀಡಬೇಕು. ಅಡುಗೆ ಸಮಯದಲ್ಲಿ ಗ್ಲೌಸ್ ಬಳಸಬೇಕು. ಮಕ್ಕಳಿಗೆ ಕುಡಿಯಲು ಶುದ್ಧ ಕುಡಿಯುವ ನೀರು ನೀಡಬೇಕು. ಅಡುಗೆಯವರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದ ಅವರು ಮಕ್ಕಳ ಊಟಕ್ಕೆ ಬಳಸುವ ಅಕ್ಕಿ ಸರಿ ಇಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ ಅಕ್ಕಿಯನ್ನು ಪರೀಕ್ಷೆಗೆ ಕಳುಹಿಸಲಾಗುವುದು ಎಂದರು. ಈ ವೇಳೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ಮಹೇಶ್ ಹಾಜರಿದ್ದರು.

‘ನಮಗೆ ಪ್ರತಿದಿನ ಮೆನು ಪ್ರಕಾರ ಊಟ ನೀಡುತ್ತಿಲ್ಲ. ಸಂಜೆ ನಮಗೆ ಸ್ನ್ಯಾಕ್ಸ್ ಕೊಡುತ್ತಿಲ್ಲ. ನಮಗೆ ಮುಖ ನೋಡಿ ಊಟ ಹಾಕುತ್ತಾರೆ. ನಮಗೆ ಅನಾರೋಗ್ಯವಾದರೆ ಆಸ್ಪತ್ರೆಗೆ ಕರೆದೊಯ್ಯಲು ಮುಂದಾಗದೇ ನಮ್ಮ ಬಳಿಯೇ ಹಣ ಕೇಳುತ್ತಾರೆ. ಹಾಸ್ಟೆಲ್‌ಗೆ ವಾರ್ಡನ್ ಸರಿಯಾಗಿ ಬರುವುದಿಲ್ಲ. ಪೋಷಕರು ನಮ್ಮನ್ನು ಇಲ್ಲಿಗೆ ಒಳ್ಳೆಯ ಊಟ, ವಸತಿ ಸಿಗುತ್ತದೆ ಎಂದು ಕಳುಹಿಸುತ್ತಾರೆ. ಆದರೆ, ಇಲ್ಲಿ ಸರಿಯಾದ ಊಟದ ವ್ಯವಸ್ಥೆ ಇಲ್ಲ

- ಐಶ್ವರ್ಯ, ವಿದ್ಯಾರ್ಥಿನಿ.

ಕಾಂಗ್ರೆಸ್ ಸರ್ಕಾರದಿಂದ ಹಿಂದುಳಿದವರ ಅನುದಾನ ಲೂಟಿ

ಮಾಜಿ ಶಾಸಕ ಬಿ.ಹರ್ಷವರ್ಧನ್ ಆರೋಪ



ಬಿಜೆಪಿ ಕಾರ್ಯಕರ್ತರೊಂದಿಗೆ ಹೆಜ್ಜೆ ಹಾಕಿದ ಮಾಜಿ ಶಾಸಕ ಬಿ.ಹರ್ಷವರ್ಧನ್.

ನಂಜನಗೂಡು, ಆ.5– ಪರಿಶಿಷ್ಟ ಜಾತಿ ಮತ್ತು ವರ್ಗದ ಜನರ ಕಲ್ಯಾಣದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ದಲಿತರು, ಶೋಷಿತರು ಹಾಗೂ ಹಿಂದುಳಿದವರ ಅನುದಾನ ಲೂಟಿ ಮಾಡುವ ಮೂಲಕ ಜನರನ್ನು ವಂಚಿಸುತ್ತಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಆರೋಪಿಸಿದರು.

ಬಿಜೆಪಿ ಮತ್ತು ಜೆಡಿಎಸ್‌ನಿಂದ ಆಯೋಜಿಸಿರುವ ಬೆಂಗಳೂರಿನಿಂದ ಮೈಸೂರಿನವರೆಗೆ ಪಾದಯಾತ್ರೆಯಲ್ಲಿ ನಂಜನಗೂಡು ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಜೊತೆಗೂಡಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ವಾಲ್ಮೀಕಿ ನಿಗಮದ ಹಣ ವರ್ಗಾವಣೆ ಹಗರಣ, ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನ ದುರ್ಬಳಕೆ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರದ ನೈಜ ಬಣ್ಣ ಬಯಲಾಗಿದೆ. ಇನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶೇ.50ರ ಅನುಪಾತದಲ್ಲಿ ಪಡೆದುಕೊಂಡಿರುವ ನಿವೇಶನಗಳ ವಿಚಾರದಲ್ಲಿ ಸಾಕಷ್ಟು ಲೋಪಗಳು ಜರುಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಮಂತ್ರಿಗಳೆಲ್ಲಾ ಈಗ ಸಮರ್ಥನೆಗಿಳಿದಿದ್ದರೂ ಜನರು ಮಾತ್ರ ಈ ಹಗರಣದ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿದ್ದಾರೆ. ಆದ್ದರಿಂದ ರಾಜ್ಯಪಾಲರು ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡಿರುವುದು ಸರಿಯಾಗಿದೆ. ಇನ್ನು ಮೈತ್ರಿ ಪಾದಯಾತ್ರೆಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದ್ದು, ಜನರು ಅತ್ಯುತ್ಸಾಹದಿಂದ ಪಾಲ್ಗೊಂಡು ಆಡಳಿತಾರೂಢ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದರು.

ಅನಿಕೇತನ ಪಿಯು ಕಾಲೇಜಲ್ಲಿ ವಿದ್ಯಾರ್ಥಿ ಸಂಘ ಉದ್ಘಾಟನೆ

ವಿದ್ಯಾರ್ಥಿಗಳು ಪುಸ್ತಕ ಪ್ರೇಮಿಗಳಾಗಿ: ಪ್ರಾಂಶುಪಾಲ ಪ್ರಕಾಶ್



ವಿದ್ಯಾರ್ಥಿ ಸಂಘವನ್ನು ಗಣ್ಯರು ಉದ್ಘಾಟಿಸಿದರು.

ಬೆಟ್ಟದಪುರ, ಆ.5– ವಿದ್ಯಾರ್ಥಿಗಳು ಪುಸ್ತಕ ಪ್ರೇಮಿಗಳಾಗಬೇಕು. ಪುಸ್ತಕಗಳು ನಿಮ್ಮ ಸಂಗಾತಿಗಳಾಗಬೇಕು ಎಂದು ಹಾರನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ತಿಳಿಸಿದರು.

ಪಟ್ಟಣದ ಅನಿಕೇತನ ಪಿಯು ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಪುಸ್ತಕ ಪ್ರೇಮಿಯಾದರೆ ಒಂಟಿತನ ಕಾಡುವುದಿಲ್ಲ. ಪುಸ್ತಕದಿಂದ ಹೆಚ್ಚಿನ ಜ್ಞಾನ ಸಂಪಾದಿಸಿಕೊಂಡು ಉತ್ತಮ ಬದುಕು ರೂಪಿಸಿಕೊಳ್ಳಬಹುದು ಎಂದರು.

ಜ್ಞಾನವಿದ್ದರೆ ಯಾವುದೇ ಸಮಸ್ಯೆ ಎದುರಿಸಬಹುದು. ಜ್ಞಾನವೇ ನಿಜವಾದ ಸಂಪತ್ತು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಉಳಿಯಬೇಕಾದರೆ ಜ್ಞಾನದಲ್ಲಿ ಸಬಲರಾಗಬೇಕು. ಜ್ಞಾನವೇ ಶಕ್ತಿ. ವಿದ್ಯಾರ್ಥಿಗಳು ಉತ್ತಮ ಜ್ಞಾನ ಪಡೆದುಕೊಂಡು ಸಮಾಜದಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಜಾನಪದ ಕಲಾವಿದೆ ಅನಿತಾ ತೋಟಪ್ಪಶೆಟ್ಟಿ ಮಾತನಾಡಿ, ನಾಯಕತ್ವ ಸ್ವಯಂ ಪ್ರೇರಣೆಯಿಂದ ಬರಬೇಕು. ಸಾಮಾಜಿಕ ಕಳಕಳಿ ಇದ್ದರೆ ನಾಯಕತ್ವದ ಗುಣ ಬೆಳೆಸಿಕೊಳ್ಳಬಹುದು. ಹಣದ ಹಿಂದೆ ಹೋದರೆ ನಾಯಕರಾಗಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಸಾಮಾಜಿಕ ಜ್ಞಾನ ಬೆಳೆಸಿಕೊಂಡು ಉತ್ತಮ ಪ್ರಜೆಗಳಾಗಿ ಬೆಳೆಯಿರಿ ಎಂದರು.

ಮೈಸೂರು ಡಯಟ್‌ನ ನಿವೃತ್ತ ಉಪನ್ಯಾಸಕ ಆರ್.ಎಸ್.ದೊಡ್ಡಣ್ಣ ಮಾತನಾಡಿ, ವಿದ್ಯಾರ್ಥಿಗಳ ಮುಂದೆ ಬಹಳ ದೊಡ್ಡ ಸಮಸ್ಯೆಗಳಿವೆ. ಅವುಗಳನ್ನು ಎದುರಿಸಲು ಶಿಕ್ಷಕರು ಉತ್ತಮ ಮಾರ್ಗದರ್ಶನ ನೀಡಬೇಕಾಗಿದೆ. ಅವರನ್ನು ಒತ್ತಡದಿಂದ ಹೊರತರಲು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ನೆರವಾಗಲಿದೆ. ಪಾಠ ಪ್ರವಚನಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳ ಕಡೆಗೂ ಗಮನ ಕೊಡಬೇಕು ಎಂದು ತಿಳಿಸಿದರು.

ಇದೇ ವೇಳೆ ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಕಾಲೇಜಿಗೆ 3 ಸಾವಿರ ರೂ.ಗಳ ಚೇರ್‌ಗಳನ್ನು ಕಾಲೇಜಿಗೆ ಕೊಡುಗೆ ನೀಡಿದರು. ನಿವೃತ್ತ ಪ್ರಾಂಶುಪಾಲ ಜಿ.ಟಿ.ನಾಗರಾಜು, ಮಾನವ ಟ್ರಸ್ಟ್ ಅಧ್ಯಕ್ಷ ಅಪ್ಪಣ್ಣ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಐಶ್ವರ್ಯ, ರುಕ್ಮಿಣಿ, ಅರ್ಜುನ್ ಕುಮಾರ್, ಸಂದೇಶ, ಸುಶ್ಮಿತಾ, ಮಂಗಳ, ಸಚಿನ್, ಸೂರ್ಯ, ಧನುಷ್, ಪಲ್ಲವಿ ಅವರಿಗೆ ಉಪನ್ಯಾಸಕ ಆರ್.ಪಿ.ಲೋಕೇಶ್ ಪ್ರತಿಜ್ಞಾವಿಧಿ ಬೋಧಿಸಿದರು. ಕಾಲೇಜಿನ ಕಾರ್ಯದರ್ಶಿ ಸೋಮಣ್ಣ, ಉಪನ್ಯಾಸಕರಾದ ಅಭಿಜಿತ್, ಚೇತನ್, ರಮ್ಯಾ, ಶಿವನಂಜು, ಪೋಷಕರಾದ ಶ್ರೀನಿವಾಸ್ ಹಾಜರಿದ್ದರು.

ಪ್ರತ್ಯೇಕ ಅಪಘಾತ ಪ್ರಕರಣ: ಇಬ್ಬರ ಸಾವು

ತಿ.ನರಸೀಪುರ, ಆ.5– ಪ್ರತ್ಯೇಕ ಅಪಘಾತ ಪ್ರಕರಣದಲ್ಲಿ ಇಬ್ಬರು ಸಾವನ್ನಪ್ಪಿರುವ ಘಟನೆ ಸೋಮವಾರ ಮುಂಜಾನೆ ತಾಲೂಕಿನ ನಾಗಲಗೆರೆ ಹಾಗೂ ಆಲಗೂಡು ಸಮೀಪ ನಡೆದಿದೆ.



ಸತೀಶ್

ನಾಗಲಗೆರೆ: ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ವಾಯು ವಿಹಾರಕ್ಕೆ ತೆರಳಿದ್ದ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಾಗಲಗೆರೆ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಬೂದಹಳ್ಳಿ ಗ್ರಾಮದ ನಿವಾಸಿ ಸುರೇಶ್ ಅವರ ಪುತ್ರ ಎಸ್.ಮನೋಜ್(26) ಸಾವನ್ನಪ್ಪಿದವರು. ಈತ ಸೋಮವಾರ ಬೆಳಗ್ಗೆ ಗ್ರಾಮದ ಜಯರಾಮು ಎಂಬುವರ ಜಮೀನಿನ ಬಳಿಯ ತಿ.ನರಸೀಪುರ– ಮಂಡ್ಯ ಮುಖ್ಯರಸ್ತೆಯಲ್ಲಿ ವಾಯು ವಿಹಾರ ಮಾಡುತ್ತಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮನೋಜ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಧನಂಜಯ ತಿಳಿಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆಲಗೂಡು: ಪಾದಚಾರಿಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಆತ ಸಾವನ್ನಪ್ಪಿರುವ ಘಟನೆ ತಾಲೂಕಿನ ಆಲಗೂಡು ಸಮೀಪ ಸೋಮವಾರ ಬೆಳಗ್ಗೆ ನಡೆದಿದೆ. ಆಲಗೂಡು ಗ್ರಾಮದ ಮಹದೇವಯ್ಯ ಎಂಬುವರ ಪುತ್ರ ಮಹದೇವಸ್ವಾಮಿ ಅಲಿಯಾಸ್ ಸತೀಶ್ ಸಾವನ್ನಪ್ಪಿದವರು. ಈತ ಇಂದು ಬೆಳಗ್ಗೆ 6.15ರಲ್ಲಿ ತಮ್ಮ ಜಮೀನಿಗೆ ತೆರಳಿ ಗ್ರಾಮಕ್ಕೆ ರಸ್ತೆ ಎಡ ಬದಿಯಲ್ಲಿ ನಡೆದುಕೊಂಡು ಬರುವಾಗ ಕೊಳ್ಳೇಗಾಲ ಕಡೆಯಿಂದ ಅತೀ ವೇಗವಾಗಿ ಬಂದ ಸಾರಿಗೆ ಬಸ್(ಕೆಎ.10, ಎಫ್.0485) ಹಿಂದಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಹದೇವಸ್ವಾಮಿಯನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಮಹದೇವಸ್ವಾಮಿ ಸಾವನ್ನಪ್ಪಿದ್ದಾರೆ ಎಂದು ವೈದ್ಯರು ಖಚಿತಪಡಿಸಿದರು. ಈ ಸಂಬಂಧ ಅಶೋಕ್ ಎಂಬಾತ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣ ಠಾಣೆ ಮುಖ್ಯಪೇದೆ ಬಸ್ ಅನ್ನು ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವಿದ್ಯಾರ್ಥಿಗಳು ಸಹಪಠ್ಯದೊಂದಿಗೆ ವಿದ್ಯಾಭ್ಯಾಸ ಮಾಡಿ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹಿರೀಕ್ಯಾತನಹಳ್ಳಿ, ಆ.5– ವಿದ್ಯಾರ್ಥಿಗಳು ಸಹಪಠ್ಯ ಚಟುವಟಿಕೆಗಳೊಂದಿಗೆ ವಿದ್ಯಾಭ್ಯಾಸ ಮಾಡಿದಾಗ ಜ್ಞಾನಾರ್ಜನೆ ಹೆಚ್ಚಾಗುತ್ತದೆ ಎಂದು ಸಿಡಿಸಿ ಉಪಾಧ್ಯಕ್ಷ ಹೊನ್ನಪ್ಪ ರಾವ್ ಕಾಳಿಂಗೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಹುಣಸೂರು ತಾಲೂಕಿನ ಗಾವಡಗೆರೆ ಕರ್ನಾಟಕ ಪಬ್ಲಿಕ್ ಶಾಲೆ, ಪದವಿ ಪೂರ್ವ ಕಾಲೇಜಿನ ಸಹಪಠ್ಯ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಾವು ಕಲಿತ ಶಾಲೆ, ಶಿಕ್ಷಕರನ್ನು ಮರೆಯುವುದರಿಂದ ಯಶಸ್ಸು ಕಾಣಲು ಸಾಧ್ಯವಿಲ್ಲ. ತಂದೆ ತಾಯಿಯನ್ನು ಎಷ್ಟು ಪ್ರೀತಿ ಗೌರವದಿಂದ ಕಾಣುತ್ತೀರೋ ಅಷ್ಟೇ ತಮಗೆ ಪಾಠ ಹೇಳಿದ ಗುರು ವೃಂದವನ್ನು ಗೌರವಿಸಬೇಕು. ಮುಂದೊಂದು ದಿನ ಒಳ್ಳೆಯ ಅಧಿಕಾರಿಗಳಾದರೆ ನೀವು ಓದಿದ ಶಾಲೆಗೆ ಸಹಾಯ ಮಾಡುವುದನ್ನು ಬೆಳೆಸಿಕೊಳ್ಳಬೇಕು ಎಂದರು. ಪ್ರಾಂಶುಪಾಲ ಜನಾರ್ಧನ್ ಮಾತನಾಡಿ, ಕಳೆದ 3 ವರ್ಷದಿಂದ ತಾಲೂಕಿನಲ್ಲಿ ಸರ್ಕಾರಿ ಕಾಲೇಜುಗಳ ಪೈಕಿ ನಮ್ಮ ಶಾಲೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದು, ಉತ್ತಮ ಫಲಿತಾಂಶದಿಂದ ಪಕ್ಕದ ತಾಲೂಕುಗಳಿಂದ ಹೆಚ್ಚಿನ ವಿದ್ಯಾರ್ಥಿಗಳು ಕಾಲೇಜಿಗೆ ದಾಖಲಾಗುತ್ತಿರುವುದು ಸಂತಸದ ವಿಷಯ. ಮುಂದಿನ ದಿನಗಳಲ್ಲಿ ಖಾಸಗಿ ಕಾಲೇಜುಗಳಿಗಿಂತ ಉತ್ತಮ ಫಲಿತಾಂಶ ತರಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಇದೇ ಸಂದರ್ಭ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 17 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಿಡಿಸಿ ಸದಸ್ಯರಾದ ಪತ್ರಕರ್ತ ಸ್ವಾಮಿಗೌಡ, ಶ್ರೀಕಂಠ, ನಾಗರಾಜನಾಯಕ, ಕಾಲೇಜಿನ ಉಪನ್ಯಾಸಕ ಡಾ.ಚಂದ್ರು. ಸಂಗೀತ ಕೆ.ಎನ್. ಜಯರಾಮ್, ಮಂಜುನಾಥ್, ಹರಿಣಿ, ಮಂಜು, ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕ ಕೃಷ್ಣ ಉಪಸ್ಥಿತರಿದ್ದರು.

ಹಿಟ್ನೆಹೆಬ್ಬಾಗಿಲು ಗ್ರಾಪಂಗೆ ಅಧ್ಯಕ್ಷ, ಉಪಾಧ್ಯಕ್ಷೆ ಆಯ್ಕೆ



ಹಿಟ್ನೆಹೆಬ್ಬಾಗಿಲು ಗ್ರಾಪಂ ಅಧ್ಯಕ್ಷರಾಗಿ ಆಯ್ಕೆಯಾದ ರವಿಕುಮಾರ್ ಅವರನ್ನು ಸದಸ್ಯರು, ಗ್ರಾಮದ ಮುಖಂಡರು ಅಭಿನಂದಿಸಿದರು.

ಬೆಟ್ಟದಪುರ, ಆ.5–ಸಮೀಪದ ಹಿಟ್ನೆಹೆಬ್ಬಾಗಿಲು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಹೆಚ್.ಜಿ.ರವಿಕುಮಾರ್, ಉಪಾಧ್ಯಕ್ಷೆಯಾಗಿ ವನಜಾಕ್ಷಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹೆಚ್.ಜಿ.ರವಿಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ವನಜಾಕ್ಷಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಸೋಮಯ್ಯ ಘೋಷಿಸಿದರು. ಕಾಂಗ್ರೆಸ್ ಮುಖಂಡ ಪರಮೇಶ್ ಮಾತನಾಡಿದರು. ಈ ವೇಳೆ ಮುಖಂಡರಾದ ಅನಿಲ್ ಕುಮಾರ್, ವಿಜಯ್ ಕುಮಾರ್, ಮಾಜಿ ಅಧ್ಯಕ್ಷ ರಾಜಶೆಟ್ಟಿ, ಮಹದೇವ್, ಸದಸ್ಯರಾದ ಕಾಮರಾಜು, ವರನಂದಿ, ಅನಿಲ್ ಕುಮಾರ್, ಸುಧಾ, ಮಹದೇವ್, ಸೌಮ್ಯ, ಯಶೋಧಮ್ಮ, ಶಿವಕುಮಾರ್, ಸರೋಜಾ, ಛಾಯಮಣಿ, ಸಾಕಮ್ಮ, ಮಂಜುನಾಯಕ್ ಸೇರಿದಂತೆ ಇನ್ನಿತರರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ ಸಲ್ಲಿಕೆ



ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರೇಡ್–2 ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ತಿ.ನರಸೀಪುರ, ಆ.5– ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯರು ಮನವಿ ಸಲ್ಲಿಸಿದರು.

ತಾಲೂಕು ಆಡಳಿತ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಶಿಕ್ಷಕರು ನಂತರ ತಾಲೂಕು ಕಚೇರಿಗೆ ತೆರಳಿ ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಮನವಿ ಸಲ್ಲಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಕುಪ್ಪ ಪುಟ್ಟಸ್ವಾಮಿ ಮಾತನಾಡಿ, ಎನ್‌ಸಿಟಿಇ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ಶಿಫಾರಸ್ಸುಗಳಿಗೆ ಅನುಕೂಲವಾಗುವಂತೆ ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಿಸಿ ಹೊಸ ವೃಂದ ಹಾಗೂ ವೃಂದ ಬಲ ನಿರ್ಧರಿಸುವ ಕುರಿತು ಸರ್ಕಾರ ವಿಶೇಷ ರಾಜ್ಯ ಪತ್ರ ಹೊರಡಿಸಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದವನ್ನು ಮುಖ್ಯವಾಗಿ ಪ್ರಾಥಮಿಕ ಶಾಲಾ ಶಿಕ್ಷಕರು 1 ರಿಂದ 5ಕ್ಕೆ 1,12,467 ಹಾಗೂ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು 6 ರಿಂದ 8ಕ್ಕೆ 51,781 ಎಂದು ವೃಂದವಾರು ಹುದ್ದೆಗಳನ್ನು ಮಂಜೂರು ಮಾಡಿ ಆದೇಶ ಹೊರಡಿಸಿರುವುದರಿಂದ 2016ಕ್ಕಿಂತ ಮೊದಲು 1 ರಿಂದ 7, 1 ರಿಂದ 8 ವೃಂದಕ್ಕೆ ನೇಮಕಾತಿಯಾದ ಎಲ್ಲಾ ಶಿಕ್ಷಕರು ಪ್ರಾಥಮಿಕ ಶಾಲಾ ಶಿಕ್ಷಕರು 1 ರಿಂದ 5 ಎಂದು ಪರಿಗಣಿಸಿರುವುದರಿಂದ ಶಿಕ್ಷಕರಿಗೆ ತೀವ್ರ ಅನ್ಯಾಯವಾಗಿದೆ. ಶಿಕ್ಷಕರಿಗೆ ಮುಂಬಡ್ತಿ ನೀಡಬೇಕಾದ ಸರ್ಕಾರ ಹಿಂಬಡ್ತಿ ನೀಡಿ ವಂಚನೆ ಮಾಡಿದೆ ಎಂದು ದೂರಿದರು.

1 ರಿಂದ 5ನೇ ತರಗತಿವರೆಗೆ ಪ್ರಾಥಮಿಕ ಶಾಲಾ ಶಿಕ್ಷಕರೆಂದು ಪದನಾಮೀಕರಿಸಿರುವ 2016ಕ್ಕಿಂತ ಮೊದಲು ನೇಮಕವಾದ 1 ರಿಂದ 7 ಹಾಗೂ 1 ರಿಂದ 8 ವೃಂದದ ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ 80 ಸಾವಿರಕ್ಕೂ ಅಧಿಕ ಶಿಕ್ಷಕರು ಪದವಿಯೊಂದಿಗೆ ಬಿ.ಇಡಿ ವಿದ್ಯಾರ್ಹತೆ ಹೊಂದಿದ್ದರೂ ಇವರನ್ನು 6 ರಿಂದ 8ಕ್ಕೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರೆಂದು ಪರಿಗಣಿಸದೇ ಇರುವುದು ದುರದೃಷ್ಟಕರ. ಈ ನಡುವೆ 2016 ರಿಂದ ಇತ್ತೀಚಿಗೆ 6 ರಿಂದ 8 ವೃಂದದ ಶಿಕ್ಷಕರ ಹೆಚ್ಚುವರಿ ಸಮಸ್ಯೆ ಸೃಷ್ಟಿಯಾಗಿತ್ತು. ಅದೇ ರೀತಿ ವರ್ಗಾವಣೆ ಪ್ರಕ್ರಿಯೆಯಲ್ಲೂ ಈ ವೃಂದ ಬಲದ ನಿಗದಿ ಸ್ಥಳಗಳ ಆಯ್ಕೆಯಲ್ಲಿ ಶಿಕ್ಷಕರಿಗೆ ಸಮಸ್ಯೆ ಸೃಷ್ಟಿಯಾಗಿದೆ ಎಂದರು.

ಪಿಹೆಚ್‌ಇ ಶಿಕ್ಷಕರು 1 ರಿಂದ 5ನೇ ತರಗತಿವರೆಗೆ ಮಾತ್ರ ಪಾಠ ಪ್ರವಚನ ಮಾಡಬೇಕು, 6 ರಿಂದ 8ನೇ ತರಗತಿಗೆ ಜಿಪಿಟಿ ಶಿಕ್ಷಕರು ಪಾಠ ಮಾಡಬೇಕೆಂದು ಸಿ ಅಂಡ್ ಆರ್‌ನಲ್ಲಿ ಆದೇಶ ಮಾಡಲಾಗಿದೆ. ಆದರೆ ಈವರೆಗೆ ನಾವೇ ಮುಖ್ಯ ಶಿಕ್ಷಕರಾಗಿ ಎಲ್ಲಾ ವಿಷಯಗಳ ಬೋಧನೆ ಮಾಡಿ ರಾಜ್ಯದೆಲ್ಲೆಡೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಉತ್ತಮ ಫಲಿತಾಂಶ ನೀಡಿ ಭದ್ರ ಬುನಾದಿ ಹಾಕಿಕೊಟ್ಟಿದ್ದೇವೆ. ಆದರೀಗ ಈಗಷ್ಟೇ ಸೇವೆಗೆ ಸೇರಿದ ಶಿಕ್ಷಕ ಬಂಧುಗಳ ಅಧೀನದಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯ ಸೃಷ್ಟಿಯಾಗಿರುವುದು ಶಿಕ್ಷಕರಿಗೆ ಆಗಿರುವ ಘನ ಘೋರ ಅನ್ಯಾಯ ಎಂದು ಕಿಡಿಕಾರಿದರು.

ಹಾಗಾಗಿ ಇದೀಗ ಹೋರಾಟ ಅನಿವಾರ್ಯವಾಗಿದ್ದು, ಆ.12 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಭಾಗವಹಿಸುವಂತೆ ಮನವಿ ಮಾಡಿದರು.

ಸಂಘದ ಅಧ್ಯಕ್ಷ ಟಿ.ಎನ್.ನಾಗೇಂದ್ರ ಮಾತನಾಡಿದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ನಿಕಟಪೂರ್ವ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಜಿಲ್ಲಾ ಸಂಘದ ಉಪಾಧ್ಯಕ್ಷ ಸುಬ್ರಹ್ಮಣ್ಯ, ನೌಕರರ ಸಂಘದ ಉಪಾಧ್ಯಕ್ಷ ಗಜೇಂದ್ರ, ಸಹ ಕಾರ್ಯದರ್ಶಿಗಳಾದ ಸುಬ್ಬಣ್ಣ, ಚಿತ್ರ ವಿಶಾಲಾಕ್ಷಿ, ಸಂಘಟನಾ ಕಾರ್ಯದರ್ಶಿ ಗೌರಮ್ಮಣ್ಣಿ, ಜಿಲ್ಲಾ ಕಾರ್ಯದರ್ಶಿ ಮಲ್ಲಣ್ಣ, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ಬಸವರಾಜು, ಪದವೀಧರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಶಿಕ್ಷಕರಾದ ಸಿದ್ದಲಿಂಗಮ್ಮ, ಟಿ.ಸಿ.ರಾಜೇಶ್, ಚಂದ್ರಶೇಖರ, ಜೆ.ರಾಜು, ನಂದಿನಿ ಇನ್ನಿತರರಿದ್ದರು.

ಕುಶಲಕುಮಾರಿ ನಿಧನ

ತಿ.ನರಸೀಪುರ, ಆ.5– ತಾಲೂಕಿನ ಸುಜ್ಜಲೂರು ಗ್ರಾಮದ ನಿವಾಸಿ ಗುರುಮಲ್ಲಪ್ಪ ಅವರ ಪತ್ನಿ, ಮಾಜಿ ಚೇರ್ಮನ್ ಮರಿಮಲ್ಲಪ್ಪನವರ ಸೊಸೆ ಕುಶಲ ಕುಮಾರಿ(64) ಸೋಮವಾರ ರಾತ್ರಿ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸಿದ್ದರಾಮಯ್ಯರನ್ನು ಸಿಎಂ ಸ್ಥಾನದಿಂದ ಇಳಿಸಲು ಸಂಚು

ಜೆಡಿಎಸ್, ಬಿಜೆಪಿ ವಿರುದ್ಧ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಆಕ್ರೋಶ



ಹುಣಸೂರಲ್ಲಿ ನಡೆದ ಜನಾಂದೋಲನ ಸಮಾವೇಶ ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿದರು.

ಹುಣಸೂರು, ಆ.5– ಬಿಜೆಪಿ, ಜೆಡಿಎಸ್ ನಾಯಕರು ರಾಜ್ಯಪಾಲರ ಮೂಲಕ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಪಾದಯಾತ್ರೆ ಮೂಲಕ ಸಂಚು ರೂಪಿಸುತ್ತಿದ್ದಾರೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ನಡೆದ ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯಪಾಲರು ಯಾವುದೇ ಪಕ್ಷದ ಏಜೆಂಟರಲ್ಲ. ಅವರದು ಇಡೀ ರಾಜ್ಯವನ್ನು ಪಾಲನೆ ಮಾಡಬೇಕಾದ ಜವಾಬ್ದಾರಿಯುತ ಸಾಂವಿಧಾನಿಕ ಹುದ್ದೆ. ವಿಪಕ್ಷಗಳ ಪರ ಕೆಲಸ ಮಾಡಿದರೆ ರಾಜ್ಯಾದ್ಯಂತ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಿದ್ದರಾಮಯ್ಯ 2ನೇ ಬಾರಿ ಮುಖ್ಯಮಂತ್ರಿ ಆಗಿರುವುದನ್ನು ಸಹಿಸದೆ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಜೆಡಿಎಸ್, ಬಿಜೆಪಿಯವರು ಮುಂದಾಗಿದ್ದಾರೆ. ಒಂದು ವೇಳೆ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ರಾಜ್ಯದಲ್ಲಿ ಉಂಟಾಗುವ ಅಶಾಂತಿಗೆ ಬಿಜೆಪಿ, ಜೆಡಿಎಸ್ ನಾಯಕರೇ ಕಾರಣರಾಗುತ್ತಾರೆ ಎಂದರು.

ನೊಂದ, ಶೋಷಿತ ಸಮುದಾಯದ ಎಲ್ಲಾ ವರ್ಗದ ಜನನಾಯಕರಾಗಿರುವ ಸಿದ್ದರಾಮಯ್ಯನವರ ಸರ್ಕಾರ ದೀನ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರ ಪರವಾಗಿದ್ದು, ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಇದನ್ನು ಸಹಿಸದ ವಿಪಕ್ಷಗಳು ಇಲ್ಲಸಲ್ಲದ ಆರೋಪಗಳನ್ನು ಮಾಡಿ ಸರ್ಕಾರವನ್ನು ಬೀಳಿಸಲು ಷಡ್ಯಂತ್ರ ಮಾಡುತ್ತಿವೆ ಎಂದು ಆರೋಪಿಸಿದರು.

ವಿಪಕ್ಷಗಳ ಸಂಚನ್ನು ವಿರೋಧಿಸಿ ಸಿದ್ದರಾಮಯ್ಯನವರ ಕೈ ಬಲ ಪಡಿಸಲು ಆ.9ರಂದು ಮೈಸೂರಿನಲ್ಲಿ ಜನಾಂದೋಲನ ಸಮಾವೇಶ ಹಮ್ಮಿಕೊಂಡಿದ್ದು, ತಾಲೂಕಿನಿಂದ ಹೆಚ್ಚಿನ ಜನರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಟಿ.ವಿ.ನಾರಾಯಣ್, ರಮೇಶ್, ಪ್ರೇಮ್ ಕುಮಾರ್, ಕಾರ್ಯಾಧ್ಯಕ್ಷರಾದ ವಕೀಲ ಪುಟ್ಟರಾಜ್, ಬಸವರಾಜಪ್ಪ, ಮುಖಂಡರಾದ ಕುನ್ನೇಗೌಡ, ಎ.ಪಿ.ಸ್ವಾಮಿ, ಜಯರಾಮ್, ಬಸವರಾಜ್, ಹೆಚ್.ಪಿ.ಅಮರನಾಥ್, ಅಣ್ಣಯ್ಯ ನಾಯ್ಕ, ಸುರೇಶ್, ಬಸವರಾಜಗೌಡ, ರಾಜು, ಶಿವರಾಜೇಗೌಡ, ಟಿ.ಕೃಷ್ಣ, ಅಜ್ಗರ್ ಪಾಷ, ಸ್ವಾಮಿಗೌಡ, ಶಾಂತ, ನೇತ್ರಾವತಿ, ರೇಖಾ, ಕಲ್ಪನ, ಜಯಲಕ್ಷ್ಮಿ, ಕುಮಾರ್, ರಾಘು, ಚಿಕ್ಕಸ್ವಾಮಿ, ಲೋಕೇಶ್, ಸಂತೋಷ್, ನಗರಸಭಾ ಸದಸ್ಯರು ಸೇರಿದಂತೆ ಇತರರಿದ್ದರು.

ಬಿಜೆಪಿ, ಜೆಡಿಎಸ್ ಒತ್ತಡಕ್ಕೆ ಮಣಿದು ರಾಜ್ಯಪಾಲರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ನೋಟಿಸ್

ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಆರೋಪ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಜನಾಂದೋಲನ ಸಭೆಯ ಪೂರ್ವಭಾವಿ ಸಭೆಯಲ್ಲಿ ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಮಾತನಾಡುತ್ತಿರುವುದು.

ಮೈಸೂರು,ಆ.5(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಬಿಜೆಪಿ –ಜೆಡಿಎಸ್ ಒತ್ತಡಕ್ಕೆ ಮಣಿದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿ ಅವಸರದ ನಡೆ ಪ್ರದರ್ಶಿಸಿದ್ದಾರೆ ಎಂದು ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಕಿಡಿಕಾರಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ನಡೆದ ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮುಡಾ ಹಗರಣ ಸೇರಿದಂತೆ ಯಾವುದೇ ಹಗರಣದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿಲ್ಲ, ಯಾವುದೇ ತಪ್ಪನ್ನೂ ಮಾಡಿಲ್ಲ. ಇದು ಬಿಜೆಪಿ ನಾಯಕರಿಗೆ ಗೊತ್ತಿದೆ. ಅವರ ನೈತಿಕತೆ, ಕಳಂಕರಹಿತ ವ್ಯಕ್ತಿತ್ವ ಅಳಿಸಲು ಬಿಜೆಪಿ ನಾಯಕರು ರಾಜ್ಯಪಾಲರನ್ನು ಬಳಸಿಕೊಂಡಿದ್ದಾರೆ. ಸಿದ್ದರಾಮಯ್ಯ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಮುಂದಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲೊಡ್ಡುವ ಕಳಂಕರಹಿತ ನಾಯಕರಾದ ಸಿದ್ದರಾಮಯ್ಯ ಅವರನ್ನು ಹಣಿಯಲು ಬಿಜೆಪಿ ಎಲ್ಲ ರೀತಿಯಿಂದಲೂ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಅವರ ದನಿ ಅಡಗಿಸಲು ಹೋರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಗೆದ್ದ 24 ಗಂಟೆಯೊಳಗೆ ಮೇಕೆದಾಟು ಯೋಜನೆ ಜಾರಿಗೊಳಿಸುವುದಾಗಿ ಹೇಳಿದ್ದರು. ಇದೀಗ ಮೇಕೆದಾಟು ಯೋಜನೆ ಜಾರಿಗೆ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಒಪ್ಪಿಗೆ ಕೊಡಿಸುವಂತೆ ಹೇಳುವ ಮೂಲಕ ಈ ಹಿಂದೆ ಆಡಿದ ಮಾತನ್ನು ಮರೆತಂತೆ ವರ್ತಿಸುತ್ತಿದ್ದಾರೆ ಎಂದರು.

ರಾಜ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರಿಗಳೇ ಹೋರಾಟ ಮಾಡುತ್ತಿದ್ದಾರೆ. ಈ ಹೋರಾಟಕ್ಕೆ ಪ್ರತಿಯಾಗಿ ಆ. 9ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಜನಾಂದೋಲನ ಸಮಾವೇಶ ಯಶಸ್ವಿಗೊಳಿಸಬೇಕು. ಇದು ಕಾಂಗ್ರೆಸ್ ಸರ್ಕಾರದ ಅಳಿವು ಉಳಿವಿನ ಪ್ರಶ್ನೆಯೂ ಆಗಿದೆ. ಬಿಜೆಪಿ– ಜೆಡಿಎಸ್ ವಿರುದ್ಧದ ಹೋರಾಟ ಧರ್ಮಯುದ್ಧವಾಗಿದೆ. ಕಾಂಗ್ರೆಸ್ ಕಾರ್ಯಕರ್ತರು ಸೈನಿಕರಾಗಿ ಹೋರಾಟ ಮಾಡಬೇಕಿದೆ. ಮೈಸೂರು ಸಭೆಗೆ ಕೊಡಗು, ಮಂಡ್ಯ, ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು ಜಿಲ್ಲೆಗಳಿಂದಲೂ ಪಕ್ಷದ ಮುಖಂಡರು, ಕಾರ್ಯಕರ್ತರು ಬರಲಿದ್ದಾರೆ ಎಂದು ಹೇಳಿದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಕಾನೂನಾತ್ಮಕವಾಗಿ ಜಮೀನು ಪಡೆದಿದ್ದರೂ ಬಿಜೆಪಿ, ಜೆಡಿಎಸ್‌ನವರು ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಚಾರಿತ್ರ್ಯ ವಧೆ ಮಾಡಲು ಪಾದಯಾತ್ರೆ ಮಾಡುತ್ತಿದ್ದಾರೆ. ಆ.9ರ ಸಭೆಯಲ್ಲಿ ಕಾಂಗ್ರೆಸ್ ಎಲ್ಲ ಶಾಸಕರು ಪಾಲ್ಗೊಳ್ಳಬೇಕು. ನಗರ ಪ್ರದೇಶದಿಂದ ಹೆಚ್ಚಿನ ಜನರು ಬರಬೇಕು ಎಂದು ಸಲಹೆ ನೀಡಿದರು.

ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಮಾತನಾಡಿ, ಮೈಸೂರಿನ ಜನಾಂದೋಲನ ಸಮಾವೇಶದಲ್ಲಿ 2 ಲಕ್ಷ ಜನರನ್ನು ಸೇರಿಸಿ ಶಕ್ತಿ ಪ್ರದರ್ಶನ ಮಾಡುವ ಮೂಲಕ ಜೆಡಿಎಸ್, ಬಿಜೆಪಿಗೆ ತಕ್ಕ ಪ್ರತ್ಯುತ್ತರ ನೀಡಬೇಕು. ಸಿಎಂ ಸಿದ್ದರಾಮಯ್ಯ ಅವರಿಗೂ ಮುಡಾ ಹಗರಣಕ್ಕೂ ಸಂಬಂಧ ಇಲ್ಲ. ಕೋರ್ಟ್ ಆದೇಶದಂತೆ ಜಮೀನಿಗೆ ಬದಲಿ ನಿವೇಶನ ಕೊಟ್ಟಿದ್ದಾರೆ. ಆದರೆ ಬಿಜೆಪಿ, ಜೆಡಿಎಸ್ ನಾಯಕರು ಸುಳ್ಳನ್ನು ನೂರು ಬಾರಿ ಹೇಳಿ ಸತ್ಯ ಮಾಡಲು ಹೊರಟಿದ್ದು, ಜನರಿಗೆ ಸತ್ಯ ಹೇಳುವ ಕೆಲಸ ಮಾಡಬೇಕು. ಕೇಂದ್ರ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಸಾಮಾನ್ಯ ಜ್ಞಾನ ಇಲ್ಲದಂತೆ ಮಾತಾಡುತ್ತಾರೆ. ದಾಖಲೆ ಇಲ್ಲದೇ ಆರೋಪ ಮಾಡುತ್ತಾರೆ. ಲೋಕಸಭೆ ಅಧಿವೇಶನ ಮುಗಿದ ಬಳಿಕ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಬಹುದು. ಕಾನೂನು ಹೋರಾಟ ಮಾಡೋಣ ಎಂದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಭಾರತಿ ಶಂಕರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಖಂಡರಾದ ಹೆಚ್.ಎ. ವೆಂಕಟೇಶ್, ಹೆಚ್.ವಿ. ರಾಜೀವ್, ಮಾಜಿ ಮೇಯರ್‌ಗಳಾದ ವಿಶ್ವನಾಥ್, ಬಿ.ಕೆ.ಪ್ರಕಾಶ್, ಮೋದಾಮಣಿ, ಬಿ.ಎಲ್. ಭೈರಪ್ಪ, ಪುರುಷೋತ್ತಮ್, ನಾರಾಯಣ, ಪುಷ್ಪಾಲತಾ ಚಿಕ್ಕಣ್ಣ, ಮುಖಂಡರಾದ ಕೆ.ವಿ.ಮಲ್ಲೇಶ್, ಪುರುಷೋತ್ತಮ್, ಶಿವಣ್ಣ, ಜಿ.ಪಂ.ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಪ್ರದೀಪ್ ಕುಮಾರ್, ಈಶ್ವರ್ ಚಕ್ಕಡಿ, ಇಂದಿರಾ, ಶೋಭಾ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಯೋಗಗುರು ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿಯವರ ಸಂಸ್ಮರಣೆ



ಶ್ರೀ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಯೋಗಗುರು ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿಯವರ ಸಂಸ್ಮರಣಾ ಕಾರ್ಯಕ್ರಮ ನಡೆಯಿತು.

ಮೈಸೂರು, ಆ.5(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ಶ್ರೀ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹಿಮಾಲಯ ಪ್ರತಿಷ್ಠಾನದ ವತಿಯಿಂದ ಯೋಗಗುರು ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿಯವರ ಸಂಸ್ಮರಣಾ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಭಾರತ ಪ್ರಮುಖ ಮೂರು ವಿಚಾರಗಳಲ್ಲಿ ವಿಶ್ವ ಪ್ರಸಿದ್ಧಿಯನ್ನು ಪಡೆದಿದೆ. ಅದರಲ್ಲಿ ಯೋಗ ಕೂಡ ಒಂದಾಗಿದ್ದು, ಇಡೀ ವಿಶ್ವವೇ ಯೋಗಾಭ್ಯಾಸವನ್ನು ಅಳವಡಿಸಿಕೊಳ್ಳುತ್ತಿದೆ. ವಿಶ್ವಕ್ಕೆ ಯೋಗ ಪರಿಚಯಿಸಿಕೊಟ್ಟ ಹೆಗ್ಗಳಿಕೆ ಭಾರತದ್ದಾಗಿದೆ ಎಂದರು.

ಯೋಗ ಶಿಕ್ಷಣ ಶಾಲೆಗಳಲ್ಲಿ ಕಡ್ಡಾಯವಾಗಬೇಕು. ಇತ್ತೀಚೆಗೆ ಕೆಲ ಶಾಲೆಗಳಲ್ಲಿ ಯೋಗಾಭ್ಯಾಸ ಹೇಳಿಕೊಡುವ ಪ್ರಯತ್ನ ನಡೆಯುತ್ತಿದ್ದರೂ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಗೆ ಸಹಕರಿಸಬೇಕು. ಯೋಗ ಭಾಗ್ಯ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರಲ್ಲದೆ, ಯೋಗಗುರು ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿಯವರು, ತಮ್ಮಲ್ಲಿನ ರೋಗ ನಿವಾರಣೆಗೆ ಯೋಗಾಭ್ಯಾಸ ಆರಂಭಿಸಿ ಯೋಗಗುರುಗಳಾಗಿ ರೂಪುಗೊಂಡರು. 106 ವರ್ಷಗಳ ಕಾಲ ಲಕ್ಷಾಂತರ ಮಂದಿಗೆ ಯೋಗ ಜ್ಞಾನ ನೀಡಿದ ಯೋಗ ಚೇತನ ಎಂದು ಸ್ಮರಿಸಿದರು.

ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್ ಮಾತನಾಡಿ, ತಮ್ಮ ಸಾಧನೆಯನ್ನು ಎಂದಿಗೂ ಬಿಂಬಿಸಿಕೊಳ್ಳದ ಯೋಗಗುರು ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿಯವರು, ಕಲ್ಪವೃಕ್ಷವಾಗಿ ಮೂರು ಮಿಲಿಯನ್ ಜನರಿಗೆ ಯೋಗ ಹೇಳಿಕೊಟ್ಟಿದ್ದಾರೆ. ಯೋಗದಲ್ಲಿ ಪ್ರಧಾನವಾಗಿರುವ ಅಷ್ಟಾಂಗ ಯೋಗ ಕುರಿತು ತಿಳಿಸಿಕೊಟ್ಟ ಅವರು, ಜಗತ್ತಿಗೆ ಯೋಗವನ್ನು ಪರಿಚಯಿಸಿದರು ಎಂದು ನೆನೆದರು. ಹಿರಿಯ ಕಲಾವಿದೆ ಜಮುನಾ ರಾಣಿ ಮಿರ್ಲೆ, ಶ್ರೀ ಪರಮಹಂಸ ಯೋಗ ಮಹಾವಿದ್ಯಾಲಯದ ಶಿವಪ್ರಕಾಶ್ ಗುರೂಜಿ, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ, ಹಿಮಾಲಯ ಪ್ರತಿಷ್ಠಾನ ಸಂಚಾಲಕ ಎಂ.ವಿ.ನಾಗೇಂದ್ರಬಾಬು, ಚಕ್ರಪಾಣಿ, ಹರ್ಷವರ್ಧನ್ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಅಹ್ವಾನ

ಮೈಸೂರು,ಆ.5– ಮೈಸೂರಿನ ಎನ್.ಮಾಧವರಾವ್ ವೃತ್ತದಲ್ಲಿರುವ ಶ್ರೀ ಕೃಷ್ಣ ರಾಜೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಬ್ಯಾಂಕ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಏರ್ಪಡಿಸಲಾಗಿದೆ.

2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ಬ್ಯಾಂಕ್‌ನಲ್ಲಿ ಅರ್ಜಿ ಪಡೆದು, ದೃಢೀಕೃತ ಅಂಕಪಟ್ಟಿ, ಆಧಾರ್ ಕಾರ್ಡ್ ಪ್ರತಿ, 2 ಭಾವಚಿತ್ರ ಮತ್ತು ಸದಸ್ಯರ ಪಾಸ್‌ಬುಕ್ ನಕಲು ಪ್ರತಿಯೊಂದಿಗೆ ಆ.13ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9880371421 ಅಥವಾ 9844775166ಅನ್ನು ಸಂಪರ್ಕಿಸಬಹುದಾಗಿದೆ.

ಚೆನ್ನಾರೆಡ್ಡಿ ಪಾಟೀಲ್ ಶಾಸಕ ಸ್ಥಾನ ಅನರ್ಹಕ್ಕೆ ಆಗ್ರಹಿಸಿ ಡಿಎಸ್‌ಎಸ್ ಪ್ರತಿಭಟನೆ



ಸಬ್ ಇನ್ಸ್‌ಪೆಕ್ಟರ್ ಪರಶುರಾಮ್ ಸಾವಿಗೆ ಕಾರಣವಾಗಿರುವ ಶಾಸಕ ಚೆನ್ನಾರೆಡ್ಡಿ ಪಾಟೀಲ್ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಆ.5(ಎಂಟಿವೈ)– ಸಬ್ ಇನ್ಸ್‌ಪೆಕ್ಟರ್ ಪರಶುರಾಮ್ ಸಾವಿಗೆ ಕಾರಣವಾಗಿರುವ ಶಾಸಕ ಚೆನ್ನಾರೆಡ್ಡಿ ಪಾಟೀಲ್ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಿ, ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 7 ತಿಂಗಳ ಹಿಂದಷ್ಟೇ ಯಾದಗಿರಿ ನಗರ ಪೊಲೀಸ್ ಠಾಣೆಗೆ ಪಿಎಸ್‌ಐ ಪರಶುರಾಮ್ ವರ್ಗಾವಣೆಯಾಗಿದ್ದರು. ಅದೇ ಸ್ಥಾನದಲ್ಲಿ ಮುಂದುವರಿಯಲು 30 ಲಕ್ಷ ರೂ. ಬೇಡಿಕೆ ಇಟ್ಟು ಶಾಸಕ ಚೆನ್ನಾರೆಡ್ಡಿ ಪಾಟೀಲ್ ಮತ್ತು ಆತನ ಮಗ ಸನ್ನಿಗೌಡ ಮಾನಸಿಕವಾಗಿ ಹಿಂಸಿಸಿ, ಅವಮಾನಿಸಿ, ಖಿನ್ನತೆಗೊಳಗಾಗುವಂತೆ ಮಾಡಿದ್ದರು. ಇದು ಪರಶುರಾಮ್ ಸಾವಿಗೆ ಕಾರಣವಾಗಿದೆ ಎಂದು ಅವರ ಪತ್ನಿ ಎನ್.ವಿ.ಶ್ವೇತಾ ತಮ್ಮ ದೂರು ಸಲ್ಲಿಸಿದ್ದು, ಈ ದುರ್ಘಟನೆಯಿಂದ ನಾಗರಿಕ ಸಮಾಜವು ತಲೆತಗ್ಗಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಚೋರನಹಳ್ಳಿ ಶಿವಣ್ಣ ಮಾತನಾಡಿ, ಈ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು. ಶಾಸಕ ಚೆನ್ನಾರೆಡ್ಡಿ ಪಾಟೀಲ್, ಅವರ ಪುತ್ರ ಸನ್ನಿಗೌಡ ವಿರುದ್ಧ ಕಾನೂನು ಕ್ರಮ ಜರುಗಿಸಿ ಶಾಸಕರ ಆಸ್ತಿ ಮುಟ್ಟುಗೋಲು ಹಾಕಿ ಮೃತ ಅಧಿಕಾರಿಯ ಕುಟುಂಬಕ್ಕೆ ಹಸ್ತಾಂತರಿಸಬೇಕು. ಮೃತ ಅಧಿಕಾರಿ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಿ 50 ಲಕ್ಷ ರೂ.ಪರಿಹಾರ ನೀಡಬೇಕು. ಎಲ್ಲ ಇಲಾಖೆಗಳಲ್ಲೂ ಕೌನ್ಸೆಲಿಂಗ್ ಮೂಲಕವೇ ವರ್ಗಾವಣೆ ನೀತಿ ಜಾರಿ ಮಾಡಬೇಕು. ಈ ಮೂಲಕ ವರ್ಗಾವಣೆಯಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ತಡೆಗಟ್ಟುವ ಕಾಯ್ದೆ ರೂಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿಯ ಸದಸ್ಯರಾದ ಮರಿಸ್ವಾಮಿ, ಮನೋಜ್, ಪ್ರಭಾಕರ್, ಅಣ್ಣಯ್ಯ ಇನ್ನಿತರರು ಇದ್ದರು.

ಬೆಂಗಳೂರು ಸಿಸಿಬಿ ಇನ್ಸ್‌ಪೆಕ್ಟರ್ ತಿಮ್ಮೇಗೌಡರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆ!



ಬಿಡದಿ, ಆ.5– ಯಾದಗಿರಿ ಸಬ್‌ಇನ್ಸ್‌ಪೆಕ್ಟರ್ ಪರಶುರಾಮ್ ಅವರ ಸಾವಿನ ಬೆನ್ನಲ್ಲೆ ಬೆಂಗಳೂರಿನ ಸಿಸಿಬಿ ಆರ್ಥಿಕ ಅಪರಾಧ ವಿಭಾಗದ ಪೊಲೀಸ್ ಇನ್ಸ್‌ಪೆಕ್ಟರ್ ತಿಮ್ಮೇಗೌಡ ಅವರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾರೆ.

ಕಳೆದ ಆರು ತಿಂಗಳ ಹಿಂದಷ್ಟೇ ಸಿಸಿಬಿಗೆ ವರ್ಗಾವಣೆಯಾಗಿ ಬಂದಿದ್ದ ತಿಮ್ಮೇಗೌಡ ಹೈಪ್ರೊಫೈಲ್ ವಂಚನೆ ಪ್ರಕರಣದ ತನಿಖಾಧಿಕಾರಿಯಾಗಿದ್ದರು ಎಂದು ಹೇಳಲಾಗಿದೆ. ಸೋಮವಾರ ಬೆಳಗ್ಗೆ ಕುಂಬಳಗೋಡು ಸಮೀಪದ ತಗಚಕುಪ್ಪೆ ಗ್ರಾಮದ ಖಾಸಗಿ ನಿವೇಶನದಲ್ಲಿರುವ ಮರವೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ಇಂದು ಬೆಳಗ್ಗೆ ಪತ್ತೆಯಾಗಿದೆ.

ಶವವನ್ನು ನೋಡಿದ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ನಂತರ ಸ್ಥಳಕ್ಕೆ ಆಗಮಿಸಿದ ಸ್ಥಳೀಯ ಪೊಲೀಸರು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿರುವುದು ಇನ್ಸ್‌ಪೆಕ್ಟರ್ ತಿಮ್ಮೇಗೌಡರು ಎಂಬುದನ್ನು ಗುರುತಿಸಿದ್ದಾರೆ. ಅವರ ಕುಟುಂಬಸ್ಥರಿಗೂ ಮಾಹಿತಿ ನೀಡಿ, ಸ್ಥಳಕ್ಕೆ ಕರೆಸಿಕೊಂಡಿದ್ದಾರೆ. ರಾಮನಗರ ಎಸ್ಪಿ ಕಾರ್ತಿಕ್ ರೆಡ್ಡಿ ಸ್ಥಳಕ್ಕೆ ಭೇಟಿ ನೀಡಿದ್ದರು. ತಿಮ್ಮೇಗೌಡರು ಆತ್ಮಹತ್ಯೆ ಮಾಡಿಕೊಳ್ಳುವ ಮನಃಸ್ಥಿತಿಯವರಲ್ಲ. ಬಹಳ ಧೈರ್ಯವಂತರು. ಹಲವಾರು ಕಠಿಣವಾದ ಕೇಸ್‌ಗಳನ್ನು ನಿಭಾಯಿಸಿದ್ದಾರೆ. ಅವರನ್ನು ಯಾರಾದರೂ ಹತ್ಯೆ ಮಾಡಿರಬಹುದೇ ಎಂಬ ಸಂಶಯವಿದೆ ಎಂದು ಸುದ್ದಿಗಾರರಿಗೆ ತಿಳಿಸಿದ ತಿಮ್ಮೇಗೌಡರ ಪತ್ನಿ, ಕಳೆದ 15 ದಿನದಿಂದ ತಮ್ಮ ಪತಿ ಸರಿಯಾಗಿ ಮಾತನಾಡುತ್ತಿರಲಿಲ್ಲ. ಯಾವುದೋ ಕೇಸ್‌ನಲ್ಲಿ ಬಿಸಿಯಾಗಿರುವುದಾಗಿ ಹೇಳುತ್ತಿದ್ದರು ಎಂದು ಮಾಹಿತಿ ನೀಡಿದ್ದಾರೆ.

ತಿಮ್ಮೇಗೌಡರ ಶವವನ್ನು ಸಾಗಿಸುತ್ತಿದ್ದ ಆಂಬುಲೆನ್ಸ್ ಸಂಚಾರಕ್ಕೆ ಅಡ್ಡಿಪಡಿಸಿ, ಅವರ ಕುಟುಂಬಸ್ಥರು ಪ್ರತಿಭಟನೆ ನಡೆಸಿದರು. ತಿಮ್ಮೇಗೌಡರನ್ನು ಹತ್ಯೆ ಮಾಡಲಾಗಿದೆ ಎಂದು ಅವರು ಆರೋಪಿಸುತ್ತಿದ್ದದ್ದು ಕೇಳಿಬಂತು. ಕೆಲ ವರ್ಷದ ಹಿಂದೆ ತಿಮ್ಮೇಗೌಡರ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗಿತ್ತು. ಆ ಪ್ರಕರಣದ ಸಂತ್ರಸ್ತೆಗೆ ಮಗು ಜನಿಸಿದ್ದು, ಆ ಸಂಬಂಧ ಡಿಎನ್‌ಎ ಪರೀಕ್ಷೆ ಕೂಡ ನಡೆದಿತ್ತು. ಈ ಪ್ರಕರಣದ ವಿಚಾರಣೆ ಕೋರ್ಟ್‌ನಲ್ಲಿ ಆ.31ಕ್ಕೆ ನಡೆಯಲಿತ್ತು ಎಂಬ ಮಾಹಿತಿ ದೊರೆತಿದೆ. ತಿಮ್ಮೇಗೌಡರು ಯಾವುದೇ ರೀತಿಯ ಡೆತ್‌ನೋಟ್ ಬರೆದಿರುವ ಬಗ್ಗೆ ಮಾಹಿತಿ ಇಲ್ಲ. ಇವರು ಅತ್ತಿಬೆಲೆಯಲ್ಲಿ ಕೆಲಸ ಮಾಡುತ್ತಿದ್ದಾಗಲೂ ಅಮಾನತುಗೊಂಡಿದ್ದರು. ಗೌಡರು ಮೈಸೂರಿನ ಜಯಲಕ್ಷ್ಮೀಪುರಂ ಹಾಗೂ ಹೆಬ್ಬಾಳು ಠಾಣೆಯ ಇನ್ಸ್‌ಪೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದರು. ಈ ಸಂಬಂಧ ಕಗ್ಗಲೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪೇಚಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಔರಾನ್ ಮೇ ಕಹಾನ್ ದಮ್ ಥಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಲ್ಕಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫ್ಯಾಮಿಲಿ ಡ್ರಾಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಬೋಟ್ (ತ)	4 ಪ್ರದರ್ಶನಗಳು
ಸಂಗಂ	
ಪೇಚಿ (ತ)	4 ಪ್ರದರ್ಶನಗಳು
ಲಿಡೋ	
ಹೆಬ್ಬುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೇಚಿ (ತ)	4 ಪ್ರದರ್ಶನಗಳು
ಪ್ರಭಾ	
ಅಡವಿಕಟ್ಟೆ (ಕ)	2 ಪ್ರದರ್ಶನಗಳು
ಇಷ್ಕ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರಾಯನ್ (ತ): ಬೆ.10.40ಕ್ಕೆ, ಮ.1.30ಕ್ಕೆ, ರಾ.10ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಮರ್ಝಿ ಪಿಡಿಕಥಾ ಮನಿಥನ್ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಬೆ.10.25ಕ್ಕೆ.
ಸ್ಕ್ರೀನ್ 3	ಇಷ್ಕ್ (ಕ): ಬೆ.10.45ಕ್ಕೆ, ಹೆಬ್ಬುಲಿ (ಕ): ಮ.1.40ಕ್ಕೆ, ಬಡ್ಡಿ (ತೆ): ಸಂ.4.30ಕ್ಕೆ, ಶಿವಂ ಭಜೆ (ತೆ): ರಾ.7.20ಕ್ಕೆ, ರೂಪಾಂತರ (ಕ): ರಾ.9.55ಕ್ಕೆ
ಸ್ಕ್ರೀನ್ 4	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.45ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುಡಾ ಹಗರಣ: ನ್ಯಾಯಾಂಗ ತನಿಖೆಗೆ ಸಹಕರಿಸುವಂತೆ ಸಿಬ್ಬಂದಿಗೆ ಮುಡಾ ಆಯುಕ್ತರ ಆದೇಶ

ಮೈಸೂರು, ಆ.5(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತ ನ್ಯಾಯಾಂಗ ವಿಚಾರಣೆಗೆ ಮುಡಾ ಅಧಿಕಾರಿ, ಸಿಬ್ಬಂದಿಗಳು ಸಹಕಾರ ನೀಡುವಂತೆ ಮುಡಾ ಆಯುಕ್ತ ಎ.ಎನ್.ರಘುನಂದನ್ ಆದೇಶಿಸಿದ್ದಾರೆ.

ಮುಡಾದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು ನ್ಯಾಯಾಂಗ ವಿಚಾರಣೆ ನಡೆಸಲು ಏಕ ಸದಸ್ಯ ವಿಚಾರಣಾ ಆಯೋಗವನ್ನು ರಚಿಸಲಾಗಿದೆ. ವಿಚಾರಣೆ ಪೂರ್ಣಗೊಳಿಸುವವರೆಗೂ ಆಯೋಗವು ಕಾಲಕಾಲಕ್ಕೆ ತನಿಖೆಗಾಗಿ ಅಪೇಕ್ಷಿಸುವ ಎಲ್ಲಾ ಕಡತಗಳು, ದಾಖಲಾತಿ ಇತ್ಯಾದಿಗಳನ್ನು ವಿಳಂಬವಿಲ್ಲದೆ ಒದಗಿಸತಕ್ಕದ್ದು ಹಾಗೂ ಸ್ಥಳ ತನಿಖೆ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಖುದ್ದು ಹಾಜರಿದ್ದು ವಿಚಾರಣಾ ಆಯೋಗದೊಂದಿಗೆ ಸಂಪೂರ್ಣವಾಗಿ ಸಹಕರಿಸಲು ಸೂಚಿಸಿದ್ದಾರೆ. ಆಯೋಗವು ಅಪೇಕ್ಷಿಸುವ ಮಾಹಿತಿಯನ್ನು ಸಕಾಲದಲ್ಲಿ ಒದಗಿಸದೇ ವಿಚಾರಣಾ ಪ್ರಕ್ರಿಯೆ ವಿಳಂಬವಾಗಲು ಅಥವಾ ವಿಚಾರಣಾ ಪ್ರಕ್ರಿಯೆಗೆ ಅಡಚಣೆ ಉಂಟು ಮಾಡುವ ಯಾವುದೇ ರೀತಿಯ ನಿರ್ಲಕ್ಷ್ಯತೆ ವಹಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿ, ನೌಕರರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದೆಂದು ಆದೇಶದಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	123.14 ಅಡಿ
ಒಳಹರಿವು	34029 ಕ್ಯೂಸೆಕ್
ಹೊರಹರಿವು	34773 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಸೋಮವಾರ	2282.35 ಅಡಿ
ಒಳಹರಿವು	12225 ಕ್ಯೂಸೆಕ್
ಹೊರಹರಿವು	5000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2854.55 ಅಡಿ
ಒಳಹರಿವು	5171 ಕ್ಯೂಸೆಕ್
ಹೊರಹರಿವು	6000 ಕ್ಯೂಸೆಕ್

‘ನಮ್ಮ ಮೈಸೂರು–ನಮ್ಮ ಕೊಡುಗೆ’ ಉದ್ಯಾನವನಗಳ ಅಭಿವೃದ್ಧಿಗೆ ಸಂಘ–ಸಂಸ್ಥೆಗಳ ಸಹಕಾರ ಕೋರಿದ ಪಾಲಿಕೆ





ಪಾಲಿಕೆ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಯಾಗದ 234 ಪಾರ್ಕ್‌ಗಳಿದ್ದು, ಅವುಗಳ ಅಭಿವೃದ್ಧಿಗಾಗಿ ಖಾಸಗಿ ಸಂಘ–ಸಂಸ್ಥೆಗಳ ಸಹಕಾರ ಕೋರಲಾಗಿದೆ. ಈಗಾಗಲೇ ಕೆಲ ಖಾಸಗಿ ಸಂಸ್ಥೆಗಳು ಮುಂದೆ ಬಂದಿವೆ. ಪಾರ್ಕ್‌ಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಖಾಸಗಿ ಸಹಭಾಗಿತ್ವ ಅನಿವಾರ್ಯವಾಗಿದೆ. ಮೈಸೂರನ್ನು ಇನ್ನಷ್ಟು ಸುಂದರ ನಗರವನ್ನಾಗಿಲು ಖಾಸಗಿ ಸಂಘ–ಸಂಸ್ಥೆಗಳು ಪಾಲಿಕೆಯೊಂದಿಗೆ ಕೈಜೋಡಿಸಬೇಕು.

– **ಪಿ.ಕೆ.ಮೋಹನ್ ಕುಮಾರ್,** ಸಹಾಯಕ ಕಾರ್ಯಪಾಲಕ ಇಂಜಿನಿಯರ್, ತೋಟಗಾರಿಕೆ ವಿಭಾಗ, ನಗರಪಾಲಿಕೆ

ಮೈಸೂರು, ಆ.5(ಎಂಕೆ)– ಮೈಸೂರು ನಗರದಲ್ಲಿರುವ ಉದ್ಯಾನವನಗಳ ಅಭಿವೃದ್ಧಿಗೆ ಮುಂದಾಗಿರುವ ಮೈಸೂರು ಮಹಾನಗರ ಪಾಲಿಕೆ, ಸಿಎಸ್‌ಆರ್ ಚಟುವಟಿಕೆ ಅಥವಾ ದತ್ತು ಯೋಜನೆ ಮೂಲಕ ‘ನಮ್ಮ ಮೈಸೂರು–ನಮ್ಮ ಕೊಡುಗೆ’ ಶೀರ್ಷಿಕೆಯಡಿ ಸಂಘ–ಸಂಸ್ಥೆಗಳು ಹಾಗೂ ಖಾಸಗಿ ವ್ಯಕ್ತಿಗಳ ಸಹಕಾರ ಕೋರಿದೆ.

ಪಾಲಿಕೆ ವ್ಯಾಪ್ತಿಯ 65 ವಾರ್ಡ್‌ಗಳಲ್ಲಿ ಅಭಿವೃದ್ಧಿಯಾಗದ 234 ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ, ನಿರ್ವಹಣೆ ಮೂಲಕ ಉದ್ಯಾನವನಗಳನ್ನು ಸೌಂದರ್ಯೀಕರಣಗೊಳಿಸಲು ಪಾಲಿಕೆಯೊಂದಿಗೆ ಆಸಕ್ತ ಸಂಘ–ಸಂಸ್ಥೆಗಳು, ಖಾಸಗಿ ವ್ಯಕ್ತಿಗಳು ಸಹಕರಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಪಾಲಿಕೆ ವ್ಯಾಪ್ತಿಯಲ್ಲಿರುವ 529 ಪಾರ್ಕ್‌ಗಳಲ್ಲಿ ಅಭಿವೃದ್ಧಿಯಾಗದ 234 ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡುವ ಉದ್ದೇಶದಿಂದ ಖಾಸಗಿ ಸಹಭಾಗಿತ್ವ ಕೋರಲಾಗಿದ್ದು ಈ ಮೂಲಕ ಮೈಸೂರಿನ ಸೌಂದರ್ಯ ಹೆಚ್ಚಿಸಲು ಕೈಜೋಡಿಸುವಂತೆ ಕೆಲ ಷರತ್ತುಗಳೊಂದಿಗೆ ಮನವಿ ಮಾಡಲಾಗಿದೆ.

ಷರತ್ತುಗಳು: ಸಿಎಸ್‌ಆರ್ ಚಟುವಟಿಕೆ ಅಡಿಯಲ್ಲಿ ಅಭಿವೃದ್ಧಿ ಹಾಗೂ ನಿರ್ವಹಣೆಗೆ ನೀಡುವ ಉದ್ಯಾನವನಗಳನ್ನು ತಮ್ಮ ಸ್ವಂತ ಖರ್ಚಿನಿಂದ ನಗರಪಾಲಿಕೆಯ ತೋಟಗಾರಿಕೆ ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ಅನುಮತಿಯೊಂದಿಗೆ ಅಭಿವೃದ್ಧಿಪಡಿಸಿ, ನಿರ್ವಹಣೆ ಮಾಡುವುದು. ಇದಕ್ಕಾಗಿ ನಗರಪಾಲಿಕೆ ವತಿಯಿಂದ ಯಾವುದೇ ಹಣಕಾಸಿನ ಸಹಾಯ ನೀಡಲಾಗುವುದಿಲ್ಲ.

ಪರಭಾರೆ ಮಾಡಬಾರದು, ಯಾವುದೇ ರೀತಿಯ ಖಾಯಂ ಕಟ್ಟಡ ನಿರ್ಮಿಸಬಾರದು, ಅನುಮತಿ ಇಲ್ಲದೆ ಯಾವುದೇ ಖಾಸಗೀ ಕಾರ್ಯಕ್ರಮ ಹಾಗೂ ಸಭೆ ಸಮಾರಂಭಗಳಿಗೆ ನೀಡಬಾರದು, ಪಾರ್ಕ್ ಸೌಂದರ್ಯಕ್ಕೆ ಧಕ್ಕೆ ಆಗುವಂತಹ ಯಾವುದೇ ರೀತಿಯ ಮಾರ್ಪಾಡು ಮಾಡಬಾರದು, ಯಾವುದೇ ರೀತಿಯ ಹೆಸರನ್ನು ಇಡಬಾರದು ಮತ್ತು ಇರುವ ಹೆಸರನ್ನು ಯಾವ ಕಾರಣಕ್ಕೂ ಬದಲಾಯಿಸಬಾರದು ಎಂಬಿತ್ಯಾದಿ ಷರತ್ತುಗಳೊಂದಿಗೆ ಉದ್ಯಾನವನಗಳಲ್ಲಿ ನಾಮಫಲಕ ಅಳವಡಿಕೆ, ನಿರ್ವಹಣೆ, ಕಸ ವಿಲೇವಾರಿ ಕುರಿತು ಕೆಲ ಸೂಚನೆಗಳನ್ನು ನೀಡಲಾಗಿದೆ ಎಂದು ನಗರಪಾಲಿಕೆ ತೋಟಗಾರಿಕೆ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಿ.ಕೆ.ಮೋಹನ್ ಕುಮಾರ್ ತಿಳಿಸಿದ್ದಾರೆ.




ಮೈಸೂರು ವಿಶ್ವವಿದ್ಯಾನಿಲಯ
ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮಾನಸಗಂಗೋತ್ರಿ, ಮೈಸೂರು
ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್ (ರಿ.), ಮೈಸೂರು
ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನ (ರಿ.), ಮೈಸೂರು
ಸಮಾನತೆ ಪ್ರಕಾಶನ (ರಿ.), ಮೈಸೂರು
ಇವರ ಸಹಯೋಗದಲ್ಲಿ



ಸ್ವಾಭಿಮಾನಿ ಶ್ರೀ ವಿ.ಶ್ರೀನಿವಾಸಪ್ರಸಾದ್ ಅವರ 77ನೇಯ ಜನ್ಮದಿನಾಚರಣೆ



ವಿಚಾರ ಮಂಥನ

ವಿ.ಶ್ರೀನಿವಾಸಪ್ರಸಾದ್
ವ್ಯಕ್ತಿತ್ವ ಮತ್ತು ಹೋರಾಟ

ದಿನಾಂಕ : 06-08-2024ನೇ ಮಂಗಳವಾರ | ಸಮಯ : ಬೆಳಿಗ್ಗೆ 10.30ಕ್ಕೆ

ಸಮ್ಮುಖ
ಗೌರವಾನ್ವಿತ ಡಾ.ಕಲ್ಯಾಣಸಿರಿ ಭಂತೇಜಿ
ವಿಶ್ವಮೈತ್ರಿ ಬುದ್ಧ ವಿಹಾರ, ಮೈಸೂರು



ಅಧ್ಯಕ್ಷತೆ
ಕೆ.ಆರ್. ರಮೇಶ್ ಕುಮಾರ್
ಮಾಜಿ ವಿಧಾನಸಭಾಧ್ಯಕ್ಷರು



ಉದ್ಘಾಟನೆ
ಡಾ.ಹೆಚ್.ಸಿ.ಮಹಾದೇವಪ್ಪ
ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ



ವಿಚಾರ ಮಂಡನೆ :- ವಿ.ಶ್ರೀನಿವಾಸಪ್ರಸಾದ್ : ವ್ಯಕ್ತಿತ್ವ
ಶ್ರೀ ರವೀಂದ್ರ ಭಟ್ಟ
ಕಾರ್ಯನಿರ್ವಾಹಕ ಸಂಪಾದಕರು, ಪ್ರಜಾವಾಣಿ, ಬೆಂಗಳೂರು



ವಿ. ಶ್ರೀನಿವಾಸಪ್ರಸಾದ್ : ಹೋರಾಟದ ನೆಲೆಗಳು
ಡಾ. ಬಂಜಗೆರೆ ಜಯಪ್ರಕಾಶ್ ಸಂಸ್ಕೃತಿ ಚಿಂತಕರು



ಶ್ರೀ ವಿ.ಶ್ರೀನಿವಾಸಪ್ರಸಾದ್ ಅವರು ಸ್ಥಾಪಿಸಿದ ಸಂಸ್ಥೆಗಳು

ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್ (ರಿ.), ಮೈಸೂರು	ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನ (ರಿ.), ಮೈಸೂರು		ಸಮಾನತೆ ಪ್ರಕಾಶನ (ರಿ.), ಮೈಸೂರು
ಶ್ರೀಮತಿ ಭಾಗ್ಯಲಕ್ಷ್ಮೀ ಶ್ರೀನಿವಾಸಪ್ರಸಾದ್ ಅಧ್ಯಕ್ಷರು	ಡಾ. ನೀಲಗಿರಿ ತಳವಾರ ಗೌರವಾಧ್ಯಕ್ಷರು	ಶ್ರೀ ಭರತ್ ರಾಮಸ್ವಾಮಿ ಖಜಾಂಚಿ	ಶ್ರೀ ಭರತ್ ರಾಮಸ್ವಾಮಿ ಪ್ರಕಾಶಕರು
ಶ್ರೀಮತಿ ಪ್ರತಿಮಾ ಪ್ರಸಾದ್ ಸಂಚಾಲಕರು ಹಾಗೂ ಖಜಾಂಚಿ	ಪ್ರೊ.ಸಿ.ಬಸವರಾಜು ಅಧ್ಯಕ್ಷರು	ಶ್ರೀ ಡಿ.ವೆಂಕಟರಾಜು ಟ್ರಸ್ಟಿ	
ಶ್ರೀ ಪಿ.ನಂದಕುಮಾರ್ ಉಪಾಧ್ಯಕ್ಷರು	ಶ್ರೀ ಪಿ. ನಂದಕುಮಾರ್ ಉಪಾಧ್ಯಕ್ಷರು	ಶ್ರೀ ಸಿ.ಜಿ.ಶಿವಕುಮಾರ್ ಟ್ರಸ್ಟಿ	
ಶ್ರೀ ಭರತ್ ರಾಮಸ್ವಾಮಿ ಕಾರ್ಯದರ್ಶಿ	ಪ್ರೊ. ಎಂ.ಆರ್. ಗಂಗಾಧರ್ ಸಂಚಾಲಕರು	ಶ್ರೀ ಕುಂಬ್ರಳ್ಳಿ ಸುಬ್ಬಣ್ಣ ಟ್ರಸ್ಟಿ	
ಶ್ರೀ ಸಿಎ. ಗಿರೀಶ್ ಸಂಘಟನಾ ಕಾರ್ಯದರ್ಶಿ	ಡಾ. ಮುಳ್ಳೂರು ನಂಜುಂಡಸ್ವಾಮಿ ಕಾರ್ಯದರ್ಶಿ	ಶ್ರೀ ಶಾಂತರಾಮ ಶೆಟ್ಟಿ ಟ್ರಸ್ಟಿ	
	ಡಾ. ಎಲ್. ರಾಜಶೇಖರಯ್ಯ ಸಂಘಟನಾ ಕಾರ್ಯದರ್ಶಿ		

> ಶೋಷಿತರು ತಮ್ಮ ಬಾಹ್ಯ ಶತ್ರುಗಳ ವಿರುದ್ಧದ ಹೋರಾಟದ ಜೊತೆಗೆ ಕುಡಿತ, ಅನಕ್ಷರತೆ ಹಾಗೂ ಅತೀ ಸಂತಾನಗಳೆಂಬ ಶತ್ರುಗಳ ವಿರುದ್ಧ ಹೋರಾಟ ಮಾಡಲು ಸದಾ ಜಾಗೃತರಾಗಿರಬೇಕು.
>
> - ವಿ.ಶ್ರೀನಿವಾಸಪ್ರಸಾದ್

ಪ್ರೊ. ಜೆ.ಸೋಮಶೇಖರ್ ನಿರ್ದೇಶಕರು,
ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ಸಂಶೋಧನ ಕೇಂದ್ರದ ಬೋಧಕರು, ಬೋಧಕೇತರರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು
ಹಾಗೂ ವಿ.ಶ್ರೀನಿವಾಸಪ್ರಸಾದ್ ಅವರ ಅಭಿಮಾನಿಗಳು ಮತ್ತು ಹಿತೈಷಿಗಳು

ಸ್ಥಳ : ವಿಶ್ವಜ್ಞಾನಿ ಸಭಾಂಗಣ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೊತ್ರಿ, ಮೈಸೂರು

ಎಲ್ಲರಿಗೂ ಪ್ರೀತಿಯ ಸ್ವಾಗತ